**PLEASE RETURN TO:** ______________________________ **PHONE:** ______________

# ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ©

# ಯಾತ್ರೆ
# ಹಂತ 1

***v*1.0 (2018)** *Journey Stage 1 Travel Journal and Tools - Kannada*

# ದಿನಚರಿ ಯಾತ್ರೆ ಮತ್ತು ಸಾಧನ


***Strategic Impact***

*P.O. Box 1901, Denton, TX 76202*

*www.StrategicImpactInternational.com*



© Copyright, Strategic Impact. No changes may be made to this manual, but you may freely copy and distribute without making changes to content.

# ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ©

# ಯಾತ್ರೆ - ಹಂತ *1*

## ದಿನಚರಿ ಯಾತ್ರೆ ಮತ್ತು ಸಾಧನ

# ಪರಿವಿಡಿ


**ಯಾತ್ರೆ ನಕ್ಷೆ** **3**

**ದಿನಚರಿ ಯಾತ್ರೆ** **4**

ದಿನಚರಿ ಯಾತ್ರೆ 1 - ನಮ್ಮ ಮೊದಲಿನ ಪ್ರೀತಿ *5*
ದಿನಚರಿ ಯಾತ್ರೆ 2 - ನಮ್ಮ ಮೊದಲಿನ ಪ್ರಾಮುಖ್ಯತೆ *6*
ದಿನಚರಿ ಯಾತ್ರೆ 3 - ದೇವರೊಂದಿಗೆ ಏಕಾಂತ ಸಮಯ *7*
ದಿನಚರಿ ಯಾತ್ರೆ 4 - ಪ್ರಾರ್ಥನೆ ಪ್ರತಿಯೊಬ್ಬರಿಗೆ ಅವಶ್ಯ *8*
ದಿನಚರಿ ಯಾತ್ರೆ 5 - ಯೇಸುವಿನ ಪ್ರಭುತ್ವ *9*
ದಿನಚರಿ ಯಾತ್ರೆ 6 - ಸ್ಪಷ್ಟವಾದ ಸುವಾರ್ತೆಯ ಸಲುವಾಗಿ ಸಾದಾರಣಾ ಸಂದೇಶವನ್ನು ತಾಯಾರಿಸು *10*
ದಿನಚರಿ ಯಾತ್ರೆ 7 - ಪಾಪದ ಅರಿಕೆ ಮತ್ತು ಇತರರೊಂದಿಗೆ ಸಹವಾಸ *11*
ದಿನಚರಿ ಯಾತ್ರೆ 8 - ಬೇರೆಯವರನ್ನು ಶಿಷ್ಯರಾಗಿ ಮಾಡಲು ಬೇಕಾದ ಅವಶ್ಯಕತೆಗಳು *13*
ದಿನಚರಿ ಯಾತ್ರೆ 9 - ಪವಿತ್ರಾತ್ಮದೊಂದಿಗೆ ಸರಿಯಾದ ಸಂಭಂದ *15*
ದಿನಚರಿ ಯಾತ್ರೆ 10 - ಪರಿಪಕ್ವ ಮತ್ತು ಗುಣಿಕರಿಸುವ ಶಿಷ್ಯರನ್ನಾಗಿ ತಯಾರಿಸುವುದು *16*
ದಿನಚರಿ ಯಾತ್ರೆ 11 - ದೇವರಿಂದ ಕೇಳಲ್ಪಡುವುದು *18*
ದಿನಚರಿ ಯಾತ್ರೆ 12 - ಹೊಸ ಸೆಲ್ ಚರ್ಚಗಾಗಿ ಒಂದು ಸೈಟನ್ನು ಆಯ್ಕೆಮಾಡಿ *19*
ದಿನಚರಿ ಯಾತ್ರೆ 13 - ಸತ್ಯವೇದದ ಅಡಿಪಾಯ *20*
ದಿನಚರಿ ಯಾತ್ರೆ 14 - ಸಭೆಯ ಸ್ವರೂಪ ಮತ್ತು ರಚನೆ *21*

**ಸಾಧನ ಯಾತ್ರೆ** **24**

ಸಾಧನ ಯಾತ್ರೆ 1 - ಯುದ್ಧೋಪಾಯದ ಪ್ರಾರ್ಥನಾ ಮಾರ್ಗದರ್ಶಿ *25*
ಸಾಧನ ಯಾತ್ರೆ 2 - ಯುದ್ಧೋಪಾಯದ ಪ್ರಭಾವದ ಸುವಾರ್ತೀಕರಣ ಸಾಧನವನ್ನು ಹೇಗೆ ಬಳಸುವುದು *26*
ಸಾಧನ ಯಾತ್ರೆ 3 - ಯುದ್ಧೋಪಾಯ ಪ್ರಭಾವದ ಸುವಾರ್ತೀಕರಣದ ಸಾಧನವನ್ನು ಬಳಸುವುದು ಹೇಗೆ *29*
ಸಾಧನ ಯಾತ್ರೆ 4 - ಸೇವೆಯ ನಕ್ಷೆ *31*
ಸಾಧನ ಯಾತ್ರೆ 5 - ಹೊಸ ಸೆಲ್ ಸಭೆಯನ್ನು ಪ್ರಾರಂಬಿಸಲಿಕ್ಕೆ ಸ್ಥಳವನ್ನು ಆಯ್ಕೆಮಾಡಲು ಬೇಕಾದ ಪ್ರಾಯೋಗಿಕ ಮಾರ್ಗ ಸೂಚಿಗಳು *33*
ಸಾಧನ ಯಾತ್ರೆ 6 - ನೀವು ಸೆಲ್ ಸಭೆಗೆ ಕೂಡುವಾಗ ಏನು ಮಾಡಬೇಕು *35*

ನಂಬಿಕೆಯ ಅರಿಕೆ *36-37*

# ನಿಮ್ಮ ಪ್ರದೇಶವನ್ನು ತಲುಪಲು ಏಸ್ ಐ ಜೀವನ ಪರ್ಯಂತರ ಯಾತ್ರೆ

| ಹಂತ | ಯಾರು | ಗಮ್ಯಸ್ಥಾನ | ತರಬೇತಿ / ಸಾಮಗ್ರಿ | ಅವಧಿ |
|---|---|---|---|---|
| **1** ನಿಮ್ಮ ಜೀವನ ಪರ್ಯಂತರ ಅನೇಕರನ್ನು ಶಿಷ್ಯರನ್ನಾಗಿ ತಯಾರಿಸುವುದು ಮತ್ತು ಅವರನ್ನು ಪರಿಕ್ವತೆಗೊಳಿಸುವುದು. | ಎಲ್ಲಾ ಕ್ರೈಸ್ತರನ್ನು | ಕ್ರಮಾನುಸಾರವಾಗಿ ನೀವು ಶಿಷ್ಯರನ್ನಾಗಿ ತಯಾರಿಸುವುದು, ಅದೇ ಶಿಷ್ಯರು ಮುಂದಿನ ನಾಲ್ಕನೆ ಪೀಳಿಗೆಯನ್ನು ಗುಣಿಕರೀಸುವುದು. | ಸಾಮನ್ಯ ನಾಯಕತ್ವದ ಕೈ ಪಿಡಿ, 1 ನೇ ಯಾತ್ರಾ ನಕ್ಷೆ, ಯಾತ್ರಾ ಕೈ ಪಿಡಿ, ಸೇವಾ ಸಾಮಗ್ರಿಗಳು. | 4 ರಿಂದ 6 ತಿಂಗಳ ತರಭೇತಿ/ ಮತ್ತು ಜೀವನ ಪರ್ಯಂತರ ಗುಣಿಕರಿಸಲ್ಪಡುವ ರೀತಿಯಾಗಿ ಶಿಷ್ಯರಗಳನ್ನು ತಯಾರಿಸುವುದು. |
| **2** ನಿಮ್ಮ ಜೀವನ ಪರ್ಯಂತರ ಚಿಕ್ಕ ಸಭೆಗಳನ್ನು ಸ್ಥಾಪಿಸಿ ಅವುಗಳನ್ನು ಅಭಿವೃದ್ದಿ ಪಡಿಸುವುದು | ಅನೇಕ ಕ್ರೈಸ್ತರನ್ನು | ಕ್ರಮಾನುಸಾರವಾಗಿ ನೀವು ಸಭೆಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸುವುದು , ಅದೇ ಸಭೆ ಸ್ಥಾಪನ ಮುಂದಿನ ನಾಲ್ಕನೆ ಪೀಳಿಗೆಯನ್ನು ಗುಣಿಕರೀಸುವುದು. | ಸೇವಾ ಮನೋಭಾವ ಹೊಂದಿದ ನಾಯಕತ್ವದ ಕೈಪಿಡಿ. ೨ ನೇ ಯಾತ್ರಾ ನಕ್ಷೆ, ಯಾತ್ರಾ ಕೈ ಪಿಡಿ, ಸೇವಾ ಸಾಮಗ್ರಿಗಳು. | 4 ರಿಂದ 6 ತಿಂಗಳ ತರಭೇತಿ/ ಮತ್ತು ಜೀವನ ಪರ್ಯಂತರವಾಗಿ ಗುಣಿಕರೀಸಲ್ಪಡುವ ರೀತಿಯಾಗಿ ಶಿಷ್ಯರುಗಳನ್ನು ತಯಾರಿಸುವುದು. ಹಾಗೂ ಅನೇಕ ಸ್ಥಾನಿಯ ಸಭೆಗಳನ್ನು ಸ್ಥಾಪನೆ ಗೊಳಿಸುವುದು. |
| **3** ನಿನ್ನ ಜೀವನ ಪರ್ಯಂತರವಾಗಿ ಸಭೆ ಸ್ಥಾಪನೆ ಮಾಡುವ ನಾಯಕರನ್ನು ತರಭೇತಿಗೊಳಿಸುವುದು . | ಕೆಲವು ಸಭಾ ಸ್ಥಾಪನಾಗಾರರನ್ನು | ಕಾಲ ಕ್ರಮೇಣವಾಗಿ ಸಭಾ ಸ್ಥಾಪನ ನಾಯಕರನ್ನು ಗುರುತಿಸಿ ಅವರು ನಾಲ್ಕನೆ ಪೀಳಿಗೆಯನ್ನು ಗುಣಿಕರಿಸುವ ಹಾಗೆ ಅವರನ್ನು ತರಭೇತಿಗೊಳಿಸುವುದು. | ವಿವಾಹ ನಾಯಕತ್ವದ ಕೈಪಿಡಿ. ಯಾತ್ರೆ ನಕ್ಷೆ 3, ಯಾತ್ರಾ ಕೈ ಪಿಡಿ, ಸೇವಾ ಸಾಮಗ್ರಿಗಳು, ಮತ್ತು ಹೊಸ ನಾಯಾಕರಿಗೆ ಯಾತ್ರಾ ೧ | 4 ರಿಂದ 6 ತಿಂಗಳ ತರಭೇತಿ/ಮತ್ತು ಜೀವನ ಪರ್ಯಂತರವಾಗಿ ಗುಣಿಕರಿಸಲ್ಪಡುವ ರೀತಿಯಾಗಿ ಶಿಷ್ಯರಗಳನ್ನು ತಯಾರಿಸುವುದು. ಹಾಗೂ ಅನೇಕ ಸ್ಥಾನಿಯ ಸಭೆಗಳನ್ನು ಸ್ಥಾಪನೆ ಮಾಡಿ ಅದರ ನಾಯಕರನ್ನು ತರಭೇತಿ ಗೊಳಿಸುವುದು. |
| **4** ನಿನ್ನ ಜೀವನ ಪರ್ಯಂತರವಾಗಿ ಇತರ ಪ್ರದೇಶಗಳಲ್ಲಿ ಗುಣಿಕರಿಸಲ್ಪಡುವ ಒಂದು ತಂಡವನ್ನು ಗುರುತಿಸಿ ತಯಾರುಗೊಳಿಸುವದು | ಸ್ಥಳಿಯ ಕೆಲಸಗಳನ್ನು ಕಾರ್ಯಗತ ಗೊಳಿಸುವ ಕೆಲವು ನಾಯಕರ ತಂಡ. | ಕಾಲ ಕ್ರಮೇಣವಾಗಿ ಅನೇಕ ತಂಡಗಳನ್ನು ನಾನಾ ಪ್ರದೇಶಗಳಿಗಾಗಿ (ಉದಾ: ಪಟ್ಟಣ, ಹಳ್ಳಿ, ಗ್ರಾಮ)ತಯಾರಿಸುವುದು. | ವಿಶ್ವವ್ಯಾಪ ನಾಯಕತ್ವದ ಕೈಪಿಡಿ, ಯತ್ರಾ ನಕ್ಷೆ ೪, ಯಾತ್ರಾ ಕೈ ಪಿಡಿ, ಸೇವಾ ಸಾಮಗ್ರಿಗಳು, ಹೊಸ ನಾಯಕ ಯಾತ್ರಾ ೨, ವಾರ್ಷಿಕ ನಾಯಕರ ಉಜ್ಜೀವನ ಸಭಾ. | 4 ರಿಂದ 6 ತಿಂಗಳ ತರಭೇತಿ/ ಜೀವನ ಪರ್ಯಂತರವಾಗಿ ನಾಲ್ಕನೆಯ ಪೀಳಿಗೆಗಾಗಿ, ಅನೇಕ ಸಭೆಗಳನ್ನು ಸ್ಥಾಪಿಸಿ, ಹಾಗೂ ಶಿಷ್ಯರನ್ನು ನಾಯಕರನ್ನು ಗುಣಿಕರಿಸುವುದು |
| **5** ಜೀವನ ಪರ್ಯಂತರವಾಗಿ ಗುಣಾಕಾರ ಚಲನೆಗಳನ್ನು ಪ್ರಾರಂಭಿಸಲು ಮತ್ತು ಮುನ್ನಡೆಸಲು. | ಪ್ರಾದೇಶಿಕ ಕಾರ್ಯತಂತ್ರದ ಪ್ರಭಾವವನ್ನುಂಟು ಮಾಡುವ ಹೆಚ್ಚಿನ ಸಾಮರ್ಥವುಳ್ಳ ಚಲನೆಗಾರರನ್ನು ಆಯ್ಕೆಮಾಡುವುದು. | ಹೊಸ ದೇಶಗಳಲ್ಲಿ ಮತ್ತು ಪ್ರದೇಶಗಳಲ್ಲಿ ಅನೇಕ ಸಭೆ ಸ್ಥಾಪನೆ ಚಲನೆಗಳನ್ನು ಕಾಲ ಕ್ರಮೇಣವಾಗಿ ಪ್ರಾರಂಭಿಸಿ. | ಯಾತ್ರಾ ನಕ್ಷೆ ೫, ಯಾತ್ರಾ ಕೈ ಪಿಡಿ, ಸೇವಾ ಸಾಮಗ್ರಿಗಳು, ತಿಂಗಳಿನ ತಂಡ, ನಿಲ್ಲು ,ಮತ್ತು ವಿರಾಮ, ವಾರ್ಷಿಕ ಪ್ರಾದೇಶಿಕ ನಾಯಕರ ಉಜ್ಜೀವನ ಸಭಾ. | 4 ರಿಂದ 6 ತಿಂಗಳ ತರಭೇತಿ/ ಜೀವನ ಪರ್ಯಂತರವಾಗಿ ಹೊಸ ಚಲನೆಗಳನ್ನು ದೇಶವಿದೇಶಗಳಲ್ಲಿ ಗುಣೀಕರಿಸುವುದು. ಈ ಪ್ರತಿಯೊಂದು ಭಾಗವು ದೇವರ ಮಹಾ ಅಜ್ಞೆಯನ್ನು ಪೂರೈಸಲು ಹಾಗೂ ಸತತವಾಗಿ ಮುಂದಿನ ನಾಲ್ಕನೆಯ ಪೀಳಿಗೆಗೆ ತರಭೇತಿ ಗೊಳಿಸುವುದು ಆಗಿದೆ. |

**ಈ ಪ್ರತಿಯೊಂದು ಭಾಗವು ದೇವರ ಮಹಾ ಅಜ್ಞೆಯನ್ನು ಪೂರೈಸಲು ಹಾಗೂ ಸತತವಾಗಿ ಮುಂದಿನ ನಾಲ್ಕನೆಯ ಪೀಳಿಗೆಗೆ ತರಭೇತಿ ಗೊಳಿಸುವುದು ಆಗಿದೆ.**

STRATEGIC IMPACT INTERNATIONAL

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ©

## ಯಾತ್ರೆ - ಹಂತ 1

# ದಿನಚರಿ ಯಾತ್ರೆ

STRATEGIC IMPACT INTERNATIONAL

***Strategic Impact***
*P.O. Box 1901, Denton, TX 76202*
*www.StrategicImpactInternational.com*
© Copyright, Strategic Impact. No changes may be made to this manual, but you may freely copy and distribute without making changes to content.

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *1:* ನಮ್ಮ ಮೊದಲಿನ ಪ್ರೀತಿ

ಯೇಸು ಕ್ರಿಸ್ತನು ನಮ್ಮಿಂದ ಏನನ್ನು ಬಯಸುತ್ತಾನೆ ಅನ್ನುವುದನ್ನು ಮತ್ತಾಯ 22:37-39 ರಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ( ಬೈಬಲ್)-ಎಲ್ಲಾ ವಿಷಯಗಳಿಗಿಂತ ಹೆಚ್ಚಾಗಿ ದೇವರನ್ನು ಪ್ರೀತಿಸುವುದು ಆತನ ಇಷ್ಟವಾಗಿದೆ. ಅತ್ಯುನ್ನದ ಹಾಗೂ ನಿತ್ಯನಾದ ದೇವರು ನಿಮ್ಮೊಂದಿಗೆ ಪ್ರೀತಿಯ ಬಾಂಧವ್ಯ ಇಟ್ಟುಕೊಳ್ಳಲು ಬಯಸುತ್ತಾನೆ, ಎಷ್ಟು ಅದ್ಭುತಕರ.

ಇಸ್ರಾಯೇಲ್ಯರ ಧಾರ್ಮಿಕ ಕಾರ್ಯಗಳು ಹಾಗೂ ಅವರು ಮಾಡುವ ಬಲಿದಾನ ವಿಷಯದಲ್ಲಿ ದೇವರಿಗೆ ನೋವು ಇರಲಿಲ್ಲ; ಆದರೆ ದೇವರನ್ನು ಪ್ರೀತಿಸಿ ಆರಾಧಿಸುವ ಬದಲಾಗಿ ಇವುಗಳನ್ನು ಮಾಡುತ್ತಿದ್ದರು. *(ನೋಡಿರಿ. ಕೀರ್ತನೆ 40:6-8 ; 50:7-17)* ಎಂದರೆ ಅವರ ಮೂರ್ತಿ ಪೂಜೆಗಳು ಮತ್ತು ಆತನಿಗೆ ಸಲ್ಲಿಸಬೇಕಾದ ಘನ ಗೌರವ ಇತರ ವಿಷಯಗಳಿಗೆ ಸಲ್ಲಿಸಿದ್ದರಿಂದ ದೇವರಿಗೆ ಕೋಪ ಬಂದಿದೆ *(ಯೆಹೆಜ್ಕೇಲ 6:9).*

ಪ್ರಕಟಣೆ 2 :1-7 ರಲ್ಲಿ ಯೇಸು ಕ್ರಿಸ್ತನು ಎಫೆಸ ಸಭೆಯ ತಾಳ್ಮೆ ಪ್ರಯಾಸ ಕೃತ್ಯ ದೃಢ ವಿಶ್ವಾಸ ಹಾಗೂ ಕರ್ತನಲ್ಲಿ ಪಡುವ ಶ್ರಮದ ಕುರಿತು ಅಭಿನಂದಿಸುತ್ತಾ ಇದ್ದಾನೆ ಅದಾಗ್ಯೂ ಅದರ ಮೇಲೆ ಒಂದು ತಪ್ಪು ಹೊರಿಸುತ್ತಾ ಇದ್ದಾನೆ ಅದೇನೆಂದರೆ ಈ ಸಭೆಯು ತಾನು ಮೊದಲು ತನಗಿದ್ದಪ್ರೀತಿ ಬಿಟ್ಟು ಬಿಟ್ಟಿತು ಎಂದು.
ಅದಕ್ಕಾಗಿ ಅವರಿಗೆ ಪಶ್ಚಾತ್ತಾಪ ಪಟ್ಟು ಎಲ್ಲಿಂದ ಬಿದ್ದಿದಿಯೂ ಅಲ್ಲಿಂದ ಎಚ್ಚೆತ್ತು ಮೊದಲಿನ ಪ್ರೀತಿಯನ್ನು ಹೊಂದಿಕೋ ಇಲ್ಲವಾದರೆ ನಾನು ನಿಮ್ಮ ಮದ್ಯದಲ್ಲಿ ಬಂದು ದೀಪಸ್ಥಂಬವನ್ನು ಅದರ ಸ್ಥಳದಿಂದ ತಗೆದು ಹಾಕುವೆನು ಎಂದು ಎಚ್ಚರಿಸುತ್ತಾ ಇದ್ದಾನೆ. *(ವಚನ 5 ಪ್ರಕ 1:20)*

ಅ ಸಭೆಗೂ ಹಾಗೂ ನಮಗೂ ಕರ್ತನು ಹೇಳುವುದು ಏನೆಂದರೆ, ಪ್ರೀತಿ ಇಲ್ಲದ ಸಭೆ ಇಲ್ಲದಿದ್ದರೂ ಪರವಾಗಿಲ್ಲಾ. ಎಂಬುದೆ.ದೇವರನ್ನು ಪ್ರೀತಿಸುವುದರ ಬದಲಾಗಿ ಇನ್ನೇನಾದರು ಪ್ರಿತಿಸುವುದಾದರೆ ನಾವು ಸಹ ಇಂಥಹ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ.ಅನೇಕ ಸಾರಿ ಜನರು ಹೆಸರು ಬಿರುದು ಸ್ಥಾನ ಹಣ ಅಸ್ತಿ ಅಂತಸ್ತಿಗಾಗಿ ತವಕಿಸುತ್ತಾರೆ, ಇದು ಈಗಿನ ಸಭೆಗಳಲ್ಲಿಯೂ ಸಹ ಇದೆ.

*(ಕೀರ್ತನೆ 40:6-8)* ಅತನಿಗೆ ಸೇವೆ ಸಲ್ಲಿಸುವದಕ್ಕಿಂತ ಹೆಚ್ಚಾಗಿ ಆತನೊಂದಿಗೆ ಸಂಭಂದ ಇಡಲು ಬಯಿತ್ತಾ ಇದ್ದಾನೆ. ಕ್ರೈಸ್ತಿಯ ಜೀವನದಲ್ಲಿ ಆತನೊಂದಿಗೆ ಪ್ರೀತಿಯ ಬಾಂದವ್ಯದಲ್ಲಿ ಬೆಳೆಯುವುದೆ ಎಲ್ಲಾ ಕಾರ್ಯಾನುಕೂಲಗಳಿಗೆ ಮೂಲವಾಗಿದೆ.ಇತರ ಎಲ್ಲಾ ಉದ್ದೇಶಗಳು ನಮಗೆ ಅಸಫಲತೆಯನ್ನು ತಂದು ಕೊಡುತ್ತವೆ,

ದೇವರೊಂದಿಗಿನ ಪ್ರೀತಿಯು ಇತರರೊಂದಿಗೆ ಪ್ರೀತಿಯ ಬಾಳು ಬಾಳಲು ಸಹಾಯಕವಾಗುತ್ತದೆ. ಮತ್ತು ಕಷ್ಟ ನಷ್ಟ ಹಾಗೂ ನಿರಾಸೆಗಳಲ್ಲು ಸ್ಫೂರ್ತಿಯನ್ನು ಕೊಡುವಂತದ್ದಾಗಿದೆ.
ಮತ್ತು ಈ ಪ್ರೀತಿಯು ಅನ್ಯರಿಗೆ ಸುವಾರ್ತೆ ತಲುಪಿಸಲು ಸಹ ಸಹಾಯಕಗೊಳ್ಳುತ್ತದೆ.
ಮತ್ತು ಈ ಪ್ರೀತಿಯು ದೇವರು ಕೊಟ್ಟ ಮಹಾ ಆಜ್ಞೆಯನ್ನು ಪೂರೈಸಲು ಉತ್ತೇಜಿಸುವಂತಾದ್ದಾಗಿದೆ.
ಮತ್ತು ದೇವರೊಂದಿಗಿನ ಪ್ರೀತಿಯು ಎಲ್ಲಾ ಶ್ರಮೆ ಬಾದೆಗಳನ್ನು ಸಹಿಸಲು ಸಹಾಯಕಗೊಳ್ಳುತ್ತದೆ. ಯೇಸು ಹೇಳಿದ್ದಾನೆ ಒಂದುವೇಳೆ ನೀವು ನನ್ನನ್ನು ಪ್ರಿತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ ಅಂದನು. *(ಯೋಹಾನ 14 :15)* ಪ್ರೀತಿ ಎಲ್ಲಿದಿಯೋ ಅಲ್ಲಿ ವಿದೇಯತೆ ಉಂಟು.

**<u>ಮೂಲ ಸತ್ಯತೆ</u>*:* ಕರ್ತನಾದ ಯೇಸುವನ್ನು ಮಾತ್ರ ಪ್ರೀತಿಸಿ ಅನುಸರಿಸುವಂತೆ ದೇವರು ಬಯಸುವವನಾಗಿದ್ದಾನೆ.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *2:* ನಮ್ಮ ಮೊದಲಿನ ಪ್ರಾಮುಖ್ಯತೆ

ಘನತೆಯು ಅನ್ನುವುದು ಅನೇಕ ಪಾಸ್ಟರಗಳಲ್ಲಿ ಹಾಗೂ ಅನೇಕ ಸಭೆಯ ನಾಯಕರಲ್ಲಿ ಇವೆ. ಆದರೆ, ತಪ್ಪಾದ ಅಭಿಪ್ರಾಯಗಳನ್ನು ಪಾಲಿಸುವಂತದ್ದು ಹೆಚ್ಚಿನ ಸಂಖ್ಯೆಯಲ್ಲಿ ನಾವು ನೋಡುತ್ತೇವೆ. ಅದೇನೆಂದರೆ ಪ್ರಖ್ಯಾತ ಸಭೆಯನ್ನು ಕಟ್ಟಬೇಕು ಎಂಬುದೆ, ಪ್ರಖ್ಯಾತ ಸಭೆ ಅಂದರೆ ಒಂದು ಸಭೆಯಲ್ಲಿ ಸಾವಿರಾರು ಜನಸೇರುವುದು, ಮತ್ತು ಹೆಸರು ವಾಸಿಯಾಗುವ ಬಯಕೆ ಮತ್ತು ದೊಡ್ಡ ದೊಡ್ಡ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಹೆಚ್ಚಿನ ಹಣದ ಬಜೆಟ್ ಇಡುವುದು, ಮತ್ತು ಘನ ಗೌರವ ಪಡೆಯುವಂಥದ್ದು, ಇಂಥಾ ಪ್ರಖ್ಯಾತ ಸಭೆಯು ದೇವರ ದೃಷ್ಟಿಯಲ್ಲಿ ಘನವುಳ್ಳದ್ದು ಆಗಬಹುದು ಅಥವಾ ಆಗದೆ ಇರಬಹುದು. ಹೇಗೆ ಇರಲಿ ಯೇಸು ಕ್ರಿಸ್ತನು ನಮ್ಮನ್ನು ಎಂದಿಗೂ ಪ್ರಖ್ಯಾತ ವುಳ್ಳ ಸಭೆಯನ್ನು ಹೊಸಒಡಂಬಡಿಕೆಯಲ್ಲಿ ಕಟ್ಟುವುದಕ್ಕಾಗಿ ಎಂದು ಕರೆಯಲಿಲ್ಲಾ ಹಾಗೂ ಎಲ್ಲಿಯೂ ನಮಗೆ ಅಂಥಹ ಮಹಾನ ಅಪ್ಪಣೆ ಕೊಡಲಿಲ್ಲ ಅಥವಾ ಸ್ಥಾಪನೆ ಮಾಡುಲೂ ಹೇಳಲಿಲ್ಲ, ವಿಶೇಷತೆ ಏನೆಂದರೆ ಜನಸಂಖ್ಯೆ, ಹಾಗೂ ಕಾರ್ಯಕ್ರಮಗಳು ಮತ್ತು ಕಟ್ಟಡಗಳೂ ಅನ್ನುವುದೆ ಸಭೆ ಅಲ್ಲಾ. ಆದರೆ ದೇವರ ಮುಖ್ಯ ಉದ್ದೇಶವನ್ನು ಪೂರೈಸುತ್ತಾ ಇದೆಯಾ ಅಥವಾ ಇಲ್ಲವೋ ಅನ್ನುವಂಥದ್ದೆ ಸಭೆಗೆ ಬಹಳ ಪ್ರಾಮುಖ್ಯ.

ಯೇಸು ಇಂಥಹ ಪ್ರಖ್ಯಾತ ಸಭೆಯನ್ನು ಕಟ್ಟಲು ನಮ್ಮನ್ನು ಕರೆದಿಲ್ಲಾ ಅದರೆ. ನಾವು ಮಾಡುವುದೇನು? ಯೇಸು ಸ್ಪಷ್ಟವಾಗಿ ತನ್ನ ಆಜ್ಞೆಯಲ್ಲಿ, ಹೋಗಿರಿ ಎಲ್ಲರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ ಅಂದನು. *(ಮತ್ತಾಯ 28:19)* ನಮ್ಮ ಪ್ರಾಮುಖ್ಯತೆಯ ಕೆಲಸವೇನೆಂದರೆ, ಸುವಾರ್ತೆಯನ್ನು ನಮ್ಮ ನೆರೆಯವರಿಗೆ, ಹಳ್ಳಿಗಳಿಗೆ, ಪಟ್ಟಣಗಳಿಗೆ, ಹಾಗೂ ದೇಶಗಳಿಗೆ ತೆಗೆದುಕೊಂಡು ಹೋಗಿ ಅವರನ್ನು ಶಿಷ್ಯರನ್ನಾಗಿ ಮಾಡುವುದು, ಆ ಶಿಷ್ಯರು ಇನ್ನು ಅನೇಕ ಶಿಷ್ಯರನ್ನು ತಯಾರು ಮಾಡುವಂತೆ ಮತ್ತು ದೇವರ ರಾಜ್ಯವನ್ನು ಕಟ್ಟುವಂತಿರಬೇಕು. ಇಂಥಹ ವಿಧಾನವನ್ನು ನಾವು ಹೊಸ ಒಡಂಬಡಿಕೆಯಲ್ಲಿ ಕಾಣುತ್ತೇವೆ. ಅಲ್ಲಿಯ ಅಪೊಸ್ತಲರು ಮತ್ತು ಯೇಸುವಿನ ಶಿಷ್ಯರು ಇತರರನ್ನು ಶಿಷ್ಯರಾಗಿ ಮಾಡುವ ಗಮನದಲ್ಲಿಯೇ ಇದ್ದರು ಇದರಿಂದ ಅಲ್ಲಲ್ಲಿ ಅನೇಕ ಸಭೆಗಳು ಸ್ಥಾಪನೆಗಳಾದವು, ಅವು ಬೆಳೆದವು ಮತ್ತು ಗುಣಿಕರಿಸಲ್ಪಟ್ಟವು. *(ಅಪೊಸ್ತಲ 6:1,7, 9:31; 19:10)* ಇಂಥಹ ಸಭೆಗಳು ಸಾಧಾರಣ ರಚನೆಯು ಒಳಗೊಂಡಿದ್ದವು ಮತ್ತು ಸರಳ ರೀತಿಯಲ್ಲಿ ಗುಣಿಕರಿಸಲ್ಪಡುತ್ತಿದ್ದವು.
ಮತ್ತು ಅವರು ಬೆಳವಣಿಗೆಯುಳ್ಳ ನಾಯಕರಿಂದ ನಡೆಸಲ್ಪಡುತ್ತಾ ಮತ್ತು ಆರಾಧನೆ, ಸೇವೆಸಲ್ಲಿಸುತ್ತಾ, ಪರಿಪಕ್ವ ಶಿಷ್ಯರಾಗಿ ಹೊರಗಿನ ಜನರುಗಳಿಗೆ ಸಾಕ್ಷಿಯಾಗಿರುವ ಸರಳ ಆಭ್ಯಾಸದಲ್ಲಿ ತೊಡಗಿದ್ದರು. *(1 ತಿಮೋ 3; ತೀತ 1; 1 ಕೊರಿಂಥ 14; ಕೊಲಸ್ಸೆ 3:15-17, 4:2-6)*

ಸಹೋದರ ಸಹೋದರಿಯರೇ ನಾವು ನಮ್ಮ ಅಲೋಚನೆಯಲ್ಲಿ ದೇವರ ಕರೆಯುವಿಕೆಯ ವಿಷಯದಲ್ಲಿ ಬದಲಾವಣೆ ತರುವುದು ಬಹಳ ಪ್ರಾಮುಖ್ಯ.ನಮ್ಮ ಮುಖ್ಯ ಗುರಿ ದೊಡ್ಡ ಸಭೆ ಕಟ್ಟುವುದು ಅಥವಾ ಪ್ರಾರಂಭಿಸುವುದು ಅಲ್ಲಾ, ಆದರೆ ಗುಣಿಕರಿಸಲ್ಪಡುವ ಶಿಷ್ಯರನ್ನು ಕ್ರಿಸ್ತನಿಗಾಗಿ ತಯಾರಿಸುವುದು ಆಗಿದೆ. ಹೀಗಾದರೆ ನಮ್ಮ ಗುರಿ ಶಿಷ್ಯರುಗಳನ್ನು ತಯಾರಿಸುವುದು ಆಗುತ್ತದೆ, ಅದರಿಂದ ಆಗುವ ಪರಿಣಾಮ ಅನೇಕ ಸಭೆಗಳು ಉತ್ಪತ್ತಿಗಳಾಗುತ್ತವೆ.ಕರ್ತನ ಕೊನೆಯ ಆಜ್ಞೆಯೇ ನಮ್ಮ ಮುಖ್ಯ ಧ್ಯೇಯವಾಗಿರಬೇಕು.

**<u>ಮೂಲ ಸತ್ಯತೆ</u>*:* ಯೇಸು ಸ್ವಾಮಿ ನಮ್ಮನ್ನು ಪ್ರಖ್ಯಾತವುಳ್ಳ ಸಭೆಗಳನ್ನು ಕಟ್ಟಲು ಕರೆಯಲಿಲ್ಲಾ, ಆದರೆ ಶಿಷ್ಯರನ್ನಾಗಿ ತಯಾರಿಸುವ ಶಿಷ್ಯರನ್ನು ತಯಾರಿಸುವುದಕ್ಕೆ ಕರೆದಿದ್ದಾನೆ*.***

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *3:* ದೇವರೊಂದಿಗೆ ಏಕಾಂತ ಸಮಯ

ಕ್ರಿಸ್ತನ ಪ್ರೀತಿಯಲ್ಲಿ ಮುಂದುವರೆದು ಆತನಿಗೆ ವಿಧೇಯರಾಗಿ ಪ್ರತಿ ದಿನ ಜೀವಿಸಲು ನಮಗೆ ಆತನೊಂದಿಗೆ ಏಕಾಂತ ಸಮಯ ಕಳೆಯುವುದು ಬಹಳ ಅವಶ್ಯ. (ಅನೇಕ ಸಾರಿ ನಾವು ಶಾಂತ ಸಮಯ ಅಥವಾ ಧ್ಯಾನದ ಸಮಯ ಅನ್ನುತ್ತೇವೆ)

ಇದು ನಮ್ಮ ಮನಸ್ಸನ್ನು ನವೀಕರಿಸುವಂಥದ್ದು ಮತ್ತು ದೇವರ ಕರೆಯುವಿಕೆಯಲ್ಲಿ ಪ್ರೇರೇಪಣೆ ಹಾಗೂ ಕೇಂದ್ರಿಕತೆಯನ್ನುಂಟು ಮಾಡುವಂತದ್ದಾಗಿದೆ. ಇತಿಹಾಸದಲ್ಲಾಗಲಿ ಹಾಗೂ ದೇವರ ವಾಕ್ಯದಲ್ಲಾಗಲಿ ದೇವರ ಮಕ್ಕಳಿಗೆ ಇದು ಒಂದು ಒಳ್ಳೆಯ ಅಭ್ಯಾಸವಾಗಿರುತ್ತದೆ, ದೇವರೊಂದಿಗೆ ಸ್ಥಿರವಾದ ಸಮಯ ಆತನ ವಾಕ್ಯ ಓದುವುದರಲ್ಲಿ ಪ್ರಾರ್ಥಿಸುವುದಾಗಲಿ ಮಾಡುವುದು, ನಿಮ್ಮ ಅತ್ಮೀಕ ಅಭಿವೃದ್ಧಿಗೆ ಅತಿ ಅನುಕೂಲಕರವಾಗಿದೆ, ಇದಿಲ್ಲದೆ ನೀವು ದೇವರೊಂದಿಗಿನ ಆಳ ಸಂಭಧದೊಳಗಿನ ಹರುಷ ಕಾಣಲು ಸಾದ್ಯವಿಲ್ಲಾ. ದೇವರು ನಿಮ್ಮಿಂದ ಇದನ್ನು ಬಯಸುತ್ತಾನೆ.

ಪಾಪ ರಹಿತ ಮತ್ತು ಸರ್ವಶಕ್ತನಾದ ದೇವರ ಮಗನಿಗೆ ಇದು ಇಷ್ಟು ಅವಶ್ಯ ಅಂದರೆ ಪಾಪಿಗಳಾದ ನಮಗೆ ಇನ್ನೆಷ್ಟು ಅವಶ್ಯ. ಯೇಸು ಸ್ವಾಮಿ ತನ್ನ ಜೀವಿತದಲ್ಲಿ ದೇವರೊಂದಿಗೆ ಕಲಕಾಲ ಕಾಲಕಳೆಯುವುದನ್ನು ಪ್ರಕಟ ಮಾಡಿ ತೋರಿಸಿದ್ದಾನೆ. ಮಾರ್ಕ 1:21-39 ರಲ್ಲಿ ನಾವು ನೋಡುತ್ತೆವೆ ಯೇಸುವಿನ ಸೇವೆಯ ಕುರಿತು ಆಲೋಚಿಸಿದಾಗ, ಆತನು ಬೆಳಿಗ್ಗೆಯಿಂದ ಹಿಡಿದು ಸಾಯಂಕಾಲದವರೆಗೆ ಸಿನೆಗೋಗನಲ್ಲಿ ದೇವರ ಸಂದೇಶವನ್ನು ಸಾರುತ್ತಾ, ಸ್ವಸ್ಥತೆ ಮಾಡುತ್ತಾ ಸೇವೆಮಾಡಿದರು ದೇವರೊಂದಿಗೆ ಎಕಾಂತವಾಗಿ ಸಮಯವನ್ನು ಕಳೆಯುವದನ್ನು ಆತನು ಬಿಡಲಿಲ್ಲ. ಅದನ್ನು ಮರುದಿನ ಅತಿ ಗಂಬೀರವಾಗಿ ಪರಿಗಣಿಸಿ ಸಮಯವನ್ನು ಕಳೆಯುತ್ತಿದ್ದನು. ಈ ವಾಕ್ಯದೊಂದಿಗೆ ಲೂಕಾ 5:15-16 ರನ್ನು ಹೋಲಿಸಿ ಓದಿದಾಗ ಯೇಸುವಿನ ನಾಲ್ಕು ಅಭ್ಯಾಸಗಳನ್ನು ನಾವು ನೋಡಬಹುದು:

1. ಆತನು ತನ್ನ ತಂದೆಯೊಂದಿಗೆ ಪ್ರಾರ್ಥನೆ, ಮತ್ತು ಆತನ ವಾಕ್ಯದ ಅದ್ಯಯನ ಮತ್ತು ಆತನ ಸ್ವರ ಕೇಳುವುದರಲ್ಲಿ ಪ್ರಥಮ ಸ್ಥಾನ ಕೊಟ್ಟಿರುತ್ತಾನೆ.
2. ಈ ಸಮಯಕ್ಕಾಗಿ ಯೋಜನೆಯನ್ನು ಹಾಕಿಕೊಂಡನು. ಬೆಳಗ್ಗಿನ ಜಾವ ಎದ್ದು ಒಂಟಿಗನಾಗಿ ಪ್ರಾರ್ಥನೆಯಲ್ಲಿ ಸಮಯ ಕಳೆಯುತ್ತಾ ಇದ್ದನು.
3. ಜನರಿಂದ ದೂರ ಇದ್ದು ತನ್ನ ತಂದೆಯ ಹತ್ತಿರ ಸಮಯ ಕಳೆಯುತ್ತಾ ಇದ್ದನು.
4. ಆತನು ಒಂದು ವಿಷೇಶ ಸ್ಥಳಕ್ಕೆ ಹೋದನು.

ನಾವು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುವುದು ಅವಶ್ಯ. ನಮ್ಮ ಸಂಭಂದ ತಾಜಾ ಇಡಲು ಮತ್ತು ಕ್ರಿಸ್ತನಲ್ಲಿಯ ಸೇವೆ ಪ್ರಬಲವಾಗಿರಲು, ಮತ್ತು ವಿಶ್ವಾಸಿಗಳಿಗೆ ಸಹಾಯಕವಾಗಿರಲು, ದೇವರು ನಿಮ್ಮೊಂದಿಗೆ ಪ್ರತಿನಿತ್ಯ ಮಾತನಾಡುವ ಅಂಶವನ್ನು ಬರೆದಿಟ್ಟು ಕೆಲವು ಸಮಯ ಆತನಿಗಾಗಿ ಬದಿಗಿಟ್ಟು ಆರಾಧನೆ ಹಾಡುಗಳನ್ನು ಹಾಡುತ್ತಾ ಉಪವಾಸ ಅದ್ಯಯನ ಮಾಡುವ ಸಮಯ ಗೊತ್ತು ಮಾಡಿಕೋ.

ಜ್ಞಾಪಕದಲ್ಲಿಡಿರಿ: ನಿಮ್ಮ ಏಕಾಂತ ಸಮಯ ಅಥವಾ ಶಾಂತ ಸಮಯ ನಿಮ್ಮ ಸೇವೆಯ ಸಿದ್ದತೆಗಾಗಿ ಮತ್ತು ಶಿಕ್ಷಣಕ್ಕಾಗಿ ಅಲ್ಲಾ. ಆದರೆ ನಿನ್ನ ಸಂಭಂದವು ಕ್ರಿಸ್ತನೊಂದಿಗೆ ಬಲಪಡಿಸಿಕೊಳ್ಳಲು ಮಾತ್ರ.

**<u>ಮೂಲ ಸತ್ಯತೆ</u>: ಒಂದುವೇಳೆ ನಿಮ್ಮ ಸಂಭಂದವು ಕ್ರಿಸ್ತನೊಂದಿಗೆ ಬೆಳೆಯಬೇಕಾದರೆ ಅದ್ಯಯನ ಸಮಯ ಬಹಳ ಪ್ರಾಮುಖ್ಯ**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *4:* ಪ್ರಾರ್ಥನೆ ಪ್ರತಿಯೊಬ್ಬರಿಗೆ ಅವಶ್ಯ

ಪ್ರತಿ ವಿಶ್ವಾಸಿ ದೇವರ ಮಾಹಾ ಆಜ್ಞೆಯನ್ನು ಅನುಸರಿಸಲು ಕರೆಯಲ್ಪಟ್ಟಿದ್ದಾನೆ. *(ಮತ್ತಾಯ28:18-20, ಅಪೋ; 1:8)* ಹೋಗಿರಿ ಎಲ್ಲಾ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಶಿಷ್ಯರನ್ನಾಗಿ ತಯಾರಿಸುವುದು ಮತ್ತು ಗುಣಿಕರಿಸುವುದು ಇದು ಆತ್ಮನ ಕಾರ್ಯವಾಗಿದೆ *(ಯೋಹಾನ 6:65; 3:27)* ಆದರೆ ಈ ಕಾರ್ಯಕ್ಕೆ ಪ್ರಪಂಚದ ಎಲ್ಲಾ ಜನರನ್ನು ಉಪಯೋಗಿಸಿಕೊಳ್ಳುತ್ತಾನೆ. ಇದು ಮನುಷ್ಯನ ಸಾಮರ್ಥಕ್ಕೆ ಅಸಾದ್ಯ. ಅದರೆ ಯೇಸು ಒಂದು ಪ್ರಮಾಣ ಮಾಡಿದ್ದಾರೆ, ಎಲ್ಲಾ ಭೂಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಎಲ್ಲಾ ಅಧಿಕಾರ ನನಗೆ ಕೊಡಲ್ಪಟ್ಟಿದೆ, ಮತ್ತು ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿಕೊಳ್ಳೂವಿರಿ, ನಾನು ಯುಗದ ಸಮಾಪ್ತಿಯ ಎಲ್ಲಾ ದಿವಸಗಳು ನಿಮ್ಮೊಂದಿಗೆ ಇರುತ್ತೇನೆ ಅಂದನು. ಒಂದು ವೇಳೆ ದೇವರು ವಿದೇಯರಾಗಲು ಆಜ್ಞೆಯನ್ನು ಕೊಡುವುದಾದರೆ, ನೆನಪಿನಲ್ಲಿಟ್ಟುಕೊಳ್ಳಿ ಅದಕ್ಕೆ ಬೇಕಾದ ಎಲ್ಲಾ ಅನೂಕೂಲತೆಗಳನ್ನು ದೇವರು ಅನುಗ್ರಹಿಸಿ ಕೊಡುತ್ತಾನೆ, ಆದರೆ ನಾವು ನಂಬಿಕೆಯಿಂದ ಕೇಳಿಕೊಳ್ಳಬೇಕು, *(1 ಯೋಹಾನ 5:14-15)* ಇದೇ ನಮಗೆ ಆತನ ಮೇಲೆ ಇರುವ ಬರವಸೆ. ಆತನ ಚಿತ್ತದಂತೆ ನಾವು ಏನು ಬೇಕಾದರು ಕೇಳಿಕೊಂಡರು ಅದನ್ನು ದಯಪಾಲಿಸುವವನು ಆಗಿದ್ದಾನೆ. ಒಂದು ವೇಳೆ ನಾವು ಏನು ಕೇಳಿಕೊಂಡರು ಆತನು ಕೊಡಬಲ್ಲನು ಎಂಬ ವಿಷಯ ನಮಗೆ ಗೊತ್ತಿರುವುದಾದರೆ, ಇದು ಸಹ ನಮಗೆ ಗೊತ್ತಿರುತ್ತದೆ ಆತನ ಚಿತ್ತದಿಂದ ಕೂಡಿರುವ ಮಹಾ ಅಜ್ಞೆಯನ್ನು ಪೂರೈಸಲು ನಮಗಿರುವ ಅವಶ್ಯಕತೆಗಳನ್ನು ನಾವು ಕೇಳಿಕೊಂಡೆವು ಎಂಬುದಾಗಿ. ಹಾಗಾದರೆ! ದೇವರಿಗೆ ಸಾಮರ್ಥವಿದೆಯಾ? ತನ್ನ ಆಜ್ಞೆಯನ್ನು ಪೂರೈಸಿಕೊಳ್ಳಲು. ಹೌದು ಇದೆ. ಅದನ್ನು ಹೇಗೆ ಪೂರ್ತಿಗೊಳಿಸುತ್ತಾನೆ? ತನ್ನ ಸಾಮರ್ಥವನ್ನು ನಿನ್ನ ಮೂಲಕ ತನ್ನ ಕೆಲಸದಲ್ಲಿ ತೋರ್ಪಡಿಸಿ ಪೂರೈಸುತ್ತಾನೆ.

ದೇವರ ಸಾಮರ್ಥವನ್ನು ಬರಮಾಡಲು ಪ್ರಾರ್ಥನೆಯ ಸಾಮರ್ಥ ಇದ್ದರೆ ಸಾಕು. ಪ್ರಾರ್ಥನೆಯು ಏನನ್ನು ತೋರಿಸುತ್ತದೆ ಅಂದರೆ, ದೇವರ ಉದ್ದೇಶವು ಪೂರೈಸಲು ಸಂಪೂರ್ಣವಾಗಿ ಆತನ ಮೇಲೆ ಅಧಾರಗೊಂಡಿರುವುದನ್ನು ತೋರಿಸುತ್ತದೆ. ಪ್ರಾರ್ಥನೆ ಮುಖಾಂತರ ಕ್ರಿಸ್ತನು ಆ ಶಿಲುಬೆಯಲ್ಲಿ ಮಾಡಿ ಮುಗಿಸಿದ ಕಾರ್ಯಕ್ಕೆ ವಂದನೆಗಳನ್ನು ಹೇಳುತ್ತೇವೆ. ಪರಿಪಕ್ವ ಶಿಷ್ಯರುಗಳನ್ನು ತಯಾರಿಸಿ ಆತನನ್ನು ಮಹಿಮೆಪಡಿಸುವ ಮಾರ್ಗದರ್ಶನವನ್ನು ಪಡೆಯುತ್ತೇವೆ.

ನಮ್ಮ ಸೇವೆ ಹಾಗೂ ನಮ್ಮಲ್ಲಿರುವುದೆಲ್ಲವು ಪ್ರಾರ್ಥನೆಯಲ್ಲಿಯೆ ತೇಲಿ ಮುಳಗಬೇಕು. ಆದರೆ ನಾವು ಮಾಡ ಬಯಸುವದೆಲ್ಲವು ಪ್ರಾರ್ಥನೆಯಲ್ಲಿ ತರುವುದು ಅಲ್ಲಾ, ಆದರೆ ನಮ್ಮ ಯೋಜನೆಗಳನ್ನು ಪ್ರಾರ್ಥನೆ ಮೂಲಕ ದೇವರ ಹತ್ತಿರ ತರಬೇಕು. ಮತ್ತು ಆತ್ಮ ವಿಶ್ವಾಸದಿಂದ ಮುಂದೆ ಸಾಗಬೇಕು. ಆಗ ಆತನು ನಮ್ಮನ್ನು ಬಲಪಡಿಸಿ ಮಾರ್ಗ ದರ್ಶನವನ್ನು ಕೊಡುವಾತನಾಗಿದ್ದಾನೆ.

ಬಹಳ ಪ್ರಾಮುಖ್ಯತೆ ಏನೆಂದರೆ ನಾವು ಕೆಲಸಗಾರರಿಗಾಗಿ ಹೆಚ್ಚಾಗಿ ಪ್ರಾರ್ಥಿಸಬೇಕಾಗಿದೆ. ಲೂಕಾ 10:2-3 ರಲ್ಲಿ ಯೇಸು ಹೀಗೆ ಹೇಳುತ್ತಿದ್ದಾನೆ ಬೆಳೆಯು ಬಹಳ ಕೆಲಸಗಾರರು ಕಡಿಮೆ. ಅದಕ್ಕಾಗಿ ಆಸಕ್ತಿಯಿಂದ ನಾವು ಪ್ರಾರ್ಥಿಸಬೇಕು ದೇವರು ಅನೇಕ ಕೆಲಸಗಾರರನ್ನು ಕಳುಹಿಸಲಿ ಎಂದು, ಇಗೊ. ತೋಳಗಳ ಮದ್ಯದಲ್ಲಿ ನಿಮ್ಮನ್ನು ಕುರಿಗಳಂತೆ ಕಳುಹಿಸುತ್ತಾ ಇದ್ದೇನೆ. ಅನೇಕ ಕೆಲಸಗಾರರಿಗಾಗಿ ಬೇಡಿಕೊಳ್ಳಿರಿ ಎಂದು ಆತನು ಹೇಳುತ್ತಾನೆ. ಮತ್ತು ನಮ್ಮನ್ನು ಸುಗ್ಗಿಯೊಳಗೆ ಈಗಲೇ ಕಳುಹಿಸುವವನಾಗಿದ್ದಾನೆ. ನಾವು ಹೋದ ಹಾಗೆಲ್ಲಾ ಹೆಚ್ಚಾಗಿ ಕೆಲಸಗಾರರಿಗಾಗಿ ಪ್ರಾರ್ಥಿಸುತ್ತೇವೆ. ಇದರ ಅರ್ಥ ಆ ಕೆಲಸಗಾರರು ದೇವರ ಮಹಾ ಆಜ್ಞೆಯನ್ನು ಪೂರೈಸಲು ಆಗಿರಬೇಕು, ಸುಗ್ಗಿಯು ಸುಗ್ಗಿಯೊಳಗಿಂದಲೇ ಬರುತ್ತದೆ. ದೇವರ ಮಹಾ ಅಜ್ಞೆಯನ್ನು ಪೂರೈಸಲು ಹೊರಟ ಅನೇಕ ಕೆಲಸಗಾರರು ಇನ್ನೂ ತಮ್ಮ ರಕ್ಷಣೆಗಾಗಿ ಆ ಯೆಸುವಿನಲ್ಲಿ ಭರವಸವಿಡಬೇಕಾಗಿದೆ, ಅದಕ್ಕಾಗಿ ನಾವು ದೇವರ ಕೆಲಸಕ್ಕೆ ಕೆಲಸಗಾರರು ಬೇಕು ಎಂದು ಪ್ರಾರ್ಥಿಸು, ಮತ್ತು ದೇವರೆ ನಿನಗಾಗಿ ಹೆಚ್ಚಿನ ಶಿಷ್ಯರನ್ನು ತಯಾರಿಸುವ ಕೆಲಸಗಾರರನ್ನು ಅನುಗ್ರಹಿಸು ಎಂದು ಪ್ರಾರ್ಥಿಸಬೇಕು, ಮತ್ತು ತಂಡ ಸಮೇತವಾಗಿ ಪ್ರಾರ್ಥನೆಗೆ ಸಮರ್ಪಣೆಯಾಗಬೇಕು. ಮತ್ತು ದಿನಾಲು ಬೆಳಿಗ್ಗೆ 10:2 ಕ್ಕೆ ಎಚ್ಚರಿಸುವ ಸಮಯದ ಘಂಟೆಯನ್ನು ಇಟ್ಟುಕೊಂಡು, ಆ ಸಮಯಕ್ಕೆ ಸರಿಯಾಗಿ ನಾವು ಸುಗ್ಗಿಯ ಕೆಲಸಗಾರರಿಗೆ ಪ್ರಾರ್ಥಿಸಬೇಕು.

**<u>ಮೂಲ ಸತ್ಯತೆ</u>: ಗುಣಿಕರೀಸುವ ಶಿಷ್ಯರನ್ನಾಗಿ ತಯಾರಿಸುವ ಸೇವೆ ಬೆಳೆಯುವ ತನಕ ನಮ್ಮ ಪ್ರಾರ್ಥನೆ ಶಕ್ತಿ ವ್ಯಾಪಕಗೊಳ್ಳಲೇ ಬೇಕು.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *5:* ಯೇಸುವಿನ ಪ್ರಭುತ್ವ

ಯೇಸು ಸ್ವಾಮಿ ಶಿಷ್ಯರಿಗೆ ( ನಮಗೂ ಸಹ ) ಎರಡು ಪ್ರಾಮುಖ್ಯ ಪ್ರಶ್ನೆಗಳನ್ನು ಕೇಳುತ್ತಾ ಇದ್ದಾನೆ, *(ಮಾರ್ಕ 8:27-38)* ಇವೆರಡರ ಉತ್ತರಗಳು ನಮ್ಮ ಭವಿಷ್ಯದ ಗಮ್ಯಸ್ಥಾನ ಮತ್ತು ಇಲ್ಲಿಯ ನಮ್ಮ ಜೀವನಕ್ಕೆ ಯಾವುದು ಮುಖ್ಯತ್ವ ಎಂಬುದು ನಿರ್ಧಾರವನ್ನುಂಟು ಮಾಡುತ್ತದೆ.

**ಮೊದಲನೆ ಪ್ರಶ್ನೆ:** ಯೇಸು ನಮಗೆ ಯಾರಾಗಿದ್ದಾನೆ? ಯೇಸು ಇಹಲೋಕದಲ್ಲಿರುವಾಗ ಅನೇಕರು ವಿಧವಿಧವಾದ ಉಹೆಗಳನ್ನು ಇಟ್ಟುಕೊಂಡಿದ್ದರು. ಕೆಲವರು ಈತನು ಸ್ನಾನಿಕನಾದ ಯೋಹಾನನು ಅಂತ ಇನ್ನೂ ಕೆಲವರು ಏಲಿಯಾ ಅಥವಾ ಇನ್ನೂ ಯಾರೋ ಒಬ್ಬ ಪ್ರವಾದಿ ಎಂಬುದಾಗಿಯೂ ಮತ್ತು. ಇವತ್ತಿಗೂ ಆತನು ಒಬ್ಬ ಧಾರ್ಮಿಕ ಗುರು, ಅಥವಾ ನೀತಿಪಾಠ ಹೇಳಿಕೊಡುವ ಉಪಾದ್ಯಾಯಕರು ಎಂಬುದು ಜನ ತಿಳಿಯುತ್ತನೇ ಇದ್ದಾರೆ. ಆದರೆ ನೇರವಾಗಿ ಯೇಸು ನಮ್ಮನ್ನು ಕೇಳುತ್ತಾ ಇದ್ದಾನೆ ನೀವು ನನ್ನ ಬಗ್ಗೆ ಏನನ್ನುತ್ತೀರಿ? *(29)*? ಆದರೆ ಸ್ವೀಕರಿಸಲ್ಪಟ್ಟಂತಹ ಉತ್ತರ ಕೇವಲ ಯೇಸುವಿನ ಶಿಷ್ಯನಾದ ಪೇತ್ರನ ಮುಖಾಂತರ ಬಂತು.ಅದೇನೆಂದರೆ ನೀನು ಬರಬೇಕಾದ ಮೆಸ್ಸಾಯನು ಮತ್ತು ಜೀವವುಳ್ಳ ದೇವರ ಮಗನು ಎಂಬುದು. ಆತನು ಮನುಷ್ಯನಾಗಿ ಇಹಲೋಕಕ್ಕೆ ಬಂದು ಪ್ರಾಣಕೊಟ್ಟು ಪಾಪಗಳನ್ನು ಕ್ಷಮಿಸಲು ಯೋಗ್ಯನಾದ, ಮತ್ತು ಆತನು ಪುನರುತ್ಥಾನದ ಕರ್ತನು, ಆತನು ತಿರುಗಿ ಇಹಲೋಕಕ್ಕೆ ಬಂದು ಲೋಕದ ನ್ಯಾಯ ಮಾಡಿ ಅದನ್ನು ಸದಾಕಾಲ ಆಳುವ ದೇವರಾಗಿದ್ದಾನೆ. ಯೇಸು ನಮಗೆ ಯಾರು ಮತ್ತು ಏನಾಗಿದ್ದಾರೆ ಎಂಬ ವಿಷಯ ನಂಬುವದರ ಮೂಲಕ ನಮ್ಮ ನಿತ್ಯತ್ವದ ಗಮ್ಯಸ್ಥಾನವು ನಿರ್ದರಿಸಲ್ಪಡುತ್ತದೆ.

ಎರಡನೆಯ ಪ್ರಾಮುಖ್ಯ ಪ್ರಶ್ನೆ ಪೇತ್ರನು ಪಾಪ ಮಾಡಿ ಪಶ್ಚತ್ತಾಪ ಪಟ್ಟ ಮೇಲೆ ನಂತರ ಮಾಡುವ ಯೇಸುವಿನ ಶಿಕ್ಷಣದಲ್ಲಿ ನಾವು ಕಾಣಬಹುದು. ಯೇಸು ತನ್ನ ಶ್ರಮೆ, ಮರಣ, ಭಾದೆ ಮತ್ತು ಪುನರುತ್ಥಾನಗಳನ್ನು ಪ್ರಸ್ತಾಪಿಸುತ್ತಿರುವ ಸಮಯದಲ್ಲಿ, ಪ್ರತಿಯೊಬ್ಬರಿಗೂ ಈ ವಾಕ್ಯವನ್ನು ಉಲ್ಲೇಖಿಸಿದ್ದಾನೆ:

> "ಆಮೇಲೆ ಆತನು ತನ್ನ ಶಿಷ್ಯರ ಜೊತೆಗೆ ಜನರ ಗುಂಪನ್ನು ಹತ್ತಿರ ಕರೆದು ಅವರಿಗೆ ಹೇಳಿದ್ದೇನಂದರೆ- ಯಾವನಿಗಾದರು ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು, ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಡಬಹುದು? ವ್ಯಭಿಚಾರಿಣಿಯಂತಿರುವ ಈ ಪಾಪಿಷ್ಠ ಸಂತತಿಯಲ್ಲಿ ಯಾವನು ನನಗೂ ನನ್ನ ಮಾತುಗಳಿಗೂ ನಾಚಿ ಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು ಅಂದನು." *(ಮಾರ್ಕ 8:34-38).*

**ಎರಡನೆಯ ಪ್ರಶ್ನೆ:** ನೀನು ಯಾರಿಗೋಸ್ಕರ ಮತ್ತು ಯಾಕೆ ಇಹಲೋಕದಲ್ಲಿ ಜೀವಿಸುತ್ತಾ ಇದ್ದೆಯಾ? ನಮಗೆ ಎರಡೆ ಎರಡು: **1)** ಲೋಕದ ಆಶೆ ಪಾಶೆಗಳನ್ನು ಪಡೆಯುವುದಕ್ಕಾಗಿ ಸ್ವಾರ್ಥ ಪರರಾಗಿ ಜೀವಿಸುವುದು **2)** ಕ್ರಿಸ್ತನಿಗಾಗಿ ಮತ್ತು ಅತನ ಸುವಾರ್ತೆಗಾಗಿ ಜೀವನವನ್ನು ಕಳೆದುಕೊಳ್ಳುವುದು. ಸಾಮಾನ್ಯವಾಗಿ ನಾವು ನಮ್ಮಸ್ವಾರ್ಥಕ್ಕಾಗಿ ಜೀವಿಸ ಬಯಸುವುದಾದರೆ, ಹೇಸುಕ್ರಿಸ್ತನು ಒಂದು ಮಾತನ್ನು ಹೇಳುತ್ತಾನೆ ಅದೇನಂದರೆ ನೀನು ನಿನ್ನ ಆತ್ಮವನ್ನು ಮತ್ತು ಆತ್ಮೀಕ ಜೀವಿತವನ್ನು ಕಳೆದುಕೊಳ್ಳುವನು ಆಗಿರುತ್ತಿ. ನಾವು ಕೇವಲ ಶಾರೀರಿಕವಾಗಿ ಸ್ವಲ್ಪ ಕಾಲವೇ ಮಾತ್ರ ಇರುವವರಾಗಿ ಕರ್ತನಿಗಾಗಿ ಮತ್ತು ನಿತ್ಯರಾಜ್ಯಕ್ಕಾಗಿ ಕರ್ತನಾದ ದೇವರು ತನ್ನ ಉದ್ದೇಶಕ್ಕಾಗಿ ನಮ್ಮನ್ನು ಸೃಷ್ಟಿಸಿದ್ದಾನೆ ಅನ್ನುವುದನು ತಿಳಿಯಬೇಕು.

ನಾವು ಕರ್ತನಿಗಾಗಿ ಮತ್ತು ಆತನ ಸುವಾರ್ತೆಗಾಗಿ ಜೀವಿಸುವುದು ಅತಿ ಉತ್ತಮ ಆಯ್ಕೆಯಾಗಿದೆ, ಧೈರ್ಯದಾತ್ಮನಿಂದ ನಾವು ಕರ್ತನ ಸುವಾರ್ತೆಗಾಗಿ ಜೀವಿಸುವುದಾದರೆ ನಿಜವಾಗಲೂ ನಾವು ಆತ್ಮವನ್ನು ಹರ್ಷದ ಆತ್ಮವಾಗಿ ಪಡಕೊಳ್ಳುತ್ತೇವೆ. ಅತ್ಮೀಕರಾಗಿರುವುದಕ್ಕಾಗಿಯೇ ಅತನು ನಮ್ಮನ್ನು ಸೃಷ್ಟಿಸಿದ್ದಾನೆ ಸ್ತುತಿ ಮತ್ತು ಬಹುಮಾನ ಯೇಸು ತಿರುಗಿ ಬರುವಾಗ ನಮಗೆ ಸಿಗಲಿವೆ. *(ನೋಡಿರಿ ವ. 38)*

**<u>ಮೂಲ ಸತ್ಯತೆ</u>: ಕ್ರಿಸ್ತನಿಗಾಗಿ ಸ್ವ ಇಚ್ಚೆಗಳನ್ನು ತ್ಯಜಿವುಸುದೆ ನಿತ್ಯಜೀವ. ಸುವಾರ್ತೆಯಿಂದ ಉಂಟಾಗುವ ಪ್ರತಿಫಲ ಉತ್ತಮ ಜೀವನವಾಗಿದೆ.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *6:* ಸ್ಪಷ್ಟವಾದ ಸುವಾರ್ತೆಯ ಸಲುವಾಗಿ ಸಾದಾರಣಾ ಸಂದೇಶವನ್ನು ತಾಯಾರಿಸು

ಪ್ರತಿಯೊಬ್ಬರು ಸತ್ಯತೆಯ ಅರಿವು ಪಡೆದುಕೊಂಡು ರಕ್ಷಣೆಹೊಂದಬೇಕು ಎಂಬುದೆ ದೇವರ ಇಷ್ಟವಾಗಿದೆ. (1 ತಿಮೋ 2:4) ಸುವಾರ್ತೆಯ ಅತಿ ಪರಿಣಾಮಕಾರಿ ಕಾರ್ಯಕ್ಕೆ ಭಾಗಿಯಾಗಲು ದೇವರು ನಿನನ್ನು ಕರೆದಿದ್ದಾನೆ. ನಿತ್ಯತ್ವಕ್ಕೆ ನಿರೀಕ್ಷೆಯಾದ ಯೇಸುವನ್ನು ಹೇಗೆ ತಿಳಿದುಕೊಳ್ಳಲಿ ಎಂಬ ವಿಷಯ ಪ್ರತಿಯೊಬ್ಬರು ಕೇಳಲ್ಪಡಲಿ ಅನ್ನುವುದೇ ನಮ್ಮಮುಖ್ಯ ದರ್ಶನವಾಗಿದೆ.

ನಿಮ್ಮ ಕಳೆದುಹೋದ ಪ್ರದೇಶವನ್ನು ಕರ್ತನಿಗಾಗಿ ತರಲು ಮಾಡುವ ಪ್ರಯಾಣದಲ್ಲಿ, ನೀವು ತಪ್ಪದೆ ಶುಭ ಸಂದೇಶವನ್ನು ಸಾರುವುದು ಪ್ರಾಮುಖ್ಯ. ಇದನ್ನು ನೀನು ಅರ್ಥಮಾಡಿಕೊಂಡು ಸಾದಾರಣವಾಗಿ ತಿಳಿಸುವುದಾದರೆ ಅನೇಕ ಜನರು ಕ್ರಿಸ್ತನಿಗಾಗಿ ಬರುವ ಸಾದ್ಯತೆ ಉಂಟು. ಆದರೆ ಅನೇಕ ಸೇವಕರು ಪಾಸ್ಟರುಗಳು ನಾಯಕರುಗಳು ಈ ಪ್ರಾಮುಖ್ಯದ ವಿಷ್ಯಯದಲ್ಲಿ ಗಲಿಬಿಲಿಯಾಗಿ ತೊಂದರೆ ಗೀಡಾಗಿದ್ದಾರೆ.

ಸುವಾರ್ತೆಗೆ ಅವಶ್ಯ ವಸ್ತುಗಳನ್ನು ನಾವು ಪಡೆಯಬಯಸುವುದಾದರೆ 1 ಕೊರಿಂಥ 15:1-8 ರಲ್ಲಿ ಸಿಗುತ್ತವೆ:

1. **ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು**, ವಚನ 3.
   A. ದೇವರು ಲೋಕವನ್ನು ಪ್ರೀತಿಸುತ್ತಾನೆ ಮತ್ತು ಮಾನವ ಕುಲಕ್ಕೆ ಸಂಭಂದ ಪಟ್ಟ ಪ್ರತಿಯೊಬ್ಬರು ರಕ್ಷಿಸಲ್ಪಟ್ಟು ನಿತ್ಯಜೀವ ಪಡೆಯಬೇಕೆಂಬುದೇ ಆತನ ಇಷ್ಟವಾಗಿದೆ. *(ಯೋಹಾನ 3:16, 1 ತಿಮೋ 2:4)*
   B. ಪ್ರತಿಯೊಬ್ಬ ಮಾನವನು ಪಾಪಮಾಡಿ ದೇವರಿಂದ ದೂರವಾಗಿದ್ದಾನೆ. *(ರೋಮಾ 3:23)*
   C. ಯೇಸು ಕ್ರಿಸ್ತನೊಬ್ಬನೆ ಪಾಪರಹಿತ ದೇವರ ಮಗನಾಗಿದ್ದು ಪಾಪಕ್ಕಾಗಿ ಕ್ರಯ ಕೊಟ್ಟು ಆತನಿಂದಲೇ ನಮಗೆ ನಿತ್ಯಜೀವದೊರೆಯುವಂತದ್ದಾಗಿದೆ. *(ರೋಮಾ 5:8; ಯೊಹಾನ 14:6)*
2. **ಯೇಸುಸ್ವಾಮಿ ಶಾರೀರಿಕವಾಗಿ ಸಮಾಧಿ ಮಾಡಲ್ಪಟ್ಟನು,** ವಚನ 4.
3. **ಯೇಸು ಶರೀರದಿಂದ ಮೂರನೇ ದಿನದಲ್ಲಿ ಸಮಾಧಿಯಿಂದ ಎದ್ದನು**, ವಚನ 5-8
4. **ಯಾರಾದರು ಯೇಸುವನ್ನು ನಂಬಿ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡರೆ ಅವರ ಪಾಪಗಳು ಕ್ಷಮಿಸಲ್ಪಟ್ಟು ಅವರಿಗೆ ನಿತ್ಯಜೀವ ದೊರೆಯುತ್ತದೆ**, ವಚನ 1-2, 51-53.
   A. ನಾವು ರಕ್ಷಿಸಲ್ಪಟ್ಟದ್ದು ಕೇವಲ ಆತನ ಕೃಪೆಯಿಂದಲೇ ನಿತ್ಯಜೀವವನ್ನು ಆತನ ಉಚಿತಾರ್ಥ ವರವೇ *(ಎಫೇಸ 2:8-9)*
   B. ನಂಬಿಕೆ (ಯೇಸುವಿನಲ್ಲಿ ಬರವಸೆ) ಯಿಂದಲೇ ಹೊರತು ಇನ್ನಾವುದರಿಂದ ನಮಗೆ ಪಾಪ ಕ್ಷಮಾಪಣೆ ಮತ್ತು ನಿತ್ಯ ಜೀವ ದೊರಕುವುದಿಲ್ಲಾ. *(ಯೋಹಾನ 1:12; 3:16; ರೋಮಾ 10:9-10)*

ಪರಿಣಾಮ ಕಾರ್ಯತಂತ್ರದ ಕೈಪಿಡಿಯು ಸುವಾರ್ತೆಯ ಸಾಧನವು ವಿನ್ಯಾಶಗೊಳಿಸಿದೆ. ಕಾರಣ ಎಲ್ಲರಿಗೂ ಸಾಧಾರಣ ಸಂದೇಶವು ಕೊಡಲು ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಡಲು ಅವಕಾಶ ಕಲ್ಪಿಸಿಕೊಡುವಂತಿದೆ.

ನಿಮ್ಮ ಸೇವಾಯಾತ್ರಕ್ಕೆ ಇವು ಅನೂಕೂಲವಾಗುವಂತೆ ಇವುಗಳನ್ನು ಮತ್ತು ಅದರ ಒಳಗಿನ ಎಲ್ಲಾ ಸೂಚನೆಗಳನ್ನು ತಿಳಿದುಕೊಳ್ಳಿರಿ.

**<u>ಮೂಲ ಸತ್ಯತೆ</u>: ಯಾವಾಗಲೂ ಸಾದಾರಣ ಹಾಗೂ ಸ್ಪಷ್ಟ ಸುವಾರ್ತೆಯ ಸಂದೇಶವನ್ನು ಜನರಿಗೆ ಕೊಟ್ಟು ಎಷ್ಟಾಗುತ್ತೋ ಅಷ್ಟು ಜನರನ್ನು ಅಹ್ವಾನ ಮಾಡಿರಿ.**

# ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *7:* ಪಾಪದ ಅರಿಕೆ ಮತ್ತು ಇತರರೊಂದಿಗೆ ಸಹವಾಸ

ದೇವರೊಂದಿಗೂ ಮತ್ತು ಇತರರ ಜನರೊಂದಿಗೂ ಸಹವಾಸವಾಗಿ ಜೀವಿಸುವುದು ಬಹಳ ಪ್ರಾಮುಖ್ಯ *(1 ಪೇತ್ರ 3:18)* ರಲ್ಲಿ ಹೀಗೆ ಹೇಳುತ್ತಾ ಇದೆ. ದೇವರೊಂದಿಗೆ ನಮ್ಮ ಸಹವಾಸವು ಒಂದುಮಾಡಲು ಯೇಸು ಕ್ರಿಸ್ತನು ಆ ಶಿಲುಬೆಯಲ್ಲಿ ಪ್ರಾಣ ಕೊಟ್ಟನು. ಮತ್ತು ನೀವು ಒಬ್ಬರಿಗೊಬ್ಬರು ಪ್ರೀತಿ ಮಾಡಿದರೆ ನನ್ನ ಶಿಷ್ಯರು ಎಂದು ಹೇಳುವರು, *(ಯೋಹಾನ 13:35)* ನಾವು ಆತನೊಂದಿಗೆ ಮತ್ತು ಒಬ್ಬರಿಗೊಬ್ಬರು ಸಹವಾಸದಿಂದವಿರುವುದು ಜನರು ನೋಡಿ ಇವರು ಯೇಸುವಿನ ಶಿಷ್ಯರು ಎಂದು ತಿಳಿಕೊಳ್ಳುವರು.

1 ಯೋಹಾನ 1:5-10 ಇಲ್ಲಿ ನಾವು ವ್ಯತಿರಿಕ್ತವಾದವುಗಳು ಎರಡನ್ನು ನಾವು ನೋಡುತ್ತೇವೆ: **1)** ಬೆಳಕಲ್ಲಿ ನಡೆಯುವುದು ಕತ್ತಲಲ್ಲಿ ನಡೆಯುವುದಕ್ಕೆ ವ್ಯತಿರಿಕ್ತವಾಗಿದೆ. **2)** ಮಾಡಿದ ಪಾಪಕ್ಕೆ ಅಂಗೀಕಾರ ಮಾಡುವುದು, ನಾನು ಪಾಪನೇ ಮಾಡಿಲ್ಲ ಅನ್ನುವುದಕ್ಕೆ ವ್ಯತಿರಿಕ್ತವಾಗಿದೆ.

**<u>ಬೆಳಕಲ್ಲಿ ನಡೆಯುವುದು</u>**
ದೇವರು ಬೇಳಕಾಗಿದ್ದಾನೆ, ದೇವರು ಪವಿತ್ರನು. ಆತನು ಎಂದೂ ಕತ್ತಲಲ್ಲಿ (ಪಾಪ) ನಡೆಯಲಿಲ್ಲ. ಕತ್ತಲು ಬೆಳಕು ಇಲ್ಲದ ಸಮಯವಾಗುತ್ತದೆ, ನಾವು ದೇವರೊಂದಿಗೆ ಸಹವಾಸವು ಹೊಂದಿದ್ದೇವೆ ಅನ್ನುವುದು ಆತನೊಂದಿಗೆ ನಡೆಯುತ್ತಾ ಇದ್ದೇವೆ ಎಂದು ನಿರ್ಧರಿಸುತ್ತದೆ, ಸಹವಾಸವು ಕೇವಲ ಮಾತಿನ ಶಬ್ದದಲ್ಲಿ ಇಲ್ಲ. ಆದರೆ ಮಾಡುವ ಪ್ರತಿಯೊಂದು ಕಾರ್ಯದಲ್ಲಿ ಅಡಕವಾಗಿದೆ. *(ವ.6)* ಒಂದು ವೇಳೆ ನಾವು ಕತ್ತಲೆಯಲ್ಲಿ ನಡೆಯುವುದಾದರೆ ಆತನೊಂದಿಗೆ ಸಹವಾಸದಲ್ಲಿ ಇಲ್ಲಾ. ಒಂದು ವೇಳೆ ನಾವು ಬೆಳಕಲ್ಲಿ ನಡೆಯುತ್ತಾ ಇದ್ದರೆ ಕೇವಲ ದೇವರೊಂದಿಗೆ ಮಾತ್ರ ಅಲ್ಲಾ ಇತರರ ಜೊತೆಯೂ ಸಹವಾಸವಿದೆ ಅನ್ನುವುದು ತೋರಿಸುತ್ತದೆ ಮತ್ತು ನಮ್ಮ ಪಾಪಗಳು ಕ್ಷಮಿಸಲ್ಪಟ್ಟವುಗಳಾಗಿರುತ್ತದೆ, ಬೆಳಕಲ್ಲಿ ನಡೆಯುವುದು ಒಂದು ಪರಿಪಕ್ವತೆಯನ್ನು ಹೊಂದಿದ್ದೇವೆ ಅಂತ ಅರ್ಥ ಅಲ್ಲಾ, ಆದರೆ ಆತ್ಮೀಕ ಪರಿಪಕ್ವತೆಯಲ್ಲಿ ನಾವು ಮುಂದೆ ಸಾಗುವುದನ್ನು ನೋಡುತ್ತೆವೆ. ಕೆಲವೊಮ್ಮೆ ಕತ್ತಲೆ ಜೀವನಕ್ಕೆ ಹೋಗಿಬಿಟ್ಟರು, ಅಲ್ಲಿ ಬಹಳ ಹೊತ್ತು ಇರುವುದಿಲ್ಲಾ ತಿರುಗಿ ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗಿ ಕೊಳ್ಳುತ್ತೇವೆ, ಈ ತರ ಆಗುವುದು ಮೇಲೆ ನೋಡಿದ 2 ನೇ ವ್ಯತಿರಿಕ್ತ ಅಂಶದ ರೀತಿ.

**<u>ಪಾಪ ಮಾಡಿದ್ದಕ್ಕೆ ಅಂಗೀಕಾರ</u>**
ವಾಕ್ಯದಲ್ಲಿ ಸ್ಪಷ್ಟವಾಗಿದೆ, ಪ್ರತಿಯೊಬ್ಬರು ಪಾಪ ಮಾಡಿ ದೇವರ ಮಹಿಮೆಯಿಂದ ದೂರವಾಗಿದ್ದಾರೆ *(ರೋಮಾ3:23)* ವಿಶ್ವಾಸಿಗಳಾದ ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಅಂಗೀಕಾರ ಮಾಡಿಕೊಂಡರೆ, ದೇವರೊಂದಿಗೂ ಹಾಗೂ ಮನುಷ್ಯರೊಂದಿಗೂ ಸಹವಾಸ ತಿರಿಗಿ ಪಡೆಯುತ್ತೆವೆ. ಕ್ಷಮಾಪಣೆ ಕೇಳಿಕೊಂಡ ಎಂತಹುದೇ ಪಾಪಗಳನ್ನು ಕ್ಷಮಿಸಲು ಯೇಸುವಿನ ರಕ್ತವು ಸಾಮಾರ್ಥವುಳ್ಳದ್ದಾಗಿದೆ. ದೇವರು ಬೆಳಕು ಆತನು ಯಾವುದೆ ಅಂಧಕಾರವನ್ನು ಜಯಿಸಲು ಶಕ್ತನಾಗಿದ್ದಾನೆ, ನಾವು ಯಾವಾಗಲೂ ನಮ್ಮ ಶುದ್ಧತೆಯ ಅವಶ್ಯಕತೆಯನ್ನು ನೆನಪಿನಲ್ಲಿಟ್ಟುಕೊಂಡು ಪ್ರಾರ್ಥಿಸ ಬೇಕು. ನಮ್ಮ ಸ್ವಂತ ಒಳ್ಳೆ ಕಾರ್ಯಗಳ ಮೇಲೆ ಆಧಾರ ವಾಗಿದ್ದರೆ ನಿಜವಾಗಲು ನಾವು ಗರ್ವ ಹಾಗೂ ಸ್ವ- ಧಾರ್ಮಿಕತೆಯಲ್ಲಿ ಇರುತ್ತೆವೆ.ಹೀಗಿರುವಾಗ ನಾವು ಪ್ರಸ್ತುತವಾಗಿ ಮಾಡಿದ ಪಾಪವನ್ನು ಅಲ್ಲಗಳೆಯುವುದು ಅಷ್ಟೆ ಅಲ್ಲಾ, ಆದರೆ ಎಂದೂ ನಾನು ಪಾಪನೇ ಮಾಡಿಲ್ಲಾ ಅನ್ನುವ ವಿಚಾರಕ್ಕೆ ಬರುತ್ತೇವೆ, ಇದು ಸೇವಕರಿಗೆ ಪಾಸ್ಟರುಗಳಿಗೆ ಬಹಳ ಅಪಾಯಕಾರಿ. ಇತರರು ನಮ್ಮನ್ನು ದೇವರ ಮನುಷ್ಯರು ಅಂತ ನಮ್ಮನ್ನು ಕರೆಯುತ್ತಿರುವಾಗ ಸೇವಕರು ಹಾಗೂ ಪಾಸ್ಟರುಗಳಾದ ನಮಗೆ ಯೇಸುವಿನ ರಕ್ತದ ವಿಮೋಚನೆ ಎಷ್ಟು ಅವಶ್ಯಕವಿದೆ ನೋಡಿರಿ. ನಾವು ದೀನತೆಯಲ್ಲಿ ನಡೆದು ಪಾಪದ ಪ್ರತಿ ಸೂಕ್ಷ್ಮತೆಯನ್ನು ತೋರಿಸುವುದು ಬಹಳ ಪ್ರಾಮುಖ್ಯ. ದೇವರು ನಮ್ಮನ್ನು ವಿಮೋಚಿಸಿದ್ದಾನೆ ಅನ್ನುವುಕ್ಕೆ ಆನಂದಪಡುತ್ತೇವೆ, ಯಾಕೆಂದರೆ ನಮ್ಮ ಸದ್ಯಕ್ಕೆ ಅಂಗೀಕಾರ ಮಾಡಿದ ಎಲ್ಲಾ ಪಾಪಗಳನ್ನು ಕ್ಷಮಿಸುತ್ತಾನೆ, ಒಂದು ವೇಳೆ ನಾವು ಅದನ್ನು ತಿರಸ್ಕರಿಸಿದರೆ ದೇವರನ್ನು ಸುಳ್ಳುಗಾರನು ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲಾ ಅನ್ನುವುದನ್ನು ತೊರಿಸುತ್ತದೆ. ಸತತವಾಗಿ ನಾವು ಮಾಡಿದ ಪಾಪಕ್ಕೆ ಅಂಗೀಕಕಾರ ಮಾಡುವುದು ಬಹಳ ಅವಶ್ಯ. ( ನಮ್ಮ ಪಾಪದ ಪ್ರತಿಯಾಗಿ ದೇವರೊಂದಿಗೆ ಸಹಮತಿಯಾಗುವುದು).

**<u>ಪರಿಣಾಮಗಳು</u>**
ದೇವರೊಂದಿಗೂ ಮತ್ತು ಇತರರೊಂದಿಗೂ ಸಹವಾಸವಾಗಿ ಇರುವಂತದ್ದು ನಮ್ಮ ಸೇವೆಗೆ ಮತ್ತು ನಮ್ಮ ಜೀವನಕ್ಕೆ ಅಹ್ಲಾದಕರ ಹಾಗೂ ಕೇಂದ್ರವಿಷಯವಾಗಿದೆ. ನಮ್ಮ ಸ್ವಾರ್ಥತೆ ಮುರಿಯಲು ಸಾದ್ಯ, ನಾವು ಸತ್ಯತೆಯನ್ನು ಅಭ್ಯಾಸ ಮಾಡಲಿಲ್ಲ ಅಂದರೆ ನಾವು ಮಾತಾಡುವ ಯೇಸುವಿನ ಮಾತುಗಳು ಯಾರು ಕೇಳುವುದಿಲ್ಲಾ.

ತಂಡದಲ್ಲಿ ಈ ವಿಷಯಗಳಿಗೆ ಪ್ರಾಮಾಣಿಕವಾಗಿ ಯಾಕೆ ಮತ್ತು ಅದಕ್ಕೆ ಪ್ರಾಮಾಣಿಕ ಉತ್ತರಗಳನ್ನು ಕೊಡುವುದು ಬಹಳ ಪ್ರಾಮುಖ್ಯ. ದೇವರೊಂದಿಗೂ ಮತ್ತು ಇತರರೊಂದಿಗೂ ಜವಬ್ದಾರಿಯುತವಾಗಿದ್ದರೆ, ನಾವು ದೇವರ ಕೃಪೆಯಲ್ಲಿ ಮತ್ತು ಮಧುರವಾದ ಕ್ರಿಸ್ತನ ಸಹವಾಸ ದಲ್ಲಿ ಬೆಳೆಯಲು ಸಾದ್ಯ.

ಬಹಿರಂಗವಾಗಿ ನಮ್ಮ ಪಾಪಗಳನ್ನು ದೇವರಿಗೆ ಅರಿಕೆ ಮಾಡಿಕೊಂಡಾಗ, ಆತನು ಕ್ಷಮಿಸಲು ನಂಬಿಗಸ್ತನಾಗಿದ್ದಾನೆ. ಕೇವಲ ದೇವರಿಂದ ನಾವು ಕ್ಷಮಾಪಣೆ ಪಡೆದುಕೊಳ್ಳುವ ಅನುಭವ ನಮಗಿದ್ದರೆ ಸರಳವಾಗಿ ಇತರರನ್ನು ಕ್ಷಮಿಸಲು ಸಹಾಯಕವಾಗುತ್ತದೆ. ನಮ್ಮ ಪಾಪಗಳಿಗಾಗಿ ಪ್ರಮಾಣಿಕತೆ ಇದೆಯಾ ಅನ್ನುವುದು ಲೋಕವು ಗಮನಿಸುತ್ತಾ ಇದೆ, ದೇವರಲ್ಲಿಯ ಪ್ರೀತಿ ಕ್ಷಮಾಪಣೆ ನಾವು ಹೊಂದಿಕೊಂಡ ಪ್ರಕಾರ,ಅದನ್ನೇ ಇತರರಿಗೆ ನಾವು ಹಂಚುತ್ತಾ ಇದ್ದೆವೋ ಇಲ್ಲವೋ ಅನ್ನುವುದನ್ನು ಜನರು ನೋಡುತ್ತಾಇರುವರು. ದೇವರೊಂದಿಗಿನ ಮತ್ತು ಇತರರೊಂದಿಗಿನ ಸಹವಾಸದಲ್ಲಿ ಆನಂದ ಹರುಷವುಳ್ಳವರಾಗಿದ್ದೆವೋ ಅಥವಾ ಇಲ್ಲವೋ ಅದನ್ನು ಸಹ ಲೋಕವು ಗಮನಿಸುತ್ತಾ ಇದೆ. ಪ್ರಪಂಚವು ನೋಡುತ್ತಾ ಇದೆ, ಆದರೆ ನೀನು ಏನನ್ನು ತೋರಿಸುತ್ತಾ ಇದೆಯಾ?

**ಮೂಲ ಸತ್ಯತೆ: ಸಹವಾಸವು ದೇವರೊಂದಿಗೂ ಮತ್ತು ಇತರರ ವಿಶ್ವಾಸಿಗಳೊಂದಿಗೂ ನಿರ್ವಹಿಸುವ ಹಾಗೆ ಕ್ರಮವಾಗಿ ನಿನ್ನ ಪಾಪಗಳನ್ನು ಅಂಗೀಕಾರ ಮಾಡಿಕೊ.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *8:* ಬೇರೆಯವರನ್ನು ಶಿಷ್ಯಾರಾಗಿ ಮಾಡಲು ಬೇಕಾದ ಅವಶ್ಯಕತೆಗಳು

ನಮ್ಮ ಕರೆ ಅನೇಕ ಸಭೆಗಳನ್ನು ಸ್ಥಾಪನೆ ಮಾಡುವ ಶಿಷ್ಯರನ್ನು ಗುಣಿಕರೀಸುವುದು ಆಗಿದೆ. ನೀನು ನಂಬಿಗಸ್ತನಾಗಿ ಸುವಾರ್ತೆಯನ್ನು ಸಾರಿದರೆ ಅನೇಕ ಜನರು ಅದನ್ನು ಕೇಳಿ ಯೇಸುವನ್ನು ಸ್ವಂತ ರಕ್ಷಕನ್ನಾಗಿ ಅಂಗೀಕಾರ ಮಾಡಿಕೊಳ್ಳುತ್ತಾರೆ. ಇಂತಹ ವಿಶ್ವಾಸಿಗಳನ್ನು ಕ್ರಮೇಣವಾಗಿ ಕ್ರಿಸ್ತನಲ್ಲಿ ಬೆಳೆಸಿ ಅನೇಕ ಶಿಷ್ಯರನ್ನಾಗಿ ತಯಾರಿಸುವುದು ಬಹಳ ಪ್ರಾಮುಖ್ಯ. ಎಲ್ಲಿ ಜನ ಇರುತ್ತಾರೋ ಅಲ್ಲಿ ಅಂದರೆ ಅವರ ಮನೆ ಅಥವಾ ಅವರ ಕೆಲಸದ ಜಾಗದಲ್ಲಿ ಹೋಗಿರಿ, 2 ಅಥವಾ 3 ಜನರನ್ನು ಗುಂಪಾಗಿ ಮಾಡಿ ಅವರಿಗೆ ಭೋಧನೆ ಮಾಡಿ ಶಿಷ್ಯರನ್ನಾಗಿ ಮಾಡಿರಿ. ಸಾದ್ಯವಾದರೆ 48 ತಾಸಿನ ಒಳಗೆ ಹೊಸ ವಿಶ್ವಾಸಿಗಳನ್ನು ಭೇಟಿಯಾಗು. ದೇವರನ್ನು ನಂಬುವ ಸಮಯ ಬಂದಾಗ ವಾಕ್ಯದಿಂದ ಬಲಪಡಿಸಿರಿ ಆದರೆ ಹೊಸ ಒಡಂಬಡಿಕೆಯ ಯೋಹಾನ ಪುಸ್ತಕವನ್ನು ಅವರಿಗೆ ಕೊಡಿರಿ. ನಿನ್ನ ಕೈಯಲ್ಲಿ ಆದರೆ 4 ಪಾಠದಿಂದ ಕೂಡಿರುವ/ ನಾಲ್ಕು ಭೇಟಿ ಯೋಹಾನ ಪುಸ್ತಕದಿಂದ ತೆಗೆದ ಸುವಾರ್ತೆಯ ಮಗ್ರಿಯನಿಯಮಗಳನ್ನು ಅವರಿಗಾಗಿ ಉಪಯೋಗಿಸಿರಿ. ಮೊದಲನೆ ಬೇಟಿಯಾದ ನಂತರ ಒಂದು ವಾರಕ್ಕಿಂತ ಮುಂಚೆ ಇನ್ನೊಂದು ಬೇಟಿಗಾಗಿ ಸಮಯದ ನೇಮಿತ ಮಾಡಿಕೊಳ್ಳಿ, ಅದೇ ರೀತಿ ಅದು ಮುಗಿಯುವವರೆಗೆ ವಾರಕ್ಕೊಮ್ಮೆ ಭೇಟಿ ಕೊಡಿರಿ.

**<u>ಅನುಸರಣೆಗಾಗಿ ಅಗತ್ಯತೆ ಮತ್ತು ಶಿಷ್ಯತ್ವದ ಉಪಕರಣಗಳು</u>**

ಹೊಸ ವಿಶ್ವಾಸಿಗಳನ್ನು ಗುಣಿಕರಿಸುವ ಶಿಷ್ಯರನ್ನಾಗಿ ತಯಾರಿಸಲು ಕೇವಲ ಸತ್ಯವೇದದ ಅದ್ಯಯನ ಮಾತ್ರ ಅಲ್ಲ ಅದಕ್ಕಿಂತ ಹೆಚ್ಚಿನದು ಅವಶ್ಯ. ಇಲ್ಲಿ ಶಿಷ್ಯರನ್ನಾಗಿ ಮಾಡಲು ಕೆಲವು ಸಾಮಗ್ರಿಗಳಿವೆ ಅವುಗಳನ್ನು ಉಪಯೋಗಿಸು:

1. **ಸತ್ಯವೇದ:** ಅತಿ ಪ್ರಾಮುಖ್ಯವಾದ ಪಠ್ಯಕ್ರಮ ಅದನ್ನು ಶಿಷ್ಯರನ್ನಾಗಿ ತಯಾರಿಸಲು ಉಪಯೋಗಿಸಬಹುದಾದ ಸಂಗತಿ! *(2 ತಿಮೋ 3:16-17)*
2. **ಪ್ರಾರ್ಥನೆ:** ನಂಬಿಗಸ್ತರಾಗಿ ನಿಮ್ಮ ಹೊಸ ವಿಶ್ವಾಸಿಗಳೊಂದಿಗೆ ಪ್ರಾರ್ಥಿಸಿರಿ. *(ಎಫೆಸ 1:15-23)*
3. **ಉತ್ತೇಜಿಸು:** ಹೊಸ ವಿಶ್ವಾಸಿಗಳನ್ನು ಪವಿತ್ರಾತ್ಮನ ಮೇಲೆ ಆತುಕೊಂಡು ಕ್ರಿಸ್ತನ ಹೋಲಿಕೆಯ ಹಾಗೆ ಆಗಲು ಅವರನ್ನು ಉತ್ತೇಜಿಸು. *(2 ಕೋರಿ 3:17-18)*
4. **.ನೀನು:** ಹೊಸ ವಿಶ್ವಾಸಿಗಳ ಮದ್ಯ ನಿನ್ನ ಪ್ರಭಾವ ಮತ್ತು ನೀನು ಅವರೊಂದಿಗೆ ಭಾಗಿಯಾಗುವುದು ಬಹಳ ಮುಖ್ಯ. ಕಾಲವನ್ನು ಗೊತ್ತು ಮಾಡಿಕೊಂಡು ಹೊಸ ವಿಶ್ವಾಸಿಗಳೊಂದಿಗೆ ಸತ್ಯವೇದದ ಅದ್ಯಯನದ ಹೊರತು ಪಡಿಸಿ ಮತ್ತೊಮ್ಮೆ ಬೇಟಿ ಮಾಡಿರಿ. ಅವರನ್ನು ಸಹ ಸುವಾರ್ತೆಗೆ ಕರೆದುಕೊಂಡು ಹೊಗಿ ಅವರು ಸಹ ನೀನು ಹೇಗೆ ಯೇಸುವನ್ನು ಅನುಸರಿಸುತ್ತಿಯೋ ಅನ್ನುವುದನ್ನು ನೋಡಲಿ. *(2 ತಿಮೋ 3:10-11)*

ನಾಲ್ಕನೆಯ ಬೇಟಿಯನಂತರ, ಮುಂದಿನ 20 ಬೇಟಿಯ ಸಮಯಕ್ಕಾಗಿ ಅವರನ್ನು ಕೇಳಿರಿ ನಂಬಿಗಸ್ತರಾಗಿ ಅದನ್ನು ಮಾಡಲು ಹೇಳಿರಿ ಮತ್ತು ಅವರನ್ನು ಶಿಷ್ಯರನ್ನಾಗಿ ತಯಾರಿಸಲು ಸಹಾಯ ಮಾಡಿರಿ. ಹೇಗಂದರೆ **1)** ಸತ್ಯವೇದ ಕಲಿಯುವುದು ಮತ್ತು ಹೇಗೆ ಯೇಸುವನ್ನು ಹಿಂಬಾಲಿಸುವುದು. (ಬೆಳವಣಿಗೆ) **2)** ಹೇಗೆ ಯೇಸುವಿನ ಬಗ್ಗೆ ಇತರರಿಗೆ ತಿಳಿಸುವುದನ್ನು ತೋರಿಸುವುದು (ಸಾಕ್ಷಿ) **3)** ಇತರರನ್ನು ಹೇಗೆ ಶಿಷ್ಯರನ್ನಾಗಿ ತಯಾರಿಸಲು ಈ ಉಪಕರಣಗಳನ್ನು ಉಪಯೋಗಿಸಲು ಉತ್ತೇಜಿಸುವುದು. (ಗುಣಿಕರಿಸುವುದು) ನಿನ್ನ ಗುರಿ ಕೇವಲ ಬೆಳೆಯುವ ಶಿಷ್ಯರನ್ನಾಗಿ ಅಷ್ಟೇ ಅಲ್ಲ ಇತರರನ್ನು ಶಿಷ್ಯರನ್ನಾಗಿ ಮಾಡಲುಶಕ್ಯ ರಾದ ಶಿಷ್ಯರುಗಳನ್ನು ತಯಾರಿಸುವುದು.

**<u>ನೀವು ಒಟ್ಟಾಗಿ ಕೂಡಿಬರುವ ವೇಳೆ ಈ 5 ಹೆಜ್ಜೆಗಳ ಪ್ರಕ್ರಿಯೆಯನ್ನು ಅನುಸರಿಸಿರಿ</u>**

1. **ಸಂಬಂಧಗೊಳಿಸಿರಿ**: ನೀವು ಕಡೆಯ ಸಾರಿ ಭೇಟಿಯಾದಂದಿನಿಂದ ಇಲ್ಲಿಯ ತನಕ ಅವರು ಹೇಗಿರುತ್ತಾರೆ ಮತ್ತು ಅವರ ಜೀವಿತಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಕಂಡುಕೊಳ್ಳಿರಿ.
2. **ಪ್ರೋತ್ಸಾಹಿಸಿರಿ**: ಪಕ್ವತೆಯಿಂದ ಉತ್ತರಿಸುವ/ಹೊಣೆಗಾರಿಕೆಯ ಪ್ರಶ್ನೆಗಳನ್ನು ಕೇಳುವ ಮೂಲಕ ನಿಮ್ಮ ಸಮಯವನ್ನು ಆರಂಭಗೊಳಿಸಿರಿ:
   - *A.* ನಾವು ಕೊನೆಯ ಬಾರಿ ಭೇಟಿಯಾದ ಸಮಯದಿಂದ ಇಲ್ಲಿಯ ತನಕ ಪ್ರತಿ ದಿನ ದೇವರ ವಾಕ್ಯವನ್ನು ಧ್ಯಾನಿಸುವುದು ಮತ್ತು ಪ್ರಾರ್ಥನೆ ಮಾಡುವ ಮೂಲಕ ಆತನ ಸಂಗಡ ಏಕಾಂತ ಸಮಯವನ್ನು ಕಳೆದಿರುವಿರೋ*?* ದೇವರು ನಿಮಗೆ ಏನನ್ನು ಹೇಳಿದನು*?*
   - *B.* ನೀವು ನಿಮ್ಮ ಕುಟುಂಬ, ಸ್ನೇಹಿತರು, ನೆರೆಯವರು, ಮತ್ತು ಸಭೆಗಳಲ್ಲಿ ನಿಮ್ಮ ಪ್ರಾಮುಖ್ಯವಾದ ಸಂಬಂಧಗಳಲ್ಲಿ ಪ್ರೀತಿಯಿಂದ ನಡೆದುಕೊಂಡಿರುವಿರೋ*?*
   - *C.* ನೀವು ಒಂದು ವ್ಯಸನಕರ ವರ್ತನೆಗೆ ನಿಮ್ಮನ್ನು ಒಪ್ಪಿಸಿಕೊಂಡಿರುವಿರೋ*?*
   - *D.* ನೀವು ಕಳೆದ ಸಾರಿ ನಮ್ಮ ಬೈಬಲ್ ಅಧ್ಯಯನ ವೇಳೆ ಮಾಡಿಕೊಂಡ ಸಮರ್ಪಣೆಯನ್ನು ಪೂರ್ತಿಗೊಳಿಸಿದಿರೋ*?* ಹೇಗೆ*?*

3. **ಚರ್ಚಿಸಿರಿ**: ಪ್ರತಿಯೊಂದು ಭೇಟಿಯ ವೇಳೆ ನೀಡಲಾಗಿರುವ ಬೈಬಲ್ ವಾಕ್ಯಭಾಗವನ್ನು ಓದಿರಿ ಮತ್ತು 6 ಪ್ರಶ್ನೆಗಳ ನಮೂನೆಯನ್ನು ಬಳಿಸಿ ಚರ್ಚೆ ಮಾಡಿರಿ (ಮಾರ್ಗಸೂಚಿಗಳು ಸಾಧನದಲ್ಲಿ ಬರೆಯಲ್ಪಟ್ಟಿವೆ).
4. **ಯೋಜನೆ ಮಾಡಿರಿ**: ವಾರದ ವೇಳೆಯಲ್ಲಿ ಪ್ರತಿಯೊಬ್ಬನು ಓದುವ ಬೈಬಲಿನ ವಾಕ್ಯಭಾಗದ ವಿಷಯದಲ್ಲಿ ಒಮ್ಮತವನ್ನು ವ್ಯಕ್ತಪಡಿಸಿಕೊಳ್ಳಿರಿ. *(ದಿನಕ್ಕೆ 3 ಅಧ್ಯಾಯಗಳನ್ನು ಓದುವುದು ಸೂಚಿಸಲ್ಪಟ್ಟಿರುತ್ತದೆ).*
5. **ಪ್ರಾರ್ಥಿಸಿರಿ**: ಒಬ್ಬರಿಗೊಬ್ಬರು ಪ್ರಾರ್ಥಿಸುವ ಮತ್ತು 5 ಹಾಗೂ 6 ಪ್ರಶ್ನೆಗಳಿಗೆ ಮಾಡಿಕೊಂಡ ಸಮರ್ಪಣೆಗಳಿಗಾಗಿ ಪ್ರಾರ್ಥಿಸುವ ಮೂಲಕ ನಿಮ್ಮ ಸಮಯವನ್ನು ಮುಕ್ತಾಯಗೊಳಿಸಿರಿ.

**ಮೂಲ ಸತ್ಯತೆ: ಶಿಷ್ಯರನ್ನು ತಯಾರಿಸಲು ಅವಶ್ಯವಾದ ವಸ್ತುಗಳು ಏನೆಂದರೆ, ಸತ್ಯವೇದ, ಪ್ರಾರ್ಥನೆ, ಪವಿತ್ರಾತ್ಮದೇವರು, ಮತ್ತು ನೀನು.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *9:* ಪವಿತ್ರಾತ್ಮದೊಂದಿಗೆ ಸರಿಯಾದ ಸಂಭಂದ

ಸು ಕ್ರಿಸ್ತನೊಂದಿಗೆ ಅಂದರೆ ಇದರ ಅರ್ಥ ನಿನ್ನೊಳಗೆ ವಾಸವಿರುವ ಪವಿತ್ರಾತ್ಮನೊಂದಿಗೆ ಅಮೋಘ ವ್ಯಕ್ತಿಗತ ಸಂಭಂದ ಬೆಳೆಸಲು ದೇವರು ನಿನಗಾಗಿ ದೊಡ್ಡ ಯೋಜನೆಯನ್ನು ಹಾಕಿ ಇಟ್ಟಿದ್ದಾರೆ. *(ರೋಮಾ 8:9-14)* ನಿನ್ನ ಸ್ವಂತ ಬುದ್ಧಿಯಿಂದ ಆತನನ್ನು ಹಿಂಬಾಲಿಸುವುದು ದೇವರ ಉದ್ದೇಶವೇ ಇಲ್ಲವೇ ಇಲ್ಲಾ. ಆತನು ತನ್ನ ಆತ್ಮವನ್ನು ನಿನಗಾಗಿ ಕೊಟ್ಟಿದ್ದಾನೆ ನೀನು ಆ ಅತ್ಮದಲ್ಲಿ ಬೆಳೆದು ಕ್ರಿಸ್ತನ ಸ್ವಾರುಪ್ಯದಲ್ಲಿಯ ಸಾಮರ್ಥದಿಂದ ಆತನ ಸೇವೆಮಾಡುವುದಕ್ಕೊಸ್ಕರ. ನೀನು ಆತ್ಮದಲ್ಲಿ ನಡೆಯಬೇಕೆಂಬುದಕ್ಕಾಗಿ ಆತನು ಇದನ್ನು ಮಾಡಿದ್ದಾನೆ. *(ಗಲತ್ಯಾ 5:16)* ಇದರ ನಿರ್ದಿಷ್ಟ ಅರ್ಥವೇನು?

**<u>ಮೊದಲನೇದು</u>**: ಆತನು ನಿನ್ನನ್ನು ಸೌಕರ್ಯಗೊಳಿಸಿ ಪ್ರೋತ್ಸಾಹಗೊಳಿಸುವನು. *(ಯೋಹಾನ 14:15-21)* ಪವಿತ್ರಾತ್ಮದೇವರು ನಿನ್ನ ಸಲಹೆಗಾರನು, ಆತನು ನಿನ್ನ ಮನಸ್ಸಿನಲ್ಲಿ ನಿನ್ನ ಹೃದಯದೊಳಗಡೆ ಸೌಕರ್ಯಗೊಳಿಸುವನು, ಆದರೆ ಆತನ ಸೌಕರ್ಯತನವನ್ನು ಅನುಭವಿಸಲು ಆತನ ಆಜ್ಞೆಯನ್ನು ಅವಶ್ಯ ಅನುಸರಿಸಲೇ ಬೇಕು. *(ಯೋಹಾನ 15:14-15)*.

**<u>ಎರಡನೇದು</u>**: ಪವಿತ್ರಾತ್ಮ ದೇವರು ಎಲ್ಲಾ ರೀತಿಯ ಸತ್ಯತೆಯಲ್ಲಿ ನಿನ್ನನ್ನು ನಡೆಸುವನು *(ಯೋಹಾನ 16:12-15)* ಹಾಗೂ ಮೂಲ ಅಪೋಸ್ತಲರು ಪ್ರಸ್ತುತವಾಗಿ ಸತ್ಯವೇದದಲ್ಲಿ ಬರೆಯಲ್ಪಟ್ಟ ರೀತಿಯಲ್ಲಿ ನಮನ್ನು ಸಹ ಪ್ರೇರೇಪಿಸುತ್ತಾನೆ. ಆತನ ವಾಕ್ಯದ ಮೂಲಕ ತನ್ನ ಸತ್ಯತೆಯನ್ನು ಹೊರಪಡಿಸುವವನು ಸಹ ಆಗಿದ್ದಾನೆ. *(ಎಫೇಸ 1:17-18)* ಪವಿತ್ರಾತ್ಮದ ಸ್ವರವನ್ನು ಕೇಳುತ್ತಾ ಸತ್ಯವೇದವನ್ನು ನಾವು ಓದಬೇಕು ಮತ್ತು ಓದುವಾಗ ಮತ್ತು ಪ್ರಾರ್ಥಿಸುವಾಗ ದೇವರೇ ನನ್ನ ಹತ್ತಿರ ಮಾತನಾಡು ಅಂತ ಕೇಳಿಕೊಳ್ಳಬೇಕು.

**<u>ಮೂರನೇದು</u>**: ಪವಿತ್ರಾತ್ಮ ದೇವರು ಯೇಸುವಿನ ಹೋಲಿಕೆಯುಳ್ಳ ಜೀವನವನ್ನು ನಿನ್ನೊಳಗೆ ಉತ್ಪಾದಿಸುತ್ತಾನೆ. *(2 ಕೊರಿಂಥ 3:18)* ಯಾವಾಗ ನೀನು ಯೇಸುವನ್ನು ನಂಬುತ್ತಿಯೋ ಆತ್ಮನು ನಿನ್ನೊಳಗೆ ಬಂದು ವಾಸ ಮಾಡುತ್ತಾನೆ. *(2 ಕೊರಿಂಥ 5:17)* ಹೊಸದಾಗಿ ಹುಟ್ಟುವುದು ಕ್ರಿಸ್ತನಲ್ಲಿ ಪರಿಪಕ್ವತೆ ಹೊಂದಿದ್ದೆವೆ ಅಂತ ಅರ್ಥ ಅಲ್ಲಾ. ಆದರೆ ಪವಿತ್ರಾತ್ಮ ದೇವರು ನಿನ್ನೊಳಗೆ ದಿನೇ ದಿನೇ ಕಾರ್ಯ ಮಾಡಿ ಯೇಸುವಿನ ಚರಿತ್ರೆಯಹಾಗೆ ಬದಲಾಯಿಸುತ್ತಾನೆ, ಇದನ್ನು ನಾವು ಆತ್ಮನ ಫಲವೆನ್ನುತ್ತೆವೆ. *(ಗಲಾತ್ಯ5:22-23)* ದಿನಾಲು ನೀನು ಆತನಿಗೆ ಹೌದು ಸ್ವಾಮಿ ಅಂತ ಹೇಳಿ ಶಾರೀರ ಕೆಲಸಕ್ಕೆ ಇಲ್ಲಾ ಅಂತ ಹೇಳಿಕೊಂಡು ಬಂದಾಗಲೇ ಅದು ಸಾದ್ಯ.

**<u>ನಾಲ್ಕನೇದು</u>**: ಪವಿತ್ರಾತ್ಮನು ತಾನು ಏನು ಬಯಸುತ್ತಾನೆ ಅದನ್ನು ಹೇಳಲು ಮತ್ತು ಮಾಡಲು ಮಾರ್ಗದರ್ಶನ ಮಾಡುವನು. *(ರೋಮನ 8:14; ಗಲಾತ್ಯ 5:21; ಫಿಲಿಪ್ಪಿ 2:12-13)* ಆತ್ಮನಿಗೆ ಸಂತೋಷ ಪಡಿಸುವ ಕೆಲಸವನ್ನು ಮಾಡಲು ಕೇಳುವವನಾಗಿದ್ದಾನೆ. ಆತನು ನಿನ್ನ ಆತ್ಮ ಪ್ರಾಣದೊಂದಿಗೆ ಮಾತಾನಾಡುವವನಾಗಿದ್ದಾನೆ. ಆದರೆ ನಾವು ಬಹಳ ಜಾಗ್ರತೆಯಾಗಿರಬೇಕು ಯಾಕೆಂದರೆ ಸೈತಾನನು ಮತ್ತು ದುಷ್ಟಾತ್ಮಗಳು ಸಹ ನಮ್ಮ ಆಲೋಚನೆಯನ್ನು ಕೈ ತಪ್ಪಿಸುವಂತಹುಗಳಾಗಿವೆ, ಕ್ರಮೇಣ ಕ್ರಮೇಣವಾಗಿ ದಾರಿ ತಪ್ಪಿಸುವವಗಳಾಗಿವೆ ಇಂತಹ ಸಂದರ್ಬದಲ್ಲಿ ಬಹಳ ಜಾಗ್ರತೆ ಹಾಗೂ ಸೂಕ್ಷತೆಯುಳ್ಳವರಾಗಿರಬೇಕು. ಆದರೆ ವಾಕ್ಯಕ್ಕೆ ಮಾತ್ರ ಸ್ಪಂದಿಸಿ ಮುನ್ನಡೆಸಿಕೊಳ್ಳಬೇಕು.

**<u>ಐದನೇದು</u>**: ಪವಿತ್ರಾತ್ಮನು ಗೆಲ್ಲಲ್ಪಟ್ಟು ನಿಮ್ಮ ಮುಖಾಂತರ ಇತರರನ್ನು ಶಿಷ್ಯರನ್ನಾಗಿ ಮಾಡುತ್ತದೆ. *(ಯೋಹಾನ 15:26-27; ಅಪೋ 1:8; 1 ಪೇತ್ರ 4:10-11)* ನಮ್ಮ ಸ್ವಂತಃವಾಗಿ ಯಾವ ಮಹೋನ್ನತ ಕಾರ್ಯಗಳು ಮಾಡಲು ಸಾಧ್ಯವಿಲ್ಲಾ. ಆದರೆ ನಾವು ಇತರರಿಗೆ ಸಾಕ್ಷಿಗಳಾಗಿದ್ದಾಗ ಪವಿತ್ರಾತ್ಮನ ಕಾರ್ಯದಿಂದ ಅನೇಕರನ್ನು ಕ್ರಿಸ್ತನಂಬಿಕೆಯಲ್ಲಿ ತರುತ್ತದೆ. ಪವಿತ್ರಾತ್ಮ ದೇವರು ಆತ್ಮೀಕ ವರಗಳನ್ನು ಕೊಟ್ಟು ಅದನ್ನು ಉಪಯೊಗಿಸಿಕೊಳ್ಳುತ್ತಾನೆ. ವರಗಳು ಇತರರ ಏಳಿಗೆಗಾಗಿ ಹೊರತು ನಮಗಾಗಿ ಅಲ್ಲಾ. ಇತರರಿಗೆ ಯೇಸುವಿನ ಬಗ್ಗೆ ಸಾರುತ್ತಾ ಪವಿತ್ರಾತ್ಮದೊಂದಿಗೆ ಸಹಕರಿಸಿ. ಮತ್ತು ನಿಮ್ಮ ಮೂಲಕ ಅನೇಕರು ಬೆಳೆದು ಆಶಿರ್ವಾದ ಹೊಂದಲಿ ಎಂಬ ಬಯಕೆ ಇರಲಿ.

ಯೇಸು ನಮಗೆ ತನ್ನ ಆತ್ಮವನ್ನು ನಮ್ಮ ಸೌಕರ್ಯಕ್ಕಾಗಿ ಅನುಗ್ರಹಿಸಿದ್ದಾನೆ. ಯಾಕೆಂದರೆ ಅನೇಕರಿಗೆ ಕಲಿಸಲು ತಿಳಿಸಲು ಮನಸ್ಸು ಮಾರ್ಪಡಿಸಲು ಮತ್ತು ಮುನ್ನಡೆಸಿ ಅನೇಕರನ್ನು ಕ್ರಿಸ್ತನ ನಂಬಿಕೆಯಲ್ಲಿ ತರುವುದಕ್ಕಾಗಿ, ಕ್ಷಣ ಕ್ಷಣವಾಗಿ ಪವಿತ್ರಾತ್ಮನೊಂದಿಗೆ ಬಳಕೆಯಾಗಿದ್ದು ಆತನಲ್ಲಿ ಇರುವುದಾದರೆ ನೀವು ಪಲಭರಿತವಾದ ಮತ್ತು ಸಂತೋಷವುಳ್ಳ ಕೈಸ್ತ ಜೀವನವನ್ನು ಜೀವಿಸಲು ಸಾದ್ಯ.

**<u>ಮೂಲ ಸತ್ಯತೆ</u>: ದೇವರಾತ್ಮದೊಂದಿಗೆ ನಾವು ಸಹಕರಿಸಿದಾಗ ಆತನು ತನ್ನ ಆತ್ಮವನ್ನು ನಮಗಾಗಿ ಮತ್ತು ನಮ್ಮ ಸೇವೆಯ ನಿಮಿತ್ತವಾಗಿ ಅನುಗ್ರಹಿಸುತ್ತಾನೆ.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *10:* ಪರಿಪಕ್ವ ಮತ್ತು ಗುಣಿಕರಿಸುವ ಶಿಷ್ಯರನ್ನಾಗಿ ತಯಾರಿಸುವುದು

ಕ್ರಿಸ್ತನ ಮಹಾ ಆಜ್ಞೆ ಸ್ಪಷ್ಟವಾಗಿ ಇದೆ. ಹೋಗಿರಿ ಎಲ್ಲಾ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ( ಮತ್ತಾಯ 28:19) ಇದು ಸುವಾರ್ತೆಯ ಕಾರ್ಯಕ್ಕೆ ಸಾಲದು. ನಾವು ಅಂತಹ ಶಿಷ್ಯರನ್ನಾಗಿ ತಯಾರಿಸಬೇಕು ಆ ಶಿಷ್ಯರು ಇನ್ನೊಬ್ಬ ಶಿಷ್ಯರನ್ನಾಗಿ ತಯಾರಿಸುವಂತಿರಬೇಕು. ಅದೇ ರೀತಿ ಶಿಷ್ಯರು ಗುಣಿಕರಿಸಲ್ಪಟ್ಟಾಗ ಹೊಸ ಹೊಸ ಸಭೆಗಳು ಪ್ರಾರಂಭವಾಗಲು ಸಾದ್ಯವಾಗುತ್ತದೆ. ಹೊಸ ಒಡಂಬಡಿಕೆಯಲ್ಲಿ ನಾಲ್ಕು ತಲೆಮಾರಿನವರೆಗೆ ಪ್ರಭವಾ ಬೀಳುವ ಶಿಷ್ಯರನ್ನು ತಯಾರಿಸಲ್ಪಟ್ಟಿತ್ತು ಎಂಬದಾಗಿ ಕಾಣಸಿಗುತ್ತದೆ.

**ಮೊದಲನೆ ಹಂತ**: ಒಬ್ಬರನ್ನು ಕ್ರಿಸ್ತನ ನಂಬಿಕೆಯಲ್ಲಿ ತರುವಂತದ್ದಾಗಿದೆ. ಒಂದು ಶಿಷ್ಯನು ಮೊದಲು **ವಿಶ್ವಾಸಿಯಾಗಿರುತ್ತಾನೆ** *(1 ಯೋಹಾನ 5:11; 1 ಥೆಸ್ಸಲೋನಿಕ 1:7-8)* ದು:ಖದ ಸಂಗತಿ ಏನೆಂದರೆ ನಾವು ಅಷ್ಟರ ಮಟ್ಟಿಗೆ ನಿಲ್ಲಿಸುತ್ತೇವೆ, ಹೆಚ್ಚಾಗಿ ನಾವು ಜನರನ್ನು ಕ್ರಿಸ್ತನ ನಂಬಿಕೆಯಲ್ಲಿ ಕರೆದು ಸಭೆಗೆ ಸೇರಿಸುವ ವರೆ ಮಾತ್ರ ಸೀಮಿತ ವಿಡುತ್ತೇವೆ, ಆದರೆ ಹೊಸ ವಿಶ್ವಾಸಿಗಳು ಕ್ರಿಸ್ತನಲ್ಲಿ ಕೂಸುಗಳಾಗಿದ್ದಾರೆ ಅವರು ಬೆಳೆಯುವುದಕ್ಕಾಗಿ ವ್ಯಕ್ತಿಗತವಾಗಿ ಗಮನಹರಿಸುವುದು ಬಹಳ ಪ್ರಾಮುಖ್ಯ *(1 ಕೊರಿಂಥ 3:1-2; 1 ಪೇತ್ರ 2:2)* ಶಿಷ್ಯರನ್ನು ತಯಾರಿಸುವ ನಿನಗೆ ಬಹಳ ಪ್ರಾಮುಖ್ಯ. ಅವರಿಗೆ ಸಮಯವನ್ನು ಕೊಟ್ಟು ಅವರನ್ನು ವಿಶ್ವಾಸದಲ್ಲಿ ಬೆಳೆಸಬೇಕು ಯೇಸು ಕ್ರಿಸ್ತನು ಸಹ ವಿಶ್ವಾಸಕ್ಕೆ ಮೊದಲನೆ ಹಂತದಲ್ಲಿ ಇದ್ದವರನ್ನು ಹಾಗೆಯೆ ಮಾಡಿ ಬೆಳೆಸಿದ್ದಾನೆ. *(ಯೋಹಾನ 1:35-42).*

**ಎರಡನೇಯ ಹಂತ**: ವಿಶ್ವಾಸಿಗಳನ್ನು ಯೇಸುವಿನ **ಅನುಯಾಯಿಯಾಗಲು** ಸಹಾಯ ಮಾಡುತ್ತೇವೆ. *(ಮಾರ್ಕ 1;17, ಯೋಹಾನ 1:43, ಕೊಲೆಸ್ಸ 2:6-7)* ಯೇಸುವಿನ ಅನುಯಾಯಿಗಳು ಸಾಮಾನ್ಯ ಸತ್ಯತೆಯೆಂದರೆ ರಕ್ಷಣೆಯ ಬರವಸೆಯನ್ನು ಅರ್ಥಮಾಡಬಲ್ಲರು, ಮತ್ತು ಹೇಗೆ ಸತ್ಯವೇದವನ್ನು ಓದಬೇಕು ಅರ್ಥಮಾಡಿಕೊಳ್ಳಬೇಕು ಹೇಗೆ ಪವಿತ್ರಾತ್ಮನೊಂದಿಗೆ ಬಳಕೆಯಲ್ಲಿರಬೇಕು, ಮತ್ತು ದೀಕ್ಷಾಸ್ನಾನ ಹಾಗೂ ಸಭೆಯ ಮಹತ್ವ, ಹೇಗೆ ಅಂಗಿಕಾರ ಮಾಡಿಕೊಳ್ಳಬೇಕು, ಹೇಗೆ ಪ್ರಾರ್ಥಿಸಬೆಕು ಅನ್ನುವುದು ಏ ಸ್ ಐ ಸಾಧನದ ಕೈಪಿಡಿ ನಿಮಗೆ ಸಹಾಯ ಪಡುವುದು, ಮತ್ತು ಹೇಗೆ ಇದು ಕಾರ್ಯವಹಿಸುತ್ತದೆ ಅನ್ನುವುದು ಸಹ ತೋರಿಸುವುದು ಬಹಳ ಪ್ರಾಮುಖ್ಯ. ನಿನ್ನ ಸತ್ಯತೆಯ ಜೀವನವನ್ನು ಅವರು ನೋಡಬೇಕಾಗಿದೆ, ಈ ಹಂತದಲ್ಲಿ ಕ್ರಿಸ್ತನನ್ನು ಅನುಸರಿಸುವುದು ಹೇಗೆ ಎಂಬುದನ್ನು ನಿಮ್ಮ ಪಾತ್ರ ತೋರಿಸುತ್ತದೆ, *(1 ಕೊರಿಂಥ 11:1-2; 2 ತಿಮೋ 3:10-11)* ಯೇಸು ಪ್ರಾರ್ಥಿಸುವುದು, ಸಾಕ್ಷಿಯಾಗಿರುವುದು ಮತ್ತು ಬಡವರನ್ನು ಪರಾಂಬರಿಸುವುದು, ದೇವರ ವಾಕ್ಯವನ್ನು ಕಲಿಸುವುದು ಇವೆಲ್ಲಾ ಆತನ ಶಿಷ್ಯರು ಆತನನ್ನು ನೋಡಿ ಕಲಿತುಕೊಂಡರು, ನೀನು ಸಹ ಶಿಷ್ಯರನ್ನಾಗಿ ತಯಾರಿಸುವವರಿಗೆ ಹಾಗೆಯೇ ಮಾಡತಕ್ಕದ್ದು.

**ಮೂರನೆ ಹಂತವು**: ಯೇಸುವನ್ನು ಹಿಂಬಾಲಿಸುವವರು ಆತನಿಗಾಗಿ **ಕೆಲಸ ಮಾಡುವವರ** ಹಾಗೆ ಸಹಾಯಿಸುತ್ತದೆ. *(ಎಫೆಸ 4:12)* ಯೇಸು ಹೇಳಿದ್ದು: ನನ್ನನ್ನು ಹಿಂಬಾಲಿಸಿರಿ ನಾನು ನಿಮ್ಮನ್ನು ಮೀನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು. *(ಮಾರ್ಕ 1:17)* ಆತನನ್ನು ಹಿಂಬಾಲಿಸುವವರು ಮನುಷ್ಯರೆಂಬ ಮೀನನ್ನು ಹಿಡಿಯುವವರಾಗಿದ್ದಾರೆ, ಆತನನ್ನು ಹಿಂಬಾಲಿಸುವ ಪ್ರತಿಯೊಬ್ಬನಿಗೆ ಸುವಾರ್ತೆ ಸಾರಿ ಹೊಸ ವಿಶ್ವಾಸಿಗಳು ಕ್ರಿಸ್ತನಲ್ಲಿ ಬೆಳೆಯುವಂತೆ ಮಾಡುವುದನ್ನು ಕಲಿಸಬೇಕು. ಹಾಗೂ ಎಸ್ ಐ ಉಪದೇಶದ ಕೈ ಪಿಡಿ ಹೇಗೆ ಉಪಯೋಗಿಸುವುದನ್ನು ಸಹ ಕಲಿಸಬೇಕು, *(ಎಫೆಸ 4:12 ರಲ್ಲಿ)* ಹಿಂಬಾಲಕರು ಕರ್ತನ ಸೇವೆ ಅಂದರೆ ಜನರನ್ನು ಪ್ರೀತಿಸಿ ಅವರಿಗೆ ಸೇವೆ ಮಾಡುವ ಮಟ್ಟಿಗೆ ಬೆಳೆಯಬೇಕು ಎಂದು ಹೇಳುತ್ತದೆ. ನಿನ್ನ ಜೊತೆಯಾಗಿ ಸೇವೆಗೆ ಅವರನ್ನು ಕರೆದುಕೊಂಡು ಹೊಗು, ನಿಮ್ಮ ಪಾತ್ರವು ಏನೆಂದರೆ ನೀವು ತರಭೇತಿ ನೀಡಿದ ಪ್ರಕಾರ ನಿಮ್ಮ ಅನುಯಾಯಿಗೆ ಸೇವಾಕಾರ್ಯವನ್ನು ನಿಯೋಜಿಸುವಂತದ್ದು ಆಗಿದೆ. *(ಮತ್ತಾಯ 10 ಮತ್ತು ಲೂಕಾ 10)*

**ನಾಲ್ಕನೆಯ ಹಂತದ**: ಶಿಷ್ಯತ್ವವು ಕೆಲಸಗಾರರು **ಪುನರುತ್ಪಾದಿಸುವದಕ್ಕೆ** ಸಹಾಯವಾಗುತ್ತದೆ. *(ಮತ್ತಾಯ 9:36-37, 28:18-20; ಯೋಹಾನ 15:5, 16)* ಗುಣಿಕರಿಸುವುದು ನಮ್ಮ ಗುರಿಯಾಗಿದೆ, ಆದರೆ ನೀನು ತಯಾರಿಸುವ ಶಿಷ್ಯರು ನಿಜವಾದ ಇತರ ಶಿಷ್ಯರನ್ನು ತಯಾರಿಸುವರೆಗೆ ಇದು ಸಾದ್ಯವಿಲ್ಲಾ. *(2 ತಿಮೋ 2:2)* ಸತತವಾಗಿ ಅವರನ್ನು ಉತ್ತೇಜನ ಪಡಿಸು ಯಾಕೆಂದರೆ ಅವರು ಈಗ ಸಂಪೂರ್ಣವಾಗಿ ಬೇರೆ ಶಿಷ್ಯರನ್ನು ತಯಾರು ಮಾಡುವ ಸ್ಥಾನಕ್ಕೆ ಬಂದಿದ್ದಾರೆ. ನಾವು ಕ್ರಿಸ್ತನಲ್ಲಿ ನಂಬುವ ಜನರನ್ನು ಗೆದ್ದಮೇಲೆ ಅವರು ಇತರರನ್ನು ಶಿಸ್ತು ಮಾಡುವ ಮತ್ತು ಹೊಸ ಸೆಲ್ ಚರ್ಚುಗಳನ್ನು ಪ್ರಾರಂಬಿಸಲು ಸಹಾಯ ಮಾಡಿದರೆ ಮಾತ್ರ ನಾವು ಯಶಸ್ವಿಯಾಗುತ್ತೇವೆ. *(ಅಪೋ 6;1, 7)* ಶಿಷ್ಯರನ್ನು ಪುನರುತ್ಪಾದನೆ ಮಾಡುವವರ ಸಂಗಡ ನಿಮ್ಮ ಪಾತ್ರ ಏನೆಂದರೆ ಅವರನ್ನು ಗುಣಿಕರೀಸುವುದು ಆಗಿದೆ. ಇದು ನಿಮಗೆ ಬಹಳ ಪ್ರಾಮುಖ್ಯ ನಿಮ್ಮ ಪ್ರದೇಶವನ್ನು ತಲುಪಲು ಮಾಡಬೇಕಾದ ಯಾತ್ರೆ ಇದರಲ್ಲಿ ಭಾಗವಹಿಸಿ ಮತ್ತು ಅವರಿಗೆ ಇದರ ಬಗ್ಗೆ ಮಾಹಿತಿ ಕೊಟ್ಟು ಇದನ್ನು ಉಪಯೋಗಿಸಿ ಎಂದು ತಿಳಿಸಿರಿ.

ವಿಶ್ವಾಸಿಗಳು ಅನುಯಾಯಿಗಳಾಗಿ, ಅನುಯಾಯಿಗಳು ಕೆಲಸಗಾರರಾಗಿ, ಕೆಲಸಗಾರರು ಪುನರುತ್ಪಾದಿಸುವಂತವರಾಗುದಕ್ಕಾಗಿ ನಾವು ಪ್ರಾರ್ಥಿಸುತ್ತೇವೆ ಮತ್ತು ಕೆಲಸವೂ ಸಹ ಮಾಡುತ್ತೆವೆ. *(ಕೊಲೆಸ್ಸೆ 1:28-29)* ಆದರೆ ಈ ಹಂತಗಳು ಮತ್ತೊಂದರ ನಂತರ ಒಂದು ಕ್ರಮದಲ್ಲಿ ನಡೆಯುವುದಿಲ್ಲ. ಅವು ಒಂದೇ ಸಮಯಲ್ಲಿ ಎಲ್ಲವು ಆಗುತ್ತವೆ, ಒಂದು ಹೊಸ ವಿಶ್ವಾಸಿ ಬೆಳೆದ ಹಾಗೆ ಸೇವೆ ಸಲ್ಲಿಸಲಿ ಮತ್ತು ಶಿಷ್ಯರನ್ನು ಗುಣಿಕರಿಸಲಿ. ಇಂತಹ ಪ್ರಕ್ರಿಯೆ ಪುನರಾವರ್ತಿಸಿದರೆ, ಅತಿ ಶಿಘ್ರದಲ್ಲಿಯೇ ಇಡಿ ಪಟ್ಟನವೇ ಉಜ್ಜೀವಗೊಳ್ಳುತ್ತದೆ ಮತ್ತು ದೇಶ ವಿದೇಶಗಳಲ್ಲಿ ದೇವರ ಮಹಾ ಆಜ್ಞೆ ಫೂರೈಸಲಿಕ್ಕೆ ಸಾದ್ಯತೆ ಇದೆ.

**<u>ಮೂಲ ಸತ್ಯತೆ</u>: ನಿಮ್ಮ ಗುರಿಯು ಅನೇಕರನ್ನು ಪರಿಪಕ್ವ ಅನುಯಾಯಿಗನ್ನಾಗಿ ಮಾಡಿ ಅವರು ಸೇವೆ ಮಾಡಿ ದ್ವಿಗುಣವಾಗಿ ಮಾಡುವುದು ಆಗಿದೆ.**

# ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
# ದಿನಚರಿ ಯಾತ್ರೆ *11:* ದೇವರಿಂದ ಕೇಳಲ್ಪಡುವುದು

ದೇವರು ಪ್ರತಿದಿನ ತನ್ನ ಹೃದಯದಿಂದ ಹೊಸದಾದ ಪ್ರಕಾಶನೆ ನಿನ್ನ ಹೃದಯಕ್ಕೆ ಅನುಗ್ರಹಿಸಲು ಬಯಸುತ್ತಾನೆ..

> "ಬಳಲಿ ಹೋದವರನ್ನು ಮಾತುಗಳಿಂದ ಸುಧಾರಿಸುವದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ಯಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ." - ಯೆಶಾಯ *50:4*

ಬಹಿರಂಗಪಡಿಸುವುದು ಒಂದು ದೇವರ ಚರಿತ್ರೆಯಾಗಿದೆ. ತನ್ನ ಪ್ರತಿಯೊಂದು ಮಕ್ಕಳಲ್ಲೂ ತನ್ನನ್ನು ತಾನೇ ಸ್ವತಃ ಬಹಿರಂಗಪಡಿಸಲು ಬಯಸುತ್ತಾನೆ. ಪ್ರಪಂಚವನ್ನೇ ಸೃಷ್ಟಿಸಿದ ದೇವರು ಮಾನವನಿಗೆ ತನ್ನನ್ನು ಪ್ರಕಟಪಡಿಸುತ್ತಾಇದ್ದನೆ, *(ರೋಮಾ 1:20)* ಸತ್ಯವೇದವು ದೇವರ ಸ್ವಯಂ ಪ್ರಕಟಣೆಯಾಗಿದೆ, ದೇವರು ವ್ಯಕ್ತಿಯಾಗಿದ್ದಾನೆ ಆತನು ಮಾತಾಡುವವನಾಗಿದ್ದಾನೆ ಯೇಸು ಹೇಳಿದ್ದು ನನ್ನ ಕುರಿ ನನ್ನ ಸ್ವರವನ್ನು ಕೇಳುತ್ತದೆ ನಾನು ಅವುಗಳನ್ನು ಬಲ್ಲೆನು. *(ಯೋಹಾನ 10:27)*

ಒಬ್ಬ ಸಾಮಾನ್ಯ ಕ್ರೈಸ್ತ ಜೀವನವು ಒಬ್ಬರನ್ನೊಬ್ಬರು ಪ್ರೀತಿಸುವ ಇಬ್ಬರ ನಡುವೆ ಸಂಪರ್ಕ ನಡೆಯುವ ಸಂಬಂದ ವಾಸ್ತವವಾಗಿ ಆರೋಗ್ಯಕರ ಸಂಬಂದದಲ್ಲಿ ಎರಡು ಮಾರ್ಗ ಸಂಪರ್ಕ ಹೊಂದಿರದೆ ಇರುವುದು ಅದು ಅಸಹಜವಾಗಿದೆ

ಇಲ್ಲಿ ಸುಂದರವಾದ ವಾಗ್ದಾನ ನಮ್ಮ ಯೇಸುವಿನ ಮೂಲಕ: ನನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು. *(ಯೋಹಾನ 14:21)*

ಕ್ರಿಸ್ತನ ಆಜ್ಞೆಗಳಿಗೆ ನಮ್ಮ ವಿಧೇಯತೆ:

1. ಆತನಿಗೆ ನಮ್ಮ ಪ್ರೀತಿಯನ್ನು ತೋರಿಸುವುದು: ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು.
2. ತಂದೆಯ ಪ್ರೀತಿಯನ್ನು ಅನುಭವಿಸಲು ನಮಗೆ ಶಕ್ತಗೊಳಿಸುತ್ತದೆ: ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು;
3. ನಮ್ಮ ಹೃದಯದಲ್ಲಿ ಕ್ರಿಸ್ತನ ಹೃದಯವನ್ನು ಆಳವಾಗಿ ಅರ್ಥೈಸಿಕೊಳ್ಳುವಲ್ಲಿ ಫಲಿತಾಂಶ : ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು. *(ಯೋಹಾನ 14:21)*

ದೇವರು ನಿಮ್ಮೊಂದಿಗೆ ಹೆಚ್ಚು ಮಾತನಾಡಲು ಬಯಸುತ್ತೀರಾ? ಹಾಗಾದರೆ ಆತನು ಹೇಳಿದ ವಿಷಯಗಳಿಗೆ ಆತನಿಗೆ ವಿಧೆಯರಾಗುವುದಾದರೆ ಆತನು ಇನ್ನೂ ಹೆಚ್ಚಾಗಿ ನಿಮಗೆ ಕಾಣಿಸಿಕೊಳ್ಳುವನು.

ಇದು ಅದ್ಭುತವಾಗಿದೆ: ಸರ್ವಶಕ್ತನಾದ ದೇವರು ಅಸ್ಥಿತ್ವದಲ್ಲಿದ ಪ್ರಪಂಚಕ್ಕೆ ಮಾತಾನಾಡಿ ನಮ್ಮೊಂದಿಗೆ ನಿಕಟ ಸಂಬಂದವನ್ನು ಆಪೇಕ್ಷಿಸುತ್ತಾನೆ, ಅನ್ಯೋನ್ಯತೆಗೆ ಸಂಪರ್ಕ ಅಗತ್ಯವಿರುತ್ತದೆ, ಸಂಪರ್ಕವಿಡಲು ಮಾತನಾಡುವುದು ಅವಶ್ಯ. ನಿಮ್ಮ ಉತ್ತಮ ಸ್ನೇಹಿತನೊಂದಿಗೆ ನೀವು ಯಾವ ರೀತಿಯ ಸಂಬಂದವನ್ನು ಹೊಂದಿರುತ್ತೀರಿ? ನೀವು ಅವರೊಂದಿಗೆ ಸಂಪರ್ಕ ಮಾಡದಿದ್ದರೆ ಯಾವುದೇ ಸಂಬಂದವಿಲ್ಲದ ಹಾಗೆ ಆಗುತ್ತದಲ್ಲಾ.

ಹೆಚ್ಚಾಗಿ ನಾವು ದೇವರೊಂದಿಗೆ ಕೇಳುವುದು **ಏನು**: "ನಾನು ಏನು ಮಾಡಲಿ?" ಯಾವಾಗಲೂ ಆತನು ನಮ್ಮೊಂದಿಗೆ ಆತನು **ಯಾರು** ಅನ್ನುವುದನ್ನು ಹೇಳಬಯಸುತ್ತಾನೆ:

"ನೀನು ನನ್ನ ಕಣ್ಣುಗುಡ್ಡಿನಂತೆಯೇ." *(ಕೀರ್ತನೆ 17:8)*
"ನೀನು ನನ್ನ ಪ್ರಿಯಮಗನು ನಿನಗೆ ಪ್ರಸನ್ನನಾದೆನು, ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನು ಮಾನ್ಯನು ಪ್ರಿಯನು ಆಗಿದ್ದಿ." *(ಯೆಶಾಯ 43:4)*

**ಪ್ರತಿ ಕ್ಷಣವು ದೇವರು ನಮ್ಮೊಂದಿಗೆ ಮಾತನಾಡುತ್ತಾನೆ, ತನ್ನನ್ನು ತಾನೇ ಸ್ವತಃ ಪ್ರಕಟ ಪಡಿಸುಕೊಳ್ಳುವವನೂ ಆಗಿದ್ದಾನೆ,ಆತನು ಮಾತನಾಡದ ಒಂದು ಗಳಿಗೆಯಾಗಲಿ ಒಂದು ದಿನವಾಗಲಿ ಇಲ್ಲಾ. ಆದರೆ ನೀನು ಆತನ ಸ್ವರ ಕೇಳುತ್ತಾ ಇದ್ದೆಯಾ?**

ದೇವರಿಗೆ ಈ ಪ್ರಶ್ನೆಯನ್ನು ಕೇಳುವುದು ಇದೀಗ ನಿಲ್ಲಿಸಿ: ನೀವು ನನ್ನ ಬಗ್ಗೆ ಏನು ಯೋಚಿಸುತ್ತೀರಿ ಅನ್ನುವುದು? ಈಗಲೇ ಆತನು ಮಾತಾನಾಡುತಾನೆ. ಸುಮ್ಮನೆ ಆತನ ಸ್ವರವನ್ನು ಕೇಳಿ ಮತ್ತು ನಿಮ್ಮ ವಿಧೇಯತೆಯ ನಿಮಿತ್ತ ದೇವರಿಗೆ ಪ್ರತಿಜ್ಞೆ ಮಾಡಿ. ಆತನು ಏನೆಲ್ಲಾ ಮಾತನಾಡಿದರು ಅದಕ್ಕೆ ಪ್ರತಿಉತ್ತರವಾಗಿ ಹೌದು ಅನ್ನುವುದೇ ಆಗಿರಬೇಕು.

**ಮೂಲ ಸತ್ಯತೆ: ದೇವರು ಏನು ಹೇಳುತ್ತಿದ್ದಾನೆ ಎಂಬುದನ್ನು ಎಚ್ಚರಿಕೆಯಿಂದ ಕೇಳಬೇಕು ಮತ್ತು ತಕ್ಷಣ ಪ್ರತಿಕ್ರಿಯಿಸಬೇಕು.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *12:* ಹೊಸ ಸೆಲ್ ಚರ್ಚಗಾಗಿ ಒಂದು ಸೈಟನ್ನು ಆಯ್ಕೆಮಾಡಿ

ಸಭೆಗಾಗಿ ಯೇಸುವಿನ ದರ್ಶನ ಏನೆಂದರೆ, **1)** ಹೊಸ ವಿಶ್ವಾಸಿಗಳನ್ನು ಪ್ರಬುದ್ಧ ಹಾಗೂ ಗುಣಿಸಲ್ಪಡಲು ಯೋಗ್ಯ ಶಿಷ್ಯರಾಗಿ ಬೆಳೆಸುವುದು. **2)** ಸುವಾರ್ತೆಯನ್ನು ಕೇಳಬೇಕಾದ ಹೊಸ ಸ್ಥಳಗಳಿಗೆ ನಿರಂತರವಾಗಿ ವಿಸ್ತರಿಸುವುದು. *(ಅಪೋಸ್ತಲ 8:1; 8:1; 11:19-21 ರೋಮಾ 15:20)* ದೇವರು ತನ್ನ ಸಭೆಗೆ ಯಾವಾಗಲೂ ಮಿಶನ್ ಕಾರ್ಯದಲ್ಲಿದ್ದುಕೊಂಡು ಸುವಾರ್ತೆ ನಿಮಿತ್ತ ಹೊಗುವ ಎಲ್ಲಾ ಕಡೆ ಮತ್ತು ನೀವು ಇರುವ ಸ್ಥಳಗಳಲ್ಲಿ ನಿಷ್ಠಾವಂತಾರಾಗಿರಬೇಕೆಂದು ಬಯಸುತ್ತಾನೆ.

ಮಹಾನ ಆಯೋಗವನ್ನು ಪೂರೈಸಲು ದೇವರು ನಿಮ್ಮ ತಂಡವನ್ನು ಹೊಸ ಸ್ಥಳಗಳಲ್ಲಿ ಹೊಸ ಸೆಲ್ ಸಭೆ ಸ್ಥಾಪಿಸಲು ಮುನ್ನಡೆಸುವವನಾಗಿದ್ದಾನೆ. ಅಂತಹ ಸ್ಥಳಗಳನ್ನು ಅಯ್ಕೆ ಮಾಡಿ ಪ್ರಾರ್ಥನೆಯಲ್ಲಿಡಿ, ಪ್ರಾರ್ಥನೆಯು ಮುಂದೆ ಎಲ್ಲಿಗೆ ಹೋಗಬೇಕು ಅನ್ನುವದನ್ನು ನಿರ್ಧಾರ ಮಾಡಲು ಸಹಾಯಿಸುತ್ತದೆ. ಇದು ನಿಮ್ಮ ಪ್ರಸ್ತುತ ಸ್ಥಳದ ಹತ್ತಿರದಲ್ಲಿ ನೆರೆಹೊರೆಯಂತಹ ಭೌಗೋಳಿಕ ಸ್ಥಳವಾಗಬಹುದು. ಅಥವಾಹತ್ತಿರದ ಹಳ್ಳಿ ಹಾಗೂ ಪಟ್ಟಣವಾಗಿರಬಹುದು, ಅಥವಾ ಮತ್ತೊಂದು ಹಾಗೂ ಬೇರೆ ದೇಶವೂ ಆಗಬಹುದು ಎಲ್ಲಿ ದೇವರು ತನ್ನ ಸುವಾರ್ತೆಯನ್ನು ತೆಗೆದುಕೊಂಡು ಹೋಗಲು ಬಯುಸುತ್ತಾನೆ. ನಿಮ್ಮ ವಿಸ್ತರಣೆಯು ಭೌಗೋಳಿಕವಾಗಿಲ್ಲದಿರಬಹುದು, ಆದರೆ ಸಾಂಸ್ಕೃತಿಕವಾಗಿ ಜನರ ಗುಂಪು ಆಗಿರಬಹುದು ಅಥವಾ ವಿಭಿನ್ನ ಬುಡಕಟ್ಟು ಜನಾಂಗದವರು ಅಥವಾ ಯುನಿವರ್ಸಿಟಿ ವಿದ್ಯಾರ್ಥಿಗಳಂತಹ ಒಂದು ನಿರ್ಧಿಷ್ಟಗುಂಪುಯಾಗಿರಬಹುದು ಅಥವಾ ವಿದೇಸಿ ರಾಷ್ಟಗಳು ಆಗಿರಬಹುದು, ದೇವರು ನಿನ್ನನ್ನು ಅಲ್ಲಿಗೆ ಕಳುಹಿಸಲು ಬಯಸುತ್ತಾನೆ.

ಆದ್ದರಿಂದ ಮೊದಲ ಹೆಜ್ಜೆ ನೀವು ಎಲ್ಲಿ ಹೋಗಬೇಕೆಂದು ದೇವರು ಬಯಸುತ್ತಾನೆ ಅನ್ನುವ ನಿರ್ಧಾರ, ಎರಡನೇದು ಪವಿತ್ರಾತ್ಮನಿಗೆ ಮಾರ್ಗದರ್ಶನ ತೋರಿಸು ಎಂದು ಪ್ರಾರ್ಥಿಸುವುದಾಗಿದೆ. ಯಾವರೀತಿ ಹೊಸ ಜಾಗದಲ್ಲಿ ಸುವಾರ್ತೆಯನ್ನು ತೆಗೆದುಕೊಂಡು ಹೊದನೋ ಇದು ಪೌಲನ ಅನುಭವ ವಾಗಿತ್ತು. *(ಅಪೋಸ್ತಲ 16:6-11)* ಪವಿತ್ರಾತ್ಮನು ಪೌಲ ಮತ್ತು ಅವನ ತಂಡವನ್ನು ಏಷ್ಯಾ ಮತ್ತು ಬೇಥಾನ್ಯಕ್ಕೆ ಪ್ರವೇಶಗೊಳಿಸಲು ತನ್ನ ಹತೋಟಿಯಲ್ಲಿ ಇಟ್ಟು ಕೊಂಡಿದ್ದನು,ನಂತರ ಮ್ಯಾಸೆಡೊನಿಯಾದಿಂದ ಒಬ್ಬ ಮನುಷ್ಯನು ಸಹಾಯಕ್ಕಾಗಿ ಕರೆಯುವದನ್ನು ದರ್ಶನವಾಗಿ ಕಂಡನು, ಇದರಿಂದ ತಾವು ಹೋಗಬೇಕಾಗಿರುವ ಮತ್ತು ದೇವರು ಬಯಸಿದ ಸ್ಥಳ ಎಂದು ತಿಳಿದು, ಪಿಲಿಪ್ಪಿಗೆ ಹೋಗಿ ಸುವಾರ್ತೆಸಾರಿ ಸಭೆ ಪ್ರಾರಂಭಿಸಿದರು, ಪೌಲನ ಸೇವೆಯಲ್ಲಿ ಆ ಸಭೆ ಅತ್ಯಂತ ಶಕ್ತಿಶಾಲಿ ಮತ್ತು ಎಲ್ಲಾ ಸಭೆಗಳಿಗೆ, ಬೆಂಬಲಿತ ಸಭೆಯಾಗಿ ಮಾರ್ಪಟ್ಟಿತ್ತು.

ನಮಗೆ ಮಾರ್ಗದರ್ಶನ ನೀಡಲು ಈ ಕಥೆಯಿಂದ ಕೆಲವು ಪ್ರಮುಖ ತತ್ವಗಳನ್ನು ನಾವು ಕಲಿತೆವು:

**ಮೊದಲಿಗೆ**: ಹೊಸ ಜನರನ್ನು ತಲುಪಲು ಬದ್ಧರಾಗಿರ್ರಿ. ಪೌಲನು ಮಾತು ಆತನ ತಂಡವು ಸುವಾರ್ತೆಯನ್ನು ಹೊಸ ಪ್ರದೇಶಗಳಿಗೆ ಮತ್ತು ಹೊಸ ಗುಂಪುಗಳಿಗೆ ತೆಗೆದುಕೊಂಡು ಹೋಗುವುದರಲ್ಲಿ ಸಕ್ರಿಯವಾಗಿದ್ದರು. ಆದರೆ ಈಗ ಹಲವಾರು ಸಭೆಗಳು ಹೊಸ ಸ್ಥಳಗಳಲ್ಲಿ ಸುವಾರ್ತೆ ತಲುಪಿಸುದವರಲ್ಲಿ ಮತ್ತು ವಿಸ್ತರಿಸುವಲ್ಲಿ ಸಕ್ರಿಯೆವಾಗಿ ಇಲ್ಲಾ. ದೇವರು ನಿನ್ನನ್ನು ಕಾದು ಮುನ್ನಡೆಸಲಿ!

**ಎರಡನೆಯದಾಗಿ**: ನಾವು ಪವಿತ್ರಾತ್ಮದೇವರೊಂದಿಗೆ ಬಹಳ ಸೂಕ್ಷವಾಗಿರಬೇಕು, ಪೌಲನನ್ನು ಮತ್ತು ಆತನ ತಂಡವನ್ನು ಏಷ್ಯಾ ಮತ್ತು ಬೆಥಾನ್ಯಕ್ಕೆ ಹೋಗ ಗೊಡಿಸದೆ ಇಟ್ಟುಕೊಂಡಿತ್ತು, ಆದರೆ ಅವರು ಆತನನ್ನು ಕೇಳುತ್ತಲೇ ಇದ್ದರು, ಅದೇ ರೀತಿ ನಾವು ಸಹ ಹೋಗಬೇಕಾದ ಸ್ಥಳಕ್ಕಾಗಿ ಸೇವೆಗಾಗಿ ಪಾರ್ಥನೆಮಾಡುತ್ತಿರಬೇಕು.

**ಮೂರನೆಯದು**: ಎಲ್ಲಿ ಅಗತ್ಯತೆ ಇದೆ ಅಲ್ಲಿಗೆ ಹೋಗಿರಿ. ಮತ್ತು ಸುವಾರ್ತೆಗೆ ಅತ್ಯ ಅಗತ್ಯವಿರುವ ನಿಮ್ಮ ಪ್ರದೇಶಯಾವುದು?

**ನಾಲ್ಕನೆಯದಾಗಿ**: ಆ ಪ್ರದೇಶದ ಜನರ ವಿಶಿಷ್ಟ ಪರಿಸ್ಥಿತಿ ಅಗತ್ಯತೆಗಳನ್ನು ಪರೀಕ್ಷಿಸಿ ( ಅಪೊಸ್ತಲ 16:13-22) ಜನರು ಈಗಾಗಲೇ ಆಧ್ಯಾತ್ಮಿಕ ಉದ್ದೇಶಗಳಿಗಾಗಿ ಅಲ್ಲಿ ಒಟ್ಟುಗೂಡುತ್ತಾ ಇದ್ದಾರೆಯೇ? ಮತ್ತು ಶಾಂತಿಯುತ ವ್ಯಕ್ತಿ ಅಥವಾ ಮಹಿಳೆ ಇದ್ದಾರೆಯೆ? ವಿಶೇಷವಾಗಿ ಲುದಿಯಾ ಹಾಗೆ ಹೊಸ ಸೇವೆಕಾರ್ಯಕ್ಕೆ ಸಹಾಯ ಮಾಡುವವರು ಇದ್ದಾರೆಯೇ? ಅಲ್ಲಿ ಮನೆಯೋ ಅಥವಾ ಬೇರೆ ಏನಾದರು ಸ್ಥಳವಿದೆಯೋ ಸಭೆ ಪ್ರಾರಂಬಿಸುವುದಕ್ಕಾಗಿ? ಮತ್ತು ನೀವು ಎದುರಿಸುವ ಮತ್ತು ಪರಿಹರಿಸಬೇಕಾದ ಅಧ್ಯಾತ್ಮೀಕ ಬಲವಾದ ಸವಾಲುಗಳಿವೆಯೋ ಪರಿಕ್ಷಿಸಿ?

**ಕೊನೆಯದಾಗಿ**: ಒಂದು ನಿರ್ದಿಷ್ಟವಾದ ಸಮಯ ಗೊತ್ತುಮಾಡಿಕೊಂಡು ಕೆಲಸವನ್ನು ಪ್ರಾರಂಬಿಸಿ. ಹೊಸ ಸ್ಥಳದಲ್ಲಿ ಅಥವಾ ಹೊಸ ಗುಂಪಿನಜನರಲ್ಲಿ ಹೋಗಿರಿ, ನೀವು ಸುವಾತ್ರೆ ಮತ್ತು ಶಿಷ್ಯರನ್ನು ತಯಾರಿಸಲು ದೇವರು ನಿಮ್ಮನ್ನು ಬಳಸಿ ಕೊಳ್ಳಲು ಆತನಲ್ಲಿ ನಿರೀಕ್ಷಿಸಿರಿ!

**<u>ಮೂಲ ಸತ್ಯತೆ</u>: ಪವಿತ್ರಾತ್ಮ ಮುನ್ನಡೆಸುವಿಕೆಯಿಂದ ಪ್ರಾರ್ಥನಾಪೂರ್ವಕವಾಗಿ ಹೊಸ ಸಭೆಸ್ಥಾಪಿಸಲು ಒಂದು ಒಳ್ಳೆ ಸ್ಥಳವನ್ನು ಆರಿಸಿಕೊಳ್ಳಿ.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *13:* ಸತ್ಯವೇದದ ಅಡಿಪಾಯ

ಸತ್ಯವೇದದ ತಿಳುವಳಿಕೆ ಹಾಗೂ ಅದನ್ನು ಅನುಸರಿಸುವುದು ಯಶಸ್ವಿ ಕ್ರೈಸ್ತ ಜೀವನಕ್ಕೆ ಮತ್ತು ಸೇವೆಯ ಬಲವಾದ ಅಡಿಪಾಯಕ್ಕೆ ಕಾರಣ. ದೇವರು ನಮಗೆ ಆತನ ವಾಕ್ಯವನ್ನು ಕೊಟ್ಟನು ಆದ್ದರಿಂದ ನಾವು ಒಳ್ಳೆ ಕೆಲಸಕ್ಕಾಗಿ ಸುಸಜ್ಜಿತರಾಗಿದ್ದೇವೆ *(2 ತಿಮೋಥಿ 3:16-17)* ನಾವು ನಮ್ಮ ಮನಸ್ಸನ್ನು ಹೃದಯವನ್ನು ಜಿವನ ಶೈಲಿಯನ್ನು ಶುದ್ದಗೊಳಿಸದೆ ಹೊರತು ನಾವು ನಮ್ಮ ಸತ್ಯವೇದದ ಸತ್ಯದೊಂದಿಗೆ ನಾವು ನಮ್ಮ ನಂಬಿಕೆಯನ್ನು ಬೆಳೆಸಿಕೊಳ್ಳಲು ಸಾದ್ಯವಿಲ್ಲಾ. ನಮ್ಮ ಜೀವನವನ್ನು ವಾಕ್ಯವೆಂಬ ಸತ್ಯದಿಂದ ತುಂಬಿಕೊಳ್ಳುವ 6 ವಿಧಾನಗಳನ್ನು ನೋಡುತ್ತೇವೆ.

1. **ಆಲಿಸಿರಿ**. ಇಸ್ರಾಯೇಲ ಜನರು ದೇವರ ವಾಕ್ಯವನ್ನು ಕೇಳಲು ಸಂಗ್ರಹವಾದರು. *(ಯಹೋಶುವ 8:34-35)* ಪೌಲನು ತಿಮೋಥೆಯನಿಗೆ ಸಾರ್ವಜನಿಕವಾಗಿ ಸತ್ಯವೇದವನ್ನು ಓದಲು ಹೇಳಿದನು *(1 ತಿಮೋ 4:13)* ಕುಟುಂಬಗಳಲ್ಲಿ ಆಡಿಯೋ ರಿಕಾರ್ಡಿಂಗ ಅಥವಾ ಅಂತರ್ಜಾಲ ಮೂಲಕವೋ ಕೇಳಬೇಕು.

2. **ಓದಿರಿ**. ಇಸ್ರಾಯೇಲಿನ ರಾಜರಲ್ಲಿ ಪ್ರತಿಯೊಬ್ಬರು ತಮ್ಮ ವೈಯುಕ್ತಿಕ ನಕಲಿನ ಸ್ಕ್ರಿಪ್ಟನ್ನು ಬರೆದರು, ಆದ್ದರಿಂದ ಅವುಗಳನ್ನು ತಮ್ಮ ಜೀವನ ಕಾಲವೆಲ್ಲಾ ಅವುಗಳನ್ನು ಓದುತ್ತಾ ಇದ್ದರು, *(ದರ್ಮೋಪ 17:18-19)* ಹೊಸ ಒಡಂಬಡಿಕೆಯನ್ನು ಮತ್ತೆ ಮತ್ತೆ ಓದಲು ಸಭೆಗೆ ಆಜ್ಞಾಪಿಸಲಾಗಿದೆ. *(ಕೊಲೆಸ್ಸೆ 4:16)* ನಾವು ಇಡೀ ಸತ್ಯವೇದವನ್ನು ನಿರಂತರವಾಗಿ ಮತ್ತು ಪದೇ ಪದೇ ಓದಬೇಕು, ಪ್ರತಿದಿನ ಕನಿಷ್ಠ ಮೂರು ಅದ್ಯಾಯಗಳಾನ್ನಾದರು ಓದಲು ನಾವು ನಿಮ್ಮನ್ನು ಪ್ರೋತ್ಸಹಿಸುತ್ತೇವೆ.

3. **ಅದ್ಯಯನ**. ಎಜ್ರಾ ದ ಲಾರ್ಡ ಅಪ್ ದ ಲಾ ಎಂಬುದನ್ನು ಅದ್ಯಯನ ಮಾಡಿಕೊಂಡು ಅವುಗಳನ್ನು ಗಮನದಲ್ಲಿಡುವಂತೆ ತನ್ನನ್ನು ತಾನು ಮೀಸಲಾಗಿ ಇಟ್ಟುಕೊಂಡ, *(ಎಜ್ರಾ 7:10)* ದೈವವಾಕ್ಯವನ್ನು ಸೂಕ್ಷವಾಗಿ ಗಮನದಲ್ಲಿಟ್ಟು ಅರ್ಥಮಾಡಿಕೊಂಡು ಎಚ್ಚರಿಕೆಯಿಂದ ಗಮನಿಸಿ, ವ್ಯಾಖ್ಯಾನಿಸಿ ಅನ್ವಯಿಸಿರಿ, ಇದರಿಂದ ನಿವು ನೀತಿವಂತ ಜೀವನವನ್ನು ಜೀವಿಸಿಬಹುದು. *(2 ತಿಮೊಥಿ 3: 16-17)*

4. **ನೆನಪಿನಲ್ಲಿಡು**. ಯವ್ವನ ಮಕ್ಕಳು ದೇವರ ವಾಕ್ಯವನ್ನು ತಮ್ಮ ಹೃದಯದಲ್ಲಿ ಮರೆಮಾಡುವುದರ ಮೂಲಕ ಶುದ್ದವಾಗಿರುತ್ತಾರೆ. *(ಕೀರ್ತನೆ 119:9)* ಯೇಸು ಸೈತಾನನ ಪ್ರಲೋಭನೆಗೆ ಒಳಗಾಗಿ ಆತನು ನೆನಪಿನಲ್ಲಿಟ್ಟ ವಾಕ್ಯದ ನಿಮಿತ್ತ ಸೈತಾನನ ವಿರುದ್ದವಾಗಿ ನಿಂತು ಶೋಧನೆಯನ್ನು ಜಯಿಸಿದನು. *(ಮತ್ತಾಯ 4:4, 7, 10)* ವಾರಕ್ಕೆ ಒಂದು ಪ್ಯಾರವನ್ನು ಬಾಯಿಪಾಠ ಮಾಡಿ ನೆನಪಿನಲ್ಲಿಡಲು ನಾವು ನಿಮ್ಮನ್ನು ಪ್ರೊತ್ಸಾಹಿಸುತ್ತೆವೆ. ಘ್ರಾವನ ಪದ್ದತಿಯ ಪ್ರಕಾರ ದಿನಕ್ಕೆ ಏಳುಸಾರಿ ಅಂತ ಏಳು ದಿನಗಳು ಗಟ್ಟಿಯಾಗಿ ಓದುವುದು ಅಗಿದೆ.

5. **ದ್ಯಾನ**. ದೇವರು ಯಹೋಶುವನಿಗೆ ತನ್ನ ವಾಕ್ಯವನ್ನು ಹಗಲು ರಾತ್ರಿ ದ್ಯಾನಿಸಲು ತಿಳಿಸಿದನು. *(ಯಹೋಶುವ 1:8)* ನಾವು ಪವಿತ್ರಗ್ರಂಥವನ್ನು ಹಗಲೂ ರಾತ್ರಿ ದ್ಯಾನಿಸಿದಾಗ ಫಲಪ್ರದ ಮತ್ತು ಸಮೃದ್ದವಾದ ಜೀವನವು ನಮಗೆ ಉಂಟಾಗುತ್ತದೆ ಎಂದು ಕೀರ್ತನೆ ೧ ರಲ್ಲಿಹೇಳುತದೆ. ದ್ಯಾನ ಅಂದರೆ ದೇವರ ವಾಕ್ಯವು ನಮ್ಮ ಜೀವನಕ್ಕೆ ಹೇಗೆ ಅನ್ವಹಿಸುತ್ತದೆ ಅನ್ನುವದನ್ನು ಎಚ್ಚರಿಕೆಯಿಂದ ಯೋಚಿಸುವುದು ಆಗಿದೆ. ಅದ್ಯಯನ ಮತ್ತು ಕಂಠಪಾಠ ಸೇರಿ ಹೋಗುವಂತಾದ್ದಾಗಿದೆ.

6. **ಅನ್ವಯಿಸಿ ವಿಧೇಯನಾಗು**. ದೇವರು ನಮಗೆ ಆತನ ವಾಕ್ಯಗಳನ್ನು ಕೊಟ್ಟನು ಯಾಕೆಂದರೆ ನಮ್ಮ ಜೀವನವು ಸಂಪೂರ್ಣವಾಗಿ ಬದಾಲಾಯಿಸಲ್ಪಡಬೇಕು ಎಂಬುದಾಗಿ, ಮೇಲಿನ ವಿಧಾನಗಳಲ್ಲಿಯ ಪ್ರತಿಯೊಂದು ಅಂಶವು ನಮಗೆ ವಾಕ್ಯದ ಸತ್ಯತೆಯಲ್ಲಿ ಜೀವಿಸಲು ಕಲಿಸುವಂತದ್ದಾಗಿದೆ. ಸತ್ಯವೇದದಲ್ಲಿಯ ಸತ್ಯವನ್ನು ನಾವು ಅನ್ವಯಿಸುವುದಿಲ್ಲಾ ಅಂದರೆ, ನಮ್ಮನ್ನು ನಾವೇ ಮೊಸ ಪಡಿಸಿಕೊಳ್ಳುವವರಾಗಿದ್ದೇವೆ ಎಂದು ಯಾಕೋಬನು ಹೇಳುತ್ತಾ ಇದ್ದಾನೆ. *(ಯಾಕೋಬ 1:22-25)*




ಈ ಆರು ವಿಧಾನಗಳನ್ನು ನೆನಪಿನಲಿಟ್ಟುಕೊಳ್ಳಲು ನಿಮಗೆ ಸಹಾಯ ಮಾಡಲು ನಿಮ್ಮ ಕೈ ಉತ್ತಮ ಮಾರ್ಗವಾಗಿದೆ, ನಿಮ್ಮ ಬೆರಳುಗಳು ಪದಗಳು ನಿಭಾಯಿಸುವ ವಿಧಾನಗಳನ್ನು ಪ್ರತಿನಿಧಿಸುತ್ತವೆ, ಮತ್ತು ಹಸ್ತವು ವಿದೇಯತ್ವವನ್ನು ಪ್ರತಿನಿಧಿಸುತ್ತದೆ. ನಾವು ಈ ಆರು ಸಂಗತಿಗಳನ್ನು ಮಾಡಿದರೆ ಸತ್ಯವೇದದಲ್ಲಿ ನಾವು ದೃಢವಾದ ಗೃಹಿಕೆಯನ್ನು ಹೊಂದಿದ ಹಾಗಿರುತ್ತದೆ.

**<u>ಮೂಲ ಸತ್ಯತೆ</u>: ಕ್ರೈಸ್ತ ಜೀವನ ಹಾಗೂ ಸೇವೆಯ ಮುಖ್ಯ ಅಡಿಪಾಯ ಏನೆಂದರೆ ಸತ್ಯವೇದವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅಂಗೀಕಾರ ಮಾಡಿಕೊಳ್ಳುವುದು.**

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ದಿನಚರಿ ಯಾತ್ರೆ *14:* ಸಭೆಯ ಸ್ವರೂಪ ಮತ್ತು ರಚನೆ

**ಚರ್ಚ ಅಂದರೆ ಯಾವುದು?** ನಿಮ್ಮ ತಂಡವು ಶ್ರದ್ಧೆಯಿಂದ ಹೊಸ ವಿಶ್ವಾಸಿಗಳನ್ನು ಆತನ ಅನುಯಾಯಿಗಳಾಗಿ ಮಾಡಿ ಒಂದು ಕಡೆ ಸೇರಿಸುವುದು ಆಗಿದೆ, ಅವರು ಎಲ್ಲಿ ಬೇಟಿ ಯಾಗುತ್ತಾರೆ ಅನ್ನುವುದು ಅಷ್ಟು ಮುಖ್ಯವಲ್ಲಾ, ಕ್ರಿಸನ ಮಕ್ಕಳೇ ಸಭೆಯಾಗಿದ್ದಾರೆ. ಕಟ್ಟಡಗಳನ್ನು ನೋಡಿ ಸಭೆ ಎಂದು ತಿಳುದುಕೊಂಡು ಗೊಂದಲಕ್ಕಿಡಾಗಬೇಡಿ, ಹೊಸ ಒಡಂಬಡಿಕೆಯಲ್ಲಿ ಚರ್ಚ ಕಟ್ಟಡಗಳೇ ಇರಲಿಲ್ಲಾ, ಚರ್ಚ ಕಟ್ಟಡಗಳು ಇದ್ದಂತಹ ಪಟ್ಟಣಗಳು ಯಾವವು ಎಂದರೆ ಯೆರುಸಲೇಮು, ಕೊರಿಂಥ ಮತ್ತು ಅಂತಿಯೋಕ್ಯ, ಆದರೆ ಹೆಚ್ಚಾಗಿ ಅವರು ಮನೆಮನೆಗಳಲ್ಲಿ ಕೂಡಿ ಬಂದು ಆರಾಧನೆ ಮಾಡುತ್ತಾಇದ್ದರು, *(ರೋಮಾ 16:5; 1 ಕೊರಿಂಥ 16:19; ಕೊಲೆಸ್ಸೆ 4:15; ಪಿಲೆಮೋನ್ 2)* ವಿಶ್ವಾಸಿಗಳಿಗೆ ಮನೆಯೇ ಒಳ್ಳೆಯ ಸ್ಥಳವು ಸೇರಿ ಆರಾಧಿಸಲು ಯಾಕೆಂದರೆ ಎಲ್ಲರಿಗೂ ಅನೂಕುಲಕರವಾಗಿರುತ್ತದೆ.

**ಚರ್ಚ ಅನ್ನುವುದು ಏನು ಮಾಡುತ್ತದೆ?** ಹೊಸ ಒಡಂಬಡಿಕೆಯಲ್ಲಿ ನೀವು ಸಭೆಯ ಎರಡು ಮೂಲ ಸೇವೆಯ ಆದ್ಯತೆಗಳನ್ನು ಕಂಡುಕೊಳ್ಳುತ್ತೀರಿ. ಮೊದಲನೇದು ಬೆಳವಣಿಗೆ: ವಿಶ್ವಾಸಿಗಳು ಒಂದುಗೂಡಿ ಪರಸ್ಪರವಾಗಿ ಒಬ್ಬರಿಗೊಬ್ಬರು ತಿಳಿದು, ದೇವರನ್ನು ಪ್ರೀತಿಸಿ, ಸೇವೆ ಮಾಡುವುದಕ್ಕೆ ಸಹಾಯಮಾಡಿಕೊಳ್ಳುತ್ತೆವೆ. *(ಅಪೋಸ್ತಲ 2:42-46; ಏಫೆಸ 4:11-16)* ಮತ್ತು ನಾವು ಆರಾಧಿಸುತ್ತೇವೆ, ಪ್ರಾರ್ಥಿಸುತ್ತೇವೆ, ಪ್ರಭು ಭೋಜನದಲ್ಲಿ ಪಾಲು ತೆಗೆದುಕೊಳ್ಳುತ್ತೇವೆ. ತರಭೇತಿ ಹಾಗೂ ಪ್ರೊತ್ಸಾಹಕೊಡುತ್ತೇವೆ. ದೈಹಿಕ ಅವಶ್ಯಕತೆಗಳನ್ನು ಪೂರೈಸುತ್ತೇವೆ, ಪಾಪದೊಂದಿಗೆ ವ್ಯವಹರಿಸುತ್ತೇವೆ ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತೇವೆ. ಎರಡನೇಯದಾಗಿ ಭೋದನೆ: ನಾವು ಕಳೆದು ಹೋದ ಜನರಿಗೆ ಸುವಾರ್ತೆಯನ್ನು ಸಾರಲು ಚದರಿ ಹೋಗುತ್ತೇವೆ, (ಅಪೋ *2:47, 5:42; 8:1,4; 19:10)* ಇದು ದಿನದ ಜೀವನ ಶೈಲಿ, ಕೆಲವರು ಪಟ್ಟಣದ ಹೊಸ ಸ್ಥಲಗಳಿಗೆ ಹೋಗಿ ಯೇಸುವಿನ ಬಗ್ಗೆ ಸಾರಿ ಅವರನ್ನು ಶಿಷ್ಯರನ್ನಾಗಿ ಮಾಡಿ ಅಲ್ಲೇ ಹೊಸ ಸಭೆಗಳನ್ನು ಸ್ಥಾಪನೆ ಮಾಡುತ್ತಾರೆ.

ಈಗ ನಾವು ಸಭೆಯನ್ನು ವ್ಯಾಖ್ಯಾನಿಸಬಹುದು: **ಒಂದು ಕಡೆ ಸೇರಿ ಒಬ್ಬರಿಗೊಬ್ಬರು ತಿಳಿದು ದೇವರನ್ನು ಪ್ರೀತಿಸಿ ಆ ಸತ್ಯವನ್ನು ಅನ್ಯರಿಗೆ ತಿಳಿಸಲು ಹೋಗುವ ಕ್ರೈಸ್ತ ಗುಂಪೇ ಸಭೆಯು ಆಗಿದೆ.**

*(ಒಂದು ವೇಳೆ ನೀವು ಹೊಸ ಸ್ಥಳದಲ್ಲಿ ಸಭೆ ಪ್ರಾರಂಭ ಮಾಡಿದ್ದೆಯಾದರೆ ನಿಮಗೆ ಅನೂಕೂಲವಾಗಲೂ ದಯವಿಟ್ಟು ಇಲ್ಲಿ ಲಗತ್ತಿಸಿದ ಸಾಧನವನ್ನು ಉಪಯೋಗಿಸಿ.)*

**ಯಾವ ರೂಪವು ಮತ್ತು ರಚನೆಯು ಸಭೆಯು ಹೊಂದಿರಬೇಕು?** ಹೊಸ ಒಡಂಬಂಡಿಕೆಯು ಸಭೆಯನ್ನು ವಿವಿದ ಗಾತ್ರ, ವಿಧ, ಸಂಪ್ರಾದಾಯಗಳೊಂದಿಗೆ ವಿವರಿಸುತ್ತದೆ.

ಹೆಚ್ಚಿನ ಸಭೆಗಳು **ಮನೆಯ ಸಭೆ ಅಥವಾ ಸೆಲ್ ಸಭೆಗಾಳಾಗಿದ್ದವು**. (ರೋಮಾ *16:3-5;* ಕೊಲೆಸ್ಸ *4:15;* ಫಿಲೆಮೊನ್ *2; 1* ಕೊರಿಂಥ *16:15)*. ಉದಾಹರಣೆಯಾಗಿ ಪೌಲನು ಒಂದು ಮನೆ ಸಭೆಯ ವಿವರಣೆ ಕೊಡುತ್ತಾ ಇದ್ದಾನೆ, ಅದು ಗಂಡ ಹೆಂಡತಿಯರಾದ ಅಕ್ವಿಲ್ಲ ಪ್ರಿಸ್ಕಿಲ್ಲಾ ಆವರು ಮನೆಯ ಸಭೆಯನ್ನು ನಡೆಸುವುದನ್ನು ನೋಡುತ್ತೇವೆ, ಅಕ್ವಿಲ್ಲನೂ ಪ್ರಿಸ್ಕಿಲ್ಲಳೂ ತಮ್ಮ ಮನೆಯಲ್ಲಿ ಕೂಡುವ ಸಭೆಯವರೊಂದಿಗೆ ಕರ್ತನ ಹೆಸರಿನಲ್ಲಿ ಅನೇಕ ವಂದನೆಗಳನ್ನು ಹೇಳುತ್ತಾರೆ *(1 ಕೊರಿಂಥ 16:19).*

**ಒಂದಕ್ಕಿಂತ ಹೆಚ್ಚು ಪ್ರಾದೇಶಿಕ ಹಾಗೂ ನಾಯಕರೊಂದಿಗೆ ಮನೆ ಸಭೆಗಳ ನೆಟವರ್ಕಕೂಡ ಇವೆ.** ರೋಮಾ 16:3-5 ರಲ್ಲಿ ಅನ್ಯಜನರ ಸಭೆಗಳಾಗಿ ಒಂದು ನಿರ್ದಿಷ್ಟ ಮನೆ ಸಭೆಯಾಗಿ ಉಲ್ಲೇಖಿಸುತ್ತಾ ಇದೆ ಹೀಗೆ ಹಲವಾರು ಮನೆ ಸಭೆಗಳು ಸೇರಿ ಒಟ್ಟಾರೆ ಒಂದು ಸಭೆಯಾಗಿ ಮಾಡಿದೆ. *(ಕೊಲೆಸ್ಸೆ 4:15)* ರಲ್ಲಿ ನೋಡಿರಿ.

**ಅನೇಕ ಪಾಸ್ಟರಗಳು ಮತ್ತು ನಾಯಕರೊಂದಿಗೆ ಸೇರಿ ಒಂದು ದೊಡ್ಡ ಸಭೆ** ಅಂತಿಯೋಕ್ಯದಲ್ಲಿತ್ತು. ಇದರಲ್ಲಿ ದೇವರನ್ನು ನಂಬಿ ಆತನ ಕಡೆಗೆ ತಿರುಗಿದ ಅನೇಕ ಜನರು ಈ ಸಭೆಯಲ್ಲಿ ಇದ್ದರು. ಈ ಸಭೆ ಬರ್ನಬಾಸ ಮತ್ತು ಪೌಲನು ಹಾಗೂ ಇತರರ ನಾಯಕತ್ವದಲ್ಲಿ ನಡೆಯಲ್ಪಡುತ್ತಿತ್ತು. *(ಅಪೋ 11:21; 28-30; 13:1-2)* ಆದರೆ ಈ ಸಭೆಯು ಹೇಗೆ ಮತ್ತು ಎಲ್ಲಿ ಬೇಟಿಯಾಗುತ್ತಿತ್ತು ಎಂಬುದನ್ನು ನಮಗೆ ನಿರ್ದಿಷ್ಟವಾಗಿ ತಿಳಿದಿಲ್ಲಾ.

**ಯೆರುಸಲೇಮಿನಲ್ಲಿ ಸಾವಿರಾರು ಜನರೊಂದಿಗೆ ಆರಂಭವಾದ ಮೊದಲ ಸಭೆ** ಇದೆ ಆಗಿತ್ತು. *(ಅಪೊಸ್ತ 2:40-47).* ಅವರು ಬೇಟಿಯಾಗುತ್ತಿಂದತಹ ಸ್ಥಳಗಳು ಯಹೂದ್ಯ ದೇವಸ್ಥಾನ ಹಾಗೂ ಇತರ ಸಣ್ಣ ಸಣ್ಣ ಮನೆಗಳಲ್ಲಿಯೇ ಮಾತ್ರ *(ಅಪೊಸ್ತ 5:42).*

ಈ ವಿವರಣೆಯಿಂದ ಸಭೆಗಳನ್ನು ನಿರ್ಮಿಸುವುದರಲ್ಲಿ ಯಾರು ಸರಿ ಅಥವಾ ತಪ್ಪಾದ ರಚನೆ ಅಂಥ ಹೇಳಲು ಸಾದ್ಯವಿಲ್ಲ. ಅದರೆ ಅವುಗಳಲ್ಲಿ ಎಲ್ಲಾ ಈ ಸಾಮಾನ್ಯಾ ಅಂಶಗಳನ್ನು ಹೊಂದಿವೆ:

- **<u>ದೈವಿಕ ಪ್ರಭುದ್ದ ನಾಯಕರು:</u>** ಇವರು ಕ್ರೈಸ್ತೀಯ ನಡವಳಿಕೆ ಮತ್ತು ಸೇವೆಯಲ್ಲಿ ಬೆಳೆಯಲು ಭಕ್ತರನ್ನು ಸಿದ್ದಪಡಿಸುವವರು. ಇವರನ್ನು ಹೆಚ್ಚಾಗಿ ಮೇಲ್ವಿಚಾರಕರು ಹಿರಿಯರು ಮತು ದರ್ಮಾಧಿಕಾರಿಗಳು ಎಂದು ಸಹ ಕರೆಯುತ್ತಾರೆ *(ಎಫೆಸ 4:11; ಪಿಲಿಪ್ಪಿಯವರಿಗೆ 1:1; 1 ತಿಮೊಥಿ 3:1, 4:14, 5:17; ತೀತನಿಗೆ 1:5).*
- **<u>ಒಬ್ಬರಿಗೊಬ್ಬರು ಪ್ರಿತಿಸುವ ಮತ್ತು ತಮ್ಮ ಆದ್ಯಾತ್ಮಿಕ ವರಗಳಿಂದ</u>** ತಮ್ಮ ಸಮುದಾಯಕ್ಕೆ ಸೇವೆ ಸಲ್ಲಿಸುವ ಎಲ್ಲಾ ವಿಶ್ವಾಸಿಗಳು.
- ನಾಶವಾದ ಜನರನ್ನು ಕ್ರಿಸ್ತ ನಂಬಿಕೆಯಲ್ಲಿ ತರಲು **ಸಾಕ್ಷಿಯಾಗಿರುವ ಎಲ್ಲಾ ವಿಶ್ವಾಸಿಗಳು.**
- ಅನೇಕ ಸಭೆಗಳನ್ನು **ಗುಣಿಕರಿಸಲ್ಪಡುವ ಅನೇಕ ಶಿಷ್ಯರು.**

ನಿಮ್ಮ ಸಭೆಯು ಬಹುಸಂಖ್ಯೆಯ ಸಭೆಗಳನ್ನು ಪ್ರಾರಂಭಿಸುವ ಬಹುಸಂಖ್ಯೆಯ ಶಿಷ್ಯರನ್ನು ತಯಾರಿಸಲಿಕ್ಕೆ ಅತಿ ಪ್ರಾಮುಖ್ಯವಾದದ್ದು ಯಾವದು? ಆದರೆ ಶಿಷ್ಯರನ್ನಾಗಿ ಮಾಡುವುದು ಯೇಸುವಿನ ಆಜ್ಞೆಯಾಗಿದೆ *(ಮತ್ತಾಯ 28:18-20)* ಸಭೆಗಳನ್ನು ಸ್ಥಾಪಿಸಲು ಆತನು ನಮಗೆ ಎಂದು ಆಜ್ಞಾಪಿಸಲಿಲ್ಲಾ ಆದರೆ ಹೊಸ ಒಡಂಬಡಿಕೆಯಲ್ಲಿ ಇಂಥ ಆಜ್ಞೆ ಅನ್ನುವುದೇ ಇಲ್ಲಾ ಆದರೆ ಶಿಷ್ಯರನ್ನಾಗಿ ತಯಾರಿಸುವ ಫಲಿತಾಂಶವೇ ಸಭೆಯಾಗಿರುತ್ತದೆ. **ಶಿಷ್ಯರನ್ನು ಬೆಳೆಸುವುದು** ಗುಣೀಕರಿಸುವುದು ಕಟ್ಟಡ ನಿರ್ಮಾಣಗಳ ಮೇಲೆ ಅವಲಂಬಿತವಾಗಿರುವುದಿಲ್ಲಾ. ಉತ್ತಮವಾಗಿ ಬೆಳೆಯುವ ಸಭೆಗಳು ಗುಣಿತಗೊಳಿಸುವ ಶಿಷ್ಯರನ್ನು ಮಾಡುವತ್ತ ಗಮನ ಹರಿಸುತ್ತದೆ ಆಶಿಷ್ಯರು ದೇವರ ಮಹಾ ಆಜ್ಞೆಯನ್ನು ಪೂರೈಸುವಲ್ಲಿ ಆಸಕ್ತರಾಗಿರುವರು. ಮಹಾನ ಆಜ್ಞೆಯ ಸಭೆಗಳು, ನಗರದಲ್ಲಿ ಮನೆಗಳಲ್ಲಿ ಮರದ ಕೆಳಗೆ, ವ್ಯವಹಾರಗಳಲ್ಲಿ ಮತ್ತು ಸಭೆಯಕಟ್ಟಡಗಳಲ್ಲಿ ಕಂಡುಬರುತ್ತವೆ. ಆದರೆ ಅವರು **ಹೊಂದಿರುವ ಕಟ್ಟಡಗಳು ಅಥವಾ ಕಾರ್ಯಕ್ರಮಗಳಿಂದ ಅವುಗಳನ್ನು ವ್ಯಾಖ್ಯಾನಿಸಲಾಗಿಲ್ಲ.**

**<u>ಮೂಲ ಸತ್ಯತೆ</u>: ಸಭೆ ಎಂದರೆ, ದೇವರನ್ನು ತಿಳಿಯುವುದು ಮತ್ತು ಆತನನ್ನು ಪ್ರೀತಿಸುವುದು ಮತ್ತು ಯೇಸುವಿನ ಬಗ್ಗೆ ಕಳೆದುಹೋದವರಿಗೆ ಹೇಳಲು ಸಹಾಯ ಮಾಡುವ ಧಾರ್ಮಿಕ ನಾಯಕರ ನೇತೃತ್ವದ ಕ್ರೈಸ್ತ ಗುಂಪು ಆಗಿದೆ.**

STRATEGIC
IMPACT
INTERNATIONAL

# ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ©

## ಯಾತ್ರೆ - ಹಂತ 1

# ಸಾಧನ ಯಾತ್ರೆ

STRATEGIC
IMPACT
INTERNATIONAL

***Strategic Impact***
*P.O. Box 1901, Denton, TX 76202*
*www.StrategicImpactInternational.com*
© Copyright, Strategic Impact. No changes may be made to this manual, but you may freely copy and distribute without making changes to content.

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ಸಾಧನ ಯಾತ್ರೆ *1:* ಯುದ್ಯೋಪಾಯದ ಪ್ರಾರ್ಥನಾ ಮಾರ್ಗದರ್ಶಿ

ಯಾರರಕ್ಷಣೆಗಾಗಿಪ್ರಾರ್ಥಿಸಬೇಕೆಂದುನೀವುನಡಿಸಲ್ಪಡುತ್ತೀರುವಿರೋಅಂಥವರನ್ನುಗುರುತಿಸಿರಿ.ಅವರಹೆಸರುಗಳಪಟ್ಟಿಮಾಡಿರಿ(ಮತ್ತುನಿಮ್ಮತಂಡಕ್ಕೆಸೇರಿದಬೇರೆಯವರಹೆಸರುಗಳನ್ನು), ಗೆಪ್ರತಿವಾರವು ಅವರಿಗೋಸ್ಕರಎಲ್ಲರುಪ್ರಾರ್ಥಿಸುವದಕ್ಕೆಆಗುವುದು. ಈಪಟ್ಟಿಯನ್ನುಖಾಸಗಿಯಾಗಿಇಟ್ಟುಕೊಳ್ಳಿರಿ, ಅದೇವೇಳೆಯಲ್ಲಿ ಪ್ರಾರ್ಥಿಸುವಂತೆನಿಮಗೆನೆನಪಿಸುವಹಾಗೆಪ್ರತಿದಿನವೂಕಾಣಿಸುವಸ್ಥಳದಲ್ಲಿಇಟ್ಟುಕೊಳ್ಳಿರಿ.


1. ಕರ್ತನೇ, ನೀನು _____________ ನ್ನುನಿನ್ನಕಡೆಗೆಸೆಳೆದುಕೊಎಂದುಪ್ರಾರ್ಥಿಸುತ್ತೇನೆ *(ಯೋಹಾನ 6:44).*
2. ಕರ್ತನೇ, ___________ ಯುನಿನ್ನನ್ನುತಿಳಿದುಕೊಳ್ಳಲುಅಪೇಕ್ಷಿಸುವಂತಾಗಬೇಕೆಂದುಪ್ರಾರ್ಥಿಸುತ್ತೇನೆ *(ಅ.ಕೃತ್ಯ 17:27).*
3. ___________ ದೇವರವಾಕ್ಯವನ್ನುಆಲಿಸಿಅದರಲ್ಲಿನಂಬಿಕೆಯಿಡುವಂತಾಗಲೆಂದುನಾನುಪ್ರಾರ್ಥಿಸುತ್ತೇನೆ. *(1 ಥೆಸ 2:13).*
4. ಈ________ಯನ್ನುಸತ್ಯದಕಡೆಗೆಅಂಧನಾಗುವಂತೆಮಾಡದಹಾಗೆಸೈತಾನನನ್ನುತಡೆಯಬೇಕೆಂದುನಾನು ಬೇಡಿಕೊಳ್ಳುತ್ತೇನೆ *(2 ಕೊರಿಂಥ 4:4; 2 ತಿಮೊಥೆ 2:25-26).*
5. .ಪರಿಶುದ್ಧಾತ್ಮನೇ,ಆತನ/ಅವಳಪಾಪದವಿಷಯದಲ್ಲ _______ ರಲ್ಲಿಮನವರಿಗೆಉಂಟುಮಾಡಿಅವನಿಗೆ/ ಅವಳಿಗೆಕ್ರಿಸ್ತನಅಗತ್ಯವಿದೆಎಂ ಬುದನ್ನುಅರಿತುಕೊಳ್ಳುವಂತೆಮಾಡೆಂದುಬೇಡಿಕೊಳ್ಳುತ್ತೇನೆ. *(ಯೋಹಾನ 16:7-11).*
6. ___________ಸಂಗಡಸುವಾರ್ತೆಯನ್ನುಹಂಚಿಕೊಳ್ಳುವಂತೆಯಾರನ್ನಾದರೂಕಳುಹಿಸಿಕೊಡುಎಂದುನಿನ್ನನ್ನು ಬೇಡಿಕೊಳ್ಳುತ್ತೇನೆ *(ಮತ್ತಾಯ 9:37, 38).*
7. .ಅಲ್ಲದೆನೀನುನನಗೆ(ಮತ್ತು/ಅಥವಾನನ್ನಜೊತೆಶಿಷ್ಯರಿಗೆ*)* ________ ಸಂಗಡಹಂಚಿಕೊಳ್ಳಲುಸರಿಯಾದ ಸದವಕಾಶವನ್ನು, ಧೈರ್ಯವನ್ನು, ಮಾತುಗಳನ್ನುಅನುಗ್ರಹಿಸುಎಂದುಸಹಬೇಡಿಕೊಳ್ಳುತ್ತೇನೆ *(ಎಫೆಸ 6:19-20; ಕೊಲೊಸ್ಸೆ 4:3-6).*
8. ಕರ್ತನೇ ___________ ತನ್ನಪಾಪದಿಂದವಿಮುಖನಾಗಲೆಂದುಪ್ರಾರ್ಥಿಸುತ್ತೇನೆ *(ಅ.ಕೃತ್ಯ 17:30-31; 1 ಥೆಸ 1:9-10).*
9. ಕರ್ತನೇ, ____________ ತನ್ನವಿಶ್ವಾಸವನ್ನೆಲ್ಲಾಕ್ರಿಸ್ತನಲ್ಲಿಡುವಂತಾಗಲೆಂದುಪ್ರಾರ್ಥಿಸುತ್ತೇನೆ *(ಯೋಹಾನ 1:12;5:24).*
10. ಕರ್ತನೇ, _______ ಕ್ರಿಸ್ತನನ್ನುಅವನ/ಅವಳರಕ್ಷಕನೆಂದು, ತನ್ನನಂಬಿಕೆಯುಬೇರೂರಿ, ಬೆಳೆಯುತ್ತದೆಎಂದು, ಮತ್ತುಅವನು/ಅವಳುನಿನ್ನಮಹಿಮೆಗೋಸ್ಕ ರಸಾಕ್ಷಿಯನ್ನುಹೇಳುವವ ರಾಗುವೆವೆಂದುಅರಿಕೆಮಾಡುವಹಾ ಗೆಮಾಡೆಂದುಪ್ರಾರ್ಥಿಸುತ್ತೇನೆ*(ಲೂಕ 8:15; ರೋಮಾ 10:9-10; ಕೊಲೊಸ್ಸೆ 2:6-7).*

*“”ಸಹೋದರರೇ, ಅವರುರಕ್ಷಣೆಹೊಂದಬೇಕೆಂ ಬದೇನನ್ನಮನೋಭಿ ಲಾಷೆಯೂದೇವರಿಗೆನಾನುಮಾಡುವವಿಜ್ಞಾಪನೆಯೂಆಗಿದೆ.” - (ರೋಮಾ 10:1*

ನಾವು ಪ್ರಾಥಿಸುವವರಿಗೋಸ್ಕರವಾಗಿ

| | | |
|---|---|---|
| ______________________ | ______________________ | ______________________ |
| ______________________ | ______________________ | ______________________ |
| ______________________ | ______________________ | ______________________ |
| ______________________ | ______________________ | ______________________ |
| ______________________ | ______________________ | ______________________ |
| ______________________ | ______________________ | ______________________ |
| ______________________ | ______________________ | ______________________ |

**ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1**
**ಸಾಧನ ಯಾತ್ರೆ *2:* ಯುದ್ಯೋಪಾಯದ ಪ್ರಭಾವದ ಸುವಾರ್ತೀಕರಣ ಸಾಧನವನ್ನು ಹೇಗೆ ಬಳಸುವುದು**




1. ಇವುಗಳ ಕುರಿತಾದ ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ:
   - ನೀವು ಯೇಸುವಿನಲ್ಲಿ ವಿಶ್ವಾಸವಿಡುವ ಮುನ್ನ ನಿಮ್ಮ ಜೀವಿತ ಹೇಗಿತ್ತು,
   - ನೀವು ಯೇಸುವಿನಲ್ಲಿ ರಕ್ಷಕನೆಂದು ನಿಮ್ಮ ನಂಬಿಕೆಯನ್ನು ಹೇಗೆ ಇಡುವವರಾದಿರಿ,
   - ರಕ್ಷಣೆಗಾಗಿ ಯೇಸುವಿನಲ್ಲಿ ವಿಶ್ವಾಸವಿಟ್ಟ ನಂತರ ನಿಮ್ಮ ಜೀವಿತ ಹೇಗೆ ವ್ಯತ್ಯಾಸಗೊಂಡಿತು.

**<u>ಅವರಿಗೆ ಸಾಧನದ ಮುಂದಿನ ಫಲಕವನ್ನು ತೋರಿಸಿರಿ.</u>**


ಹೇಳಿರಿ: "ನೀವು ಏನನ್ನು ನಂಬುತ್ತೀರಿ ಮತ್ತು ನಿಮಗೆ ನಿತ್ಯಜೀವವಿದೆ ಎಂಬ ಖಚಿತತೆಯನ್ನು ಹೇಗೆ ಪಡೆಯಬಹುದು ಎಂಬುದನ್ನು ತೋರಿಸಲು ನಾನು ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳಲೇ?"

2. ಅವರಿಗೆ ತ್ರಿಕೋನವನ್ನು ತೋರಿಸಿರಿ ಮತ್ತು ಈ ರೇಖಾಚಿತ್ರವು ದೇವರನ್ನು ಪ್ರತಿನಿಧಿಸುತ್ತದೆಂದು ಹೇಳಿರಿ. ಹೀಗೆ ಕೇಳಿರಿ, "**ನಿಮಗೆ ದೇವರಲ್ಲಿ ನಂಬಿಕೆಯಿದೆಯಾ? ಆತನು ನಿಮ್ಮನ್ನು ಪ್ರೀತಿಸುವನೆಂದು ನಂಬಿಕೆಯಿದೆಯಾ?**" ವ್ಯಕ್ತಿಯು ಉತ್ತರಿಸುವ ತನಕ ಕಾಯಿರಿ. ಈ ಪ್ರಶ್ನೆಗಳು ಒಬ್ಬ ವ್ಯಕ್ತಿಯೊಂದಿಗೆ ಸುಮ್ಮನೆ ಮಾತಾಡುವದರ ಬದಲಾಗಿ ಒಂದು ಸಂಭಾಷಣೆಯನ್ನು ನಡೆಸುವಂತೆ ನಿಮಗೆ ಸಹಾಯ ಮಾಡುವವು..

3. It ಪ್ರತಿಯೊಂದು ಚಿತ್ರದ ಜೊತೆಯಲ್ಲಿ ಬೈಬಲಿನಿಂದ ವಚನವೊಂದನ್ನು ಓದುವುದು ಪ್ರಾಮುಖ್ಯವಾಗಿರುತ್ತದೆ. **ಯೋಹಾನ 3:16 ರಿಂದ ಆರಂಭಿಸಿರಿ**.(1)
   - ಆ ವ್ಯಕ್ತಿಯಲ್ಲಿ ಬೈಬಲ್ ಇದೆಯೋ ಎಂದು ಕೇಳಿರಿ. ಅವರಲ್ಲಿರುವದಾದರೆ, ಬೈಬಲಿನಲ್ಲಿ ವಚನಗಳನ್ನು ನೋಡುವಂತೆ ಅವರಿಗೆ ಸಹಾಯ ಮಾಡಿರಿ.
   - ಆ ವ್ಯಕ್ತಿಯೇ ವಚನಗಳನ್ನು ಓದಿದರೆ ಅತ್ಯುತ್ತಮವಾಗಿರುತ್ತದೆ. ಹೇಗೂ, ಅವರಿಗೆ ಓದಲು ಸಾಧ್ಯವಿಲ್ಲದಿದ್ದರೆ ಸೂಕ್ಷ್ಮತೆಯುಳ್ಳವಾಗಿರಿ. ಅವರು ಸಂಕೋಚ ಪಟ್ಟರೆ ಅಥವಾ "ನನ್ನ ಕನ್ನಡಕವನ್ನು ತಂದಿಲ್ಲ" ಎಂಬಂತಹ ಮಾತನ್ನು ಹೇಳುವದಾದರೆ, ನೀವೇ ಅದನ್ನು ಓದುವುದು ಸೂಕ್ತ.

4. ಈ ಮೊದಲ ಫಲಕದ ತಳಭಾಗದಲ್ಲಿರುವ ವ್ಯಕ್ತಿಯ ಚಿತ್ರವನ್ನು ಅವರಿಗೆ ತೋರಿಸಿರಿ. ಹೀಗೆ ಕೇಳಿರಿ, **"ಈ ವ್ಯಕ್ತಿಯು ಯಾರನ್ನು ಅವರು ಹೀಗೆ ಹೇಳಬಹುದು, "ಜನರು,"** ಅಥವಾ "ಸೈತಾನನನ್ನು" ಎಂದು ಅಥವಾ ಬೇರೆ ವ್ಯಕ್ತಿಯನ್ನು ಪ್ರತಿನಿಧಿಸುವನೆಂದು ಹೇಳಬಹುದು. ಈ ಚಿತ್ರದಲ್ಲಿರುವವನು ಲೋಕದಲ್ಲಿರುವ ಪ್ರತಿಯೊಬ್ಬರನ್ನೂ –ನೀವು, ನಾನು, ಮತ್ತು ಮಿಕ್ಕ ಎಲ್ಲರೂ - ಪ್ರತಿನಿಧಿಸುವನೆಂದು ಅವರಿಗೆ ತಿಳಿಸಿರಿ. ಜನರು ದೇವರಿಂದ ಬೇರ್ಪಟ್ಟಿರುತ್ತಾರೆಂದು ಸೂಚಿಸುವಂಥ ಕಪ್ಪಾಗಿರುವ ಕಂದಕವನ್ನು ಅವರಿಗೆ ತೋರಿಸಿರಿ. ರೋಮಾ 3:23 ಓದಿರಿ **(2)** ಮತ್ತು ಹೀಗೆ ಕೇಳಿರಿ, **"ನಮ್ಮಲ್ಲಿ ಒಬ್ಬೊಬ್ಬರು ಪಾಪ ಮಾಡಿರುವದರ ಕಾರಣದಿಂದ ದೇವರಿಂದ ಬೇರ್ಪಟ್ಟಿದ್ದೇವೆ ಎಂದು ಬೈಬಲ್ ಹೇಳುತ್ತದೆ. ನೀವು ದೇವರಿಗೆ ವಿರುದ್ಧ ಪಾಪ ಮಾಡಿರುವಿರೆಂದು ನಂಬುವಿರೋ?"**




5. ರೋಮಾ 6:23 ಓದಿರಿ **(3)** ದೇವರಿಂದ ಬೇರ್ಪಟ್ಟು ಕತ್ತಲೆಯ ಸ್ಥಳದಲ್ಲಿರುವ ಜನರನ್ನು ತೋರಿಸಿರಿ. ಬಳಿಕ ಹೀಗೆ ಪ್ರಶ್ನಿಸಿರಿ, **"ನಿಮ್ಮ ಪಾಪಗಳು ಮರಣವನ್ನುಂಟು ಮಾಡುವವು- ದೇವರಿ ನಿತ್ಯಕ್ಕೂ ಅಗಲುವಂತೆ ಮಾಡುವವೆಂದು ನಂಬುವಿರೋ?"**

6. ಮುಂದಿನ ಫಲಕಕ್ಕೆ ತಿರುಗಿಸಿ ಶಿಲುಬೆಯನ್ನು ತೋರಿಸಿರಿ. ರೋಮಾ 5:8 ಓದಿರಿ **(4)** ಮತ್ತು ಹೀಗೆ ಹೇಲಳಿರಿ, **"ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ತನ್ನ ಮಗನನ್ನು ಶಿಲುಬೆಯ ಮೇಲೆ ನಮ್ಮ ಪಾಪಗಳಿಗೋಸ್ಕರ ಮರಣಿಸುವಂತೆ ಕಳುಹಿಸಿ ಕೊಡುವ ಮೂಲಕ ನಮಗೊಂದು ಮಾರ್ಗವನ್ನು ಒದಗಿಸಿದನು. ಯೇಸುವು ನಿಮಗೋಸ್ಕರ ಶಿಲುಬೆಯ ಮೇಲೆ ಮರಣಿಸಿದನೆಂದು ನಂಬುತ್ತೀರೋ?"**

7. ಯೋಹಾನ 14:6 ಓದಿರಿ (5) ಮತ್ತು ಹೀಗೆ ಕೇಳಿರಿ, **"ದೇವರ ಸಂಗಡ ನಿತ್ಯಜೀವವನ್ನು ಅನುಭವಿಸುವಂತೆ ಯೇಸು ಕ್ರಿಸ್ತನು ಏಕೈಕ ದಾರಿಯಾಗಿರುವನೆಂದು ನೀವು ನಂಬುತ್ತಿರೋ?"**

8. 1 ಕೊರಿಂಥ 15:3-8 ಓದಿರಿ (6)ಮತ್ತು ಹೀಗೆ ಕೇಳಿರಿ, **"ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ನೀವು ನಂಬುತ್ತೀರೋ?"**

9. ಮೂರನೆಯ ಫಲಕ್ಕೆ ತಿರುಗಿಸಿರಿ ಮತ್ತು ಅವರಿಗೆ ಉಡುಗೋರೆಯ ಚಿತ್ರವನ್ನು ತೋರಿಸಿ ಹೀಗೆ ಹೇಳಿರಿ, **"ತನ್ನ ಸಂಗಡ ನಿತ್ಯಜೀವವನ್ನು ಅನುಭವಿಸಬೇಕೆಂದು ದೇವರು ಬಯಸುತ್ತಾನೆ ಮತ್ತು ಆತನು ಅದನ್ನು ಉಚಿತ ವರವಾಗಿ ಅನುಗ್ರಹಿಸುತ್ತಾನೆ."** ಬಳಿಕ ಎಫೆಸ 2:8-9ನ್ನು ಓದಿರಿ **(7)** ಮತ್ತು ಹೇಳಿರಿ, **"ನೀವು ಯೇಸುವಿನ ಹೆಸರಿನಲ್ಲಿ ನಂಬಿಕೆಯಿಡುವದಾದರೆ, ದೇವರು ನಿಮಗೆ ತನ್ನ ಮಕ್ಕಳಾಗುವ ಉಡುಗೋರೆಯನ್ನು ನೀಡುವನು."** ಬಳಿಕ ಯೋಹಾನ 1:12 ನ್ನು ಓದಿರಿ **(8).**

10. **"ದೇವರು ತನ್ನ ವರವನ್ನು ತಿರಸ್ಕರಿಸುವವರಿಗೆ ಹೀಗೆ ಹೇಳುವನು"** ಓದಿರಿ (2 ಥೆಸ 1:8-10) **(9). ಆದರೆ, "ನೀವು ಈ ವರವನ್ನು ನಂಬಿಕೆಯಿಂದ ಅಂಗೀಕರಿಸಿಕೊಳ್ಳುವದಾದರೆ, ಆತನ ಸಂಗಡ ನಿಮಗೆ ನಿತ್ಯಜೀವವಿರುವುದು ಎಂದು ದೇವರು ವಾಗ್ದಾನ ಮಾಡುತ್ತಾನೆ"** (1 ಯೋಹಾನ 5:11-12) **(10).**

11. **ಕೇಳಿರಿ: "ಇಂದು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನಿತ್ಯಜೀವದ ವರವನ್ನು ಪಡೆದುಕೊಳ್ಳಲು ಬಯಸುತ್ತೀರೊ?"**

ಯೆಸರು ____________________

ವಿಳಾಸ ____________________

____________________

ದೂರವಾಣಿ ಸಂಖ್ಯೆ ____________________

ದಿನಾಂಕ ____________ ವಯಸ್ಸು ____________

☐ ನಾನು ಇವತ್ತು ಕ್ರಿಸ್ತನನ್ನು ನನ್ನ ರಕ್ಷಕನನ್ನಾಗಿ ಅಂಗಿಕರಿಸಿಕೊಂಡೆ.

☐ ನನ್ನ ಪ್ರಾರಂಬದ ಕ್ರೈಸ್ತ ನಂಬಿಕೆಯ ಬೆಳವಣಿಗೆಯ ನಿಮಿತ್ತ ನಾಳೆ ನಾನು ಭೇಟಿಯಾಗಲು ಇಚ್ಚಿಸುತ್ತೇನೆ.

ನಾಳೆ ಭೇಟಿಯ ಸಮಯ ____________________

ಅಥಾವಾ ಇತರೆ ದಿನಾಂಕ ____________ ಸಮಯ ____________

☐ ಯೇಸು ಕ್ರಿಸ್ತನ ವಿಷಯವಾಗಿ ನಾನು ಇನ್ನೂ ಹೆಚ್ಚಾಗಿ ತಿಳದುಕೊಳ್ಳಲು ನನ್ನ ನೆರೆಹೊರೆವರೊಂದಿಗೆ ಬೇಟಿಮಾಡಲು ಇಚ್ಚಿಸುತ್ತೇನೆ.


12.ಉತ್ತರವು "**ಹೌದು**" ಎಂದಾಗಿದ್ದಲ್ಲಿ, ರೋಮಾ 10:9-10ನ್ನು ಓದಿರಿ **(11)**. ನೀವು ಇಂದು ನಿಮ್ಮ ಹೃದಯದಲ್ಲಿ **ನಂಬಿ** ನಿಮ್ಮ ಬಾಯಿಂದ **ಅರಿಕೆಮಾಡಿ** ಕ್ರಿಸ್ತನನ್ನು ಅಂಗೀಕರಿಸಬಹುದು. ಪ್ರಾರ್ಥನೆಯು ನಿಮ್ಮನ್ನು ರಕ್ಷಿಸುವದಿಲ್ಲ. **ಕ್ರಿಸ್ತನಲ್ಲಿ ನೀವು ಇಡುವ ನಂಬಿಕೆಯೇ** ನಿಮ್ಮನ್ನು ರಕ್ಷಿಸುವುದು. ಪ್ರಾರ್ಥನೆಯ ಮಾತುಗಳು ನಿಮ್ಮ ನಂಬಿಕೆಯನ್ನು ವ್ಯಕಪಡಿಸಬಲ್ಲವು. ಒಂದು ಸರಳವಾದ ಪ್ರಾರ್ಥನೆ ಇಲ್ಲಿದೆ: "ಕರ್ತನಾದ ಯೇಸುವೇ, ನನಗೆ ನೀನು ಬೇಕು. ನಿನ್ನ ವಿರುದ್ಧವಾಗಿ ಪಾಪ ಮಾಡಿದ್ದೇನೆಂದು ಒಪ್ಪಿಕೊಳ್ಳುತ್ತೇನೆ, ದಯವಿಟ್ಟು ನನ್ನ ಪಾಪಗಳನ್ನು ಕ್ಷಮಿಸು. ಪಾಪಗಳ ಕ್ಷಮಾಪಣೆಯ ಮತ್ತು ನಿತ್ಯಜೀವದ ನಿನ್ನ ಉಚಿತವಾದ ವರವನ್ನು ನಂಬಿಕೆಯಿಂದ ಈ ದಿನ ನಾನು ಅಂಗೀಕರಿಸಿಕೊಳ್ಳುವೆನು. ಯೇಸುವಿನ ಹೆಸರಿನಲ್ಲಿ ಬೇಡಿದ್ದೇನೆನೆ, ಆಮೆನ್."

13.ಒಬ್ಬರು ನಂಬಿಕೆಯ ಮೂಲಕ ದೇವರು ನೀಡುವ ನಿತ್ಯಜೀವದ ವರವನ್ನು ಅಂಗೀಕರಿಸಿಕೊಂಡ ಬಳಿಕ, ಹೀಗೆ ಕೇಳಿರಿ, **"ನಿಮ್ಮ ಪಾಪಗಳನ್ನು ಕ್ಷಮಿಸಿ ನಿಮಗೆ ನಿತ್ಯಜೀವವನ್ನು ಕೊಡುವವನೆಂದು ಕ್ರಿಸ್ತನಲ್ಲಿ ನೀವು ವಿಶ್ವಾಸವನ್ನಿಡುವಿರೋ?"** ತರುವಾಯ ಅವರ ನೂತನ ನಂಬಿಕೆಯಲ್ಲಿ ಅವರನ್ನು ಪ್ರೋತ್ಸಾಹಿಸಿರಿ ಮತ್ತು ಅವರಿಗಾಗಿ ಪ್ರಾರ್ಥಿಸಿರಿ.

14.ಯುದ್ಯೋಪಾಯದ ಪ್ರಭಾವ ಸುವಾರ್ತೀಕರಣ ಸಾಧನದಲ್ಲಿನ ಕಡೆಯ ಫಲಕವನ್ನು ಹರಿದು ಹಾಕಿರಿ. ಅವರ ಸಂಪರ್ಕದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಿರಿ ಮತ್ತು ಸರಿ ಹೊಂದುವ ಪೆಟ್ಟಿಗೆಗಳಲ್ಲಿ ಸರಿಯೆಂದು ಗುರುತಿಸಿರಿ.

15.ಸಾಧ್ಯವಾದಲ್ಲಿ, ಯುದ್ಯೋಪಾಯದ ಪ್ರಭಾವ ಸುವಾರ್ತೀಕರಣ ಸಾಧನವನ್ನು ಬಳಸಿ ಅವರನ್ನು ಶಿಷ್ಯರನ್ನಾಗಿ ಮಾಡುವ ಕೆಲಸವನ್ನು ಆರಂಭಿಸುವದಕ್ಕೆ ನಾಳೆ ಅವರನ್ನು ಭೇಟಿಯಾಗಲು ಸಮಯವನ್ನು ನಿಗಧಿ ಪಡಿಸಿಕೊಳ್ಳಿರಿ.

16.ಸ್ಥಾಪಿಸಲ್ಪಡುತ್ತಿರುವ ನೂತನ ಸಭೆಯ ಉಪಗುಂಪಿನ ನಾಯಕನಿಗೆ ಆ ಮಾಹಿತಿಯನ್ನು ಒಪ್ಪಿಸಿರಿ.





ಯೆಸರು ____________________

ವಿಳಾಸ ____________________

____________________

ದೂರವಾಣಿ ಸಂಖ್ಯೆ ____________________

ದಿನಾಂಕ ____________ ವಯಸ್ಸು ____________

☐ ನಾನು ಇವತ್ತು ಕ್ರಿಸ್ತನನ್ನು ನನ್ನ ರಕ್ಷಕನನ್ನಾಗಿ ಅಂಗಿಕರಿಸಿಕೊಂಡೆ.

☐ ನನ್ನ ಪ್ರಾರಂಬದ ಕ್ರೈಸ್ತ ನಂಬಿಕೆಯ ಬೆಳವಣಿಗೆಯ ನಿಮಿತ್ತ ನಾಳೆ ನಾನು ಭೇಟಿಯಾಗಲು ಇಚ್ಚಿಸುತ್ತೇನೆ.

ನಾಳೆ ಭೇಟಿಯ ಸಮಯ ____________________

ಅಥಾವಾ ಇತರೆ ದಿನಾಂಕ ____________ ಸಮಯ ____________

☐ ಯೇಸು ಕ್ರಿಸ್ತನ ವಿಷಯವಾಗಿ ನಾನು ಇನ್ನೂ ಹೆಚ್ಚಾಗಿ ತಿಳದುಕೊಳ್ಳಲು ನನ್ನ ನೆರೆಹೊರೆವರೊಂದಿಗೆ ಬೇಟಿಮಾಡಲು ಇಚ್ಚಿಸುತ್ತೇನೆ.

**ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1**
**ಸಾಧನ ಯಾತ್ರೆ *3:* ಯುದ್ಧೋಪಾಯ ಪ್ರಭಾವದ ಸುವಾರ್ತೀಕರಣದ**
**ಸಾಧನವನ್ನು ಬಳಸುವುದು ಹೇಗೆ**

# ನೀವು ಒಟ್ಟಾಗಿ ಕೂಡಿಬರುವ ವೇಳೆ ಈ 5 ಹೆಜ್ಜೆಗಳ ಪ್ರಕ್ರಿಯೆಯನ್ನು ಅನುಸರಿಸಿರಿ:

1. ***ಸಂಬಂಧಗೊಳಿಸಿರಿ***: ನೀವು ಕಡೆಯ ಸಾರಿ ಭೇಟಿಯಾದಂದಿನಿಂದ ಇಲ್ಲಿಯ ತನಕ ಅವರು ಹೇಗಿರುತ್ತಾರೆ ಮತ್ತು ಅವರ ಜೀವಿತಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಕಂಡುಕೊಳ್ಳಿರಿ.

2. ***ಪ್ರೋತ್ಸಾಹಿಸಿರಿ***: ಪಕ್ವತೆಯಿಂದ ಉತ್ತರಿಸುವ/ಹೊಣೆಗಾರಿಕೆಯ ಪ್ರಶ್ನೆಗಳನ್ನು ಕೇಳುವ ಮೂಲಕ ನಿಮ್ಮ ಸಮಯವನ್ನು ಆರಂಭಗೊಳಿಸಿರಿ:
   a. ನಾವು ಕೊನೆಯ ಬಾರಿ ಭೇಟಿಯಾದ ಸಮಯದಿಂದ ಇಲ್ಲಿಯ ತನಕ ಪ್ರತಿ ದಿನ ದೇವರ ವಾಕ್ಯವನ್ನು ಧ್ಯಾನಿಸುವುದು ಮತ್ತು ಪ್ರಾರ್ಥನೆ ಮಾಡುವ ಮೂಲಕ ಆತನ ಸಂಗಡ ಏಕಾಂತ ಸಮಯವನ್ನು ಕಳೆದಿರುವಿರೋ? ದೇವರು ನಿಮಗೆ ಏನನ್ನು ಹೇಳಿದನು?
   b. ನೀವು ನಿಮ್ಮ ಕುಟುಂಬ, ಸ್ನೇಹಿತರು, ನೆರೆಯವರು, ಮತ್ತು ಸಭೆಗಳಲ್ಲಿ ನಿಮ್ಮ ಪ್ರಾಮುಖ್ಯವಾದ ಸಂಬಂಧಗಳಲ್ಲಿ ಪ್ರೀತಿಯಿಂದ ನಡೆದುಕೊಂಡಿರುವಿರೋ?
   c. ನೀವು ಒಂದು ವ್ಯಸನಕರ ವರ್ತನೆಗೆ ನಿಮ್ಮನ್ನು ಒಪ್ಪಿಸಿಕೊಂಡಿರುವಿರೋ?
   d. ನೀವು ಕಳೆದ ಸಾರಿ ನಮ್ಮ ಬೈಬಲ್ ಅಧ್ಯಯನ ವೇಳೆ ಮಾಡಿಕೊಂಡ ಸಮರ್ಪಣೆಯನ್ನು ಪೂರ್ತಿಗೊಳಿಸಿದಿರೋ? ಹೇಗೆ?

<u>ಶಿಷ್ಯತ್ವದ ಮಾರ್ಗ:</u>

ಮುಂದಿನ ಅಂಶಗಳನ್ನು ಅನುಸರಿಸಿ ಸರಿಪಡಿಸಲು ಕೆಲವು ಪ್ರಶ್ನೆ ಹಾಗೂ ಇನ್ನೂ ಹೆಚ್ಚಾಗಿ ಸರಿಪಡಿಸಲು ವಚನಗಳನ್ನು ಉಪಯೋಗಿಸಿದೆ.

1. ಇತರರು ಕೇಳಸಿಕೊಂಡಿರುವ ರೀತಿಯಲ್ಲಿ ಓದುವಹಾಗೆ. ನಾವು ಜೊತೆಯಾಗಿ ಸೇರಿ ವಚನಗಳನ್ನು ಶಬ್ದವಾಗಿ ಓದೋಣ

2. ಪ್ರಶ್ನೆಗಳಗೆ ಉತ್ತರ ಕೊಡಲು ಎಲ್ಲರಿಗೂ ಅವಕಾಶ ಕೊಡಿರಿ.

3. ಪ್ರಶ್ನೆ ೨ ಹಾಗೂ ೪ ಆದ ನಂತರ ತಿರುಗಿ ವಚನಗಳನ್ನು ಪುನಾರಾವರ್ತಿಸಿರಿ.

4. ಎಲ್ಲವೂ ಮುಗಿಸಿದ ನಂತರ, ಪ್ರಾರ್ಥನೆಯ ವಿಷಯಗಳನ್ನು ಒಬ್ಬರಿಗಿಬ್ಬರು ಹಂಚಿಕೊಳ್ಳಿರಿ

5. ಪ್ರಾರ್ಥಿಸಿ.

3. ***ಚರ್ಚಿಸಿರಿ***: ಪ್ರತಿಯೊಂದು ಭೇಟಿಯ ವೇಳೆ ನೀಡಲಾಗಿರುವ ಬೈಬಲ್ ವಾಕ್ಯಭಾಗವನ್ನು ಓದಿರಿ ಮತ್ತು 6 ಪ್ರಶ್ನೆಗಳ ನಮೂನೆಯನ್ನು ಬಳಿಸಿ ಚರ್ಚೆ ಮಾಡಿರಿ (ಮಾರ್ಗಸೂಚಿಗಳು ಸಾಧನದಲ್ಲಿ ಬರೆಯಲ್ಪಟ್ಟಿವೆ).
   a. ಹೊಸ ವಿಶ್ವಾಸಿಗಳನ್ನು 3 ಗುಂಪುಗಳಾಗಿ ವಿಂಗಡಿಸಿರಿ ಮತ್ತು 1ನೇ ಭೇಟಿಗಾಗಿ 6 ಪ್ರಶ್ನೆಗಳನ್ನು (ಕೆಳಗೆ ತೋರಿಸಲಾಗಿರುವ) ಬಳಸಿರಿ- 6 ಪ್ರಶ್ನೆಗಳನ್ನು ಹೇಗೆ ಬಳಸುವದೆಂದು ಎಲ್ಲರೂ ಅರ್ಥಮಾಡಿಕೊಳ್ಳುವಂತೆ ನೋಡಿಕೊಳ್ಳಿರಿ.

ಪ್ರಶ್ನೆಗಳು:

ಈ ಸಂದರ್ಬದ ಭೇಟಿಯ ಅಂಗವಾಗಿ ಗಟ್ಟಿಯಾಗಿ ವಚನಗಳನ್ನು ಓದಿರಿ/ ಮತ್ತು ಮೊದಲಿನ ಎರಡು ಪ್ರಶ್ನೆಗಳನ್ನು ವಿವವರವಾಗಿ ಚರ್ಚಿಸಿರಿ.

1. ಈ ಆಂಶದ ಭಾಗದಿಂದ ನಿಮಗೆ ಇಷ್ಟವಾದದ್ದು ಏನು?
2. ಈ ಭಾಗದಿಂದ ನಿಮಗೆ ಇಷ್ಟವಾಗದೆ ಹಾಗು ಗೊಂದಲಕ್ಕೀಡು ಮಾಡಿರುವ ಅಂಶಗಳು ಯಾವವು?
(ತಿರುಗಿ ವಚನದ ಭಾಗಗಳನ್ನು ಗಟ್ಟಿಯಾಗಿ ಓದಿರಿ.)

3. ಈ ಅಂಶದ ಭಾಗದೊಳಗಿನ ಮನುಷ್ಯರಿಂದ ಏನನ್ನು ಕಲತಿರಿವಿರಾ?
4. ದೇವರ ವಿಷಯದಲ್ಲಿ ಏನನ್ನು ಕಲಿತಿರುವಿರಾ?
5. ಈ ವಚನಗಳ ಅದ್ಯಯನ ಮುಖಾಂತರ ನಿನ್ನ ಜೀವಿತ ಈ ವಾರದಲ್ಲಿ ಹೇಗೆ ಪ್ರಬಾವ ಬೀರಬಹುದು? (ಸೂಚನೆ: ಹೇಳರುವ ಉತ್ತರಗಳನ್ನು ಬರೆದಿಟ್ಟುಕೊಂಡು, ಮುಂದಿನವಾರದಲ್ಲಿ ಅವುಗಳನ್ನು ಉಪಯೋಗಿಸಿರಿ.
6. ಈಪಾಠ್ಯಕ್ರಮಗಳನ್ನು ಉಪಯೋಗಿಸಿಕೊಂಡು ಈ ವಾರದಲ್ಲಿ ಯಾರಿಗೆ ಯೇಸುವಿನ ಬಗ್ಗೆ ಸಾರಿ ಮತ್ತು ಶಿಷ್ಯತ್ವದಲ್ಲಿ ಮನ್ನಡೆಸುತ್ತಿರಿ (ಸೂಚನೆ: ಅವರ ಹೆಸರನ್ನು ನಮೂದಿಸಿ. ಯಾಕೆ ಮತ್ತು ಯಾವಾಗ ತಿಳಸುತ್ತೀರಿ? ಈ ವಿಷಯಗಳನ್ನು ಬರೆದಿಟ್ಟು ಮುಂದಿನ ಭೇಟಿಯಲ್ಲಿ ಪುನಾರಾವರ್ತಿಸಿ.)

b. ಭೇಟಿ **1ನ್ನು ಓದಿಕೊಳ್ಳಿರಿ: "ಯೇಸುವನ್ನು ತಿಳಿದಿರುವಿರೋ?"**, ಯೋಹಾನ 11:17-44ನ್ನು ಆಧರಿಸಿ..

c. ಬೈಬಲಿನ ವಾಕ್ಯವನ್ನಾಧರಿಸಿದ ಪ್ರಶ್ನೆಗಳನ್ನು ಚರ್ಚಿಸಲು ಪ್ರತಿಯೊಬ್ಬರು ಸಂಕೋಚವಿಲ್ಲದವರಾಗಿರುವಂತೆ ಖಚಿತ ಮಾಡಿಕೊಳ್ಳಿರಿ. *[ಗಮನಿಸಿರಿ: ಇದು ಒಂದು ಪ್ರಸಂಗವನ್ನು ಮಾಡುವ ಸ್ಥಳವಲ್ಲ. ವಾಕ್ಯಗಳನ್ನು ಅಧ್ಯಯನ ಮಾಡಿ ಅವರ ಜೀವಿತಗಳಿಗೆ ಹೇಗೆ ಅನ್ವಯಿಸಿಕೊಳ್ಳಬೇಕೆಂದು ಕಲಿತುಕೊಳ್ಳುವಂತೆ ಹೊಸ ವಿಶ್ವಾಸಿಗಳಿಗೆ ನೀವು ಸಹಾಯ ಮಾಡುತ್ತಿರುವಿರಿ.]*

**ವಚನಗಳು:**

**ಮೊದಲನೆಯ ಬೇಟಿ:**
"ಯೇಸು ಯಾರು"?
ಯೋಹಾನ: 11:17-27

**ಎರಡನೇಯ ಭೇಟಿಗೆ**
"ದೈವಿಕ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದು"
ಯೋಹಾನ :3:16-18

**ಮೂರನೆಯ ಬೇಟಿಯಲ್ಲಿ**
ನಿಮ್ಮ ರಕ್ಷಣೆಯ ಕುರಿತು ಖಚಿತತೆ ಇರಲಿ

**ನಾಲ್ಕನೆಯ ಬೇಟಿ**
ಕ್ರಿಸ್ತನೊಂದಿಗೆ ನೆಲೆಯಾಗಿರು.
ಯೋಹಾನ. 15:1-11

4. **ಯೋಜನೆ ಮಾಡಿರಿ**: ವಾರದ ವೇಳೆಯಲ್ಲಿ ಪ್ರತಿಯೊಬ್ಬನು ಓದುವ ಬೈಬಲಿನ ವಾಕ್ಯಭಾಗದ ವಿಷಯದಲ್ಲಿ ಒಮ್ಮತವನ್ನು ವ್ಯಕ್ತಪಡಿಸಿಕೊಳ್ಳಿರಿ. (ದಿನಕ್ಕೆ 3 ಅಧ್ಯಾಯಗಳನ್ನು ಓದುವುದು ಸೂಚಿಸಲ್ಪಟ್ಟಿರುತ್ತದೆ).
   a. ಓದಲು ಬಾರದವರ ವಿಷಯದಲ್ಲಿ ಸೂಕ್ಷ್ಮತೆಯುಳ್ಳವರಾಗಿರ್ರಿ.
   b. ಸಾಧ್ಯವಾದರೆ ಪರ್ಯಾಯವಾಗಿ ಆಡಿಯೋ ಬೈಬಲ್‌ನಂತಹ ಮಾರ್ಗವನ್ನು ಏರ್ಪಡಿಸಿರಿ.
   c. ನಿಮ್ಮ ಮುಂದಿನ ಭೇಟಿಯಲ್ಲಿ ಅನುಸರಣಾಕಾರ್ಯವನ್ನು ನಡಿಸುವದಕ್ಕೆ 5 ಮತ್ತು 6 ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದಿಟ್ಟುಕೊಳ್ಳಲು ಮರೆಯದಿರಿ.
   d. ನಿಮ್ಮ ಮುಂದಿನ ಶಿಷ್ಯತ್ವದ ಭೇಟಿಯು ಯಾವಾಗವೆಂದು ನಿಗಧಿ ಪಡಿಸಿಕೊಳ್ಳಿರಿ.
   e. ಭಾಗಿಯಾಗುವದಕ್ಕೆ ಯಾರು ಸಮರ್ಪಣೆ ಹೊಂದಿದ್ದಾರೆ ಮತ್ತು ನಂಬಿಗಸ್ತರೆಂದು ಗಮನಿಸಿರಿ- ಮನೆಯಲ್ಲಿ ಓದುವುದು, ಮತ್ತು ಕ್ರಿಸ್ತನ ವಿಷಯದಲ್ಲಿ ಇನ್ನಷ್ಟು ಹೆಚ್ಚು ಕಲಿತುಕೊಳ್ಳಲು ಹಾಗೂ ಬೇರೆಯವರೊಂದಿಗೆ ಆಥನ ಕುರಿತು ಹಂಚಿಕೊಳ್ಳಲು ಸಿದ್ಧವುಳ್ಳವರು. ಇಂಥವರು ನಿಮ್ಮ ಆರಂಭದ 4 ಭೇಟಿಗಳ ನಂತರ ಶಿಷ್ಯತ್ವದ ಸಂಬಂಧವನ್ನು ಮುಂದುವರೆಸಿಕೊಳ್ಳಲು ಯೋಗ್ಯರಾದ ಜನರಾಗಿರುವರು.

5.**ಪ್ರಾರ್ಥಿಸಿರಿ**: ಒಬ್ಬರಿಗೊಬ್ಬರು ಪ್ರಾರ್ಥಿಸುವ ಮತ್ತು 5 ಹಾಗೂ 6 ಪ್ರಶ್ನೆಗಳಿಗೆ ಮಾಡಿಕೊಂಡ ಸಮರ್ಪಣೆಗಳಿಗಾಗಿ ಪ್ರಾರ್ಥಿಸುವ ಮೂಲಕ ನಿಮ್ಮ್ ಸಮಯವನ್ನು ಮುಕ್ತಾಯಗೊಳಿಸಿರಿ.

| | ಶಿಷ್ಯತ್ವದ ಮಾರ್ಗ: | ಪ್ರಶ್ನೆಗಳು: | ವಚನಗಳು: |
|---|---|---|---|
| ತಂಡದ ಹೆಸರು:<br>________<br>ಸೆಲ್ ಸಭೆ ನಾಯಕ:<br>________<br>ಸಮಯ/ಸಭೆ ಸೆಲ್ ಪ್ರಾರಂಬದ ದಿನ<br>________<br>________<br>ಸುವಾರ್ತೆಯನ್ನು ಸಾರಿದ ವ್ಯಕ್ತಿ:<br>________<br>________ | ಮುಂದಿನ ಅಂಶಗಳನ್ನು ಅನುಸರಿಸಿ ಸರಿಪಡಿಸಲು ಕೆಲವು ಪ್ರಶ್ನೆ ಹಾಗೂ ಇನ್ನೂ ಹೆಚ್ಚಾಗಿ ಸರಿಪಡಿಸಲು ವಚನಗಳನ್ನು ಉಪಯೋಗಿಸಿದೆ.<br>1. ಇತರರು ಕೇಳಸಿಕೊಂಡಿರುವ ರೀತಿಯಲ್ಲಿ ಓದುವಹಾಗೆ, ನಾವು ಜೊತೆಯಾಗಿ ಸೇರಿ ವಚನಗಳನ್ನು ಶಬ್ದವಾಗಿ ಓದೋಣ<br>2. ಪ್ರಶ್ನೆಗಳಗೆ ಉತ್ತರ ಕೊಡಲು ಎಲ್ಲರಿಗೂ ಅವಕಾಶ ಕೊಡಿರಿ.<br>3. ಪ್ರಶ್ನೆ ೨ ಹಾಗೂ ೪ ಆದ ನಂತರ ತಿರುಗಿ ವಚನಗಳನ್ನು ಪುನಾರಾವರ್ತಿಸಿರಿ.<br>4. ಎಲ್ಲವೂ ಮುಗಿಸಿದ ನಂತರ, ಪ್ರಾರ್ಥನೆಯ ವಿಷಯಗಳನ್ನು ಒಬ್ಬರಿಗಿಬ್ಬರು ಹಂಚಿಕೊಳ್ಳರಿ<br>5. ಪ್ರಾರ್ಥಿಸಿ. | ಈ ಸಂದರ್ಬದ ಭೇಟಿಯ ಅಂಗವಾಗಿ ಗಟ್ಟಿಯಾಗಿ ವಚನಗಳನ್ನು ಓದಿರಿ/ ಮತ್ತು ಮೊದಲಿನ ಎರಡು ಪ್ರಶ್ನೆಗಳನ್ನು ವಿವವರವಾಗಿ ಚರ್ಚಿಸಿರಿ.<br>1. ಈ ಆಂಶದ ಭಾಗದಿಂದ ನಿಮಗೆ ಇಷ್ಟವಾದದ್ದು ಏನು?<br>2. ಈ ಭಾಗದಿಂದ ನಿಮಗೆ ಇಷ್ಟವಾಗದೆ ಹಾಗು ಗೊಂದಲಕ್ಕೀಡು ಮಾಡಿರುವ ಅಂಶಗಳು ಯಾವವು? (ತಿರುಗಿ ವಚನದ ಭಾಗಗಳನ್ನು ಗಟ್ಟಿಯಾಗಿ ಓದಿರಿ.)<br>3. ಈ ಅಂಶದ ಭಾಗದೊಳಗಿನ ಮನುಷ್ಯರಿಂದ ಏನನ್ನು ಕಲಿತಿರಿವಿರಾ?<br>4. ದೇವರ ವಿಷಯದಲ್ಲಿ ಏನನ್ನು ಕಲಿತಿರುವಿರಾ?<br>5. ಈ ವಚನಗಳ ಅದ್ಯಯನ ಮುಖಾಂತರ ನಿನ್ನ ಜೀವಿತ ಈ ವಾರದಲ್ಲಿ ಹೇಗೆ ಪ್ರಬಾವ ಬೀರಬಹುದು? (ಸೂಚನೆ: ಹೇಳರುವ ಉತ್ತರಗಳನ್ನು ಬರೆದಿಟ್ಟುಕೊಂಡು, ಮುಂದಿನವಾರದಲ್ಲಿ ಅವುಗಳನ್ನು ಉಪಯೋಗಿಸಿರಿ.<br>6. ಈಪಾಠ್ಯಕ್ರಮಗಳನ್ನು ಉಪಯೋಗಿಸಿಕೊಂಡು ಈ ವಾರದಲ್ಲಿ ಯಾರಿಗೆ ಯೇಸುವಿನ ಬಗ್ಗೆ ಸಾರಿ ಮತ್ತು ಶಿಷ್ಯತ್ವದಲ್ಲಿ ಮನ್ನಡೆಸುತ್ತಿರಿ? (ಸೂಚನೆ: ಅವರ ಹೆಸರನ್ನು ನಮೂದಿಸಿ. ಯಾಕೆ ಮತ್ತು ಯಾವಾಗ ತಿಳಸುತ್ತೀರಿ? ಈ ವಿಷಯಗಳನ್ನು ಬರೆದಿಟ್ಟು ಮುಂದಿನ ಭೇಟಿಯಲ್ಲಿ ಪುನಾರಾವರ್ತಿಸಿ.) | **ಮೊದಲನೆಯ ಬೇಟಿ:**<br>"ಯೇಸು ಯಾರು"?<br>ಯೋಹಾನ: 11:17-27<br>**ಎರಡನೇಯ ಭೇಟಿಗೆ**<br>"ದೈವಿಕ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದು"<br>ಯೋಹಾನ :3:16-18<br>**ಮೂರನೆಯ ಬೇಟಿಯಲ್ಲಿ**<br>ನಿಮ್ಮ ರಕ್ಷಣೆಯ ಕುರಿತು ಖಚಿತತೆ ಇರಲಿ<br>**ನಾಲ್ಕನೆಯ ಬೇಟಿ**<br>ಕ್ರಿಸ್ತನೊಂದಿಗೆ ನೆಲೆಯಾಗಿರು.<br>ಯೋಹಾನ. 15:1-11 |

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ಸಾಧನ ಯಾತ್ರೆ *4:* ಸೇವೆಯ ನಕ್ಷೆ

STRATEGIC IMPACT INTERNATIONAL

# ಸೇವೆಯ ನಕ್ಷೆ

ಮೊದಲಿನ ತಲೆಮಾರು (ನೀನು ಮಾಡು, ನಾನು ವೀಕ್ಷಿಸುತ್ತೇನೆ) ಸ್ಥಳ

ಮೊದಲಿನ ತಲೆಮಾರು (ನೀನು ಮಾಡು, ನಾನು ವೀಕ್ಷಿಸುತ್ತೇನೆ) ಸ್ಥಳ

ಮೊದಲಿನ ತಲೆಮಾರು [ನೀನು] (ನಾನು ಮಾಡುತ್ತೇನೆ, ನೀನು ವೀಕ್ಷಿಸು) ಸ್ಥಳ

## ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1
## ಸಾಧನ ಯಾತ್ರೆ *5:* ಹೊಸ ಸೆಲ್ ಸಭೆಯನ್ನು ಪ್ರಾರಂಬಿಸಲಿಕ್ಕೆ ಸ್ಥಳವನ್ನು ಆಯ್ಕೆಮಾಡಲು ಬೇಕಾದ ಪ್ರಾಯೋಗಿಕ ಮಾರ್ಗ ಸೂಚಿಗಳು.

1. ಅಥವಾ ಕೆಲವು ಇತರ ಯಾವುದೆ ಸಭೆಗಳು ಇಲ್ಲದ ಸ್ಥಳಗಳನ್ನು ಗುರುತಿಸಿ ಅಲ್ಲಿ ಹೊಸ ಸೆಲ್ ಸಭೆಯನ್ನು ನಿರ್ಮಿಸಿರಿ ಇಂತಹ ಪ್ರದೇಶದಲ್ಲಿ ನಿಮ್ಮದೆ ಆದ ನಿರ್ದಿಷ್ಟ ಪಂಥದ ಗುಂಪಿನ ಯಾವುದೆ ಸಭೆಗಳು ಇರದೆ ಇರಬಹುದು ಆದರೆ ಅಲ್ಲಿ ಅನೇಕ ಕ್ರೈಸ್ತರು ಇರಲಿಕ್ಕೆ ಸಾಧ್ಯತೆಯಿದೆ, ಆದರೆ ಎಲ್ಲಿ ಸುವಾರ್ತೆ ಅವಶ್ಯಕತೆ ಇದೆಯೋ ಅಲ್ಲಿಗೆ ಹೋಗಿ ಸೇವೆ ಪ್ರಾರಂಭಿಸುವುದು ಉತ್ತಮ!

2. ನಿಮ್ಮ ಜನರು ಹಾಗೂ ತಂಡದವರು ಪ್ರಸ್ತುತ ಎಲ್ಲಿದೆಯೋ ಅಲ್ಲಿಯೇ ಹೊಸ ಸೆಲ್ ಪ್ರಾರಂಭಿಸಲು ಪ್ರಯತ್ನಪಡಿ, ಅದನ್ನು ಬಿಟ್ಟು ತಾಯಿಯ ಸಭೆಯ ಸ್ಥಳದಿಂದ ಎಷ್ಟೋ ದೂರ ಪ್ರಯಾಣಮಾಡಿ ಸೇವೆಯು ಮಾಡುವುದಕ್ಕಿಂತ ಹತ್ತಿರದಲ್ಲಿಯೇ ಅದರ ಅವಶ್ಯಕತೆ ಹೆಚ್ಚು ಇರಬಹುದು ಮತ್ತು ಅಲ್ಲಿಯ ಜನರು ಅದಕ್ಕಾಗಿ ಹಾತೊರೆಯುಬಹುದು.

3. ಎಲ್ಲಿ ಸಭೆ ಪ್ರಾರಂಬಮಾಡಬೇಕೆಂದಿದ್ದಿರೋ ಅಲ್ಲಿ ಒಬ್ಬ ಸಮಾಧಾನವುಳ್ಳ ವ್ಯಕ್ತಿಯನ್ನು ಹುಡುಕಿರಿ, *(ಲೂಕಾ 10:57)* ಆತನು ಸೇವೆಗೆ ಅನುಕೂಲ ಮತ್ತು ಇನ್ನಿತರ ಎಲ್ಲಾ ಸಮಾಜದ ಕಾರ್ಯದಲ್ಲಿ ಸಹಾಯ ಮಾಡುವಂತವನಾಗಿರಬೇಕು. *(ಉದಾ: ಸಮಾರ್ಯದ ಸ್ತ್ರೀ ಯೊಹಾನ 4* ಮತ್ತು ಕೊರ್ನೇಲನು ಆಪೊಸ್ತಲ *10,* ಲುದಿಯಾ, ಅಪೊಸ್ತಲ *16:11-15).*

4. ಪ್ರಾಥನೆಯ ನಡುಗೆಯನ್ನು ಮಾಡಬೇಕು. ನಿಮ್ಮ ತಂಡದ ಜನರನ್ನು ಪಕ್ಕದ ಪಟ್ಟಣದ ಊರುಗಳಿಗೆ ಕಳುಹಿಸಿ ಅಲ್ಲಿ ಎಂತಹ ಕಾರ್ಯಗಳು ನಡೆಯುತ್ತಾ ಇವೆ ಆನ್ನುವುದನ್ನು ಗಮನಿಸಿ, ಮತ್ತು ಅಲ್ಲಿ ನಿಂತು ಅವುಗಳ ವಿಷಯಗಳ ಕುರಿತು ಪ್ರಾರ್ಥನೆ ಮಾಡಿ ಅಲ್ಲಿಯ ಸ್ಥಳವನ್ನು ದೇವರಲ್ಲಿ ಮರೆಮಾಡಿ ಪಾರ್ಥಿಸಬೇಕು.

5. ಅತಿ ಪ್ರಭಾವವಾದ ಸಭೆಮಾಡಬೇಕಾದರೆ ದೊಡ್ಡ ಸ್ಥಳ ಇರಲೇಬೇಕು ಅಂತ ನೆನಸಬೇಡಿರಿ, ಎಲ್ಲಿಯಾದರೂ ಚಿಕ್ಕ ಸ್ಥಳ ಅಥವಾ ಮನೆಗಳನ್ನು ಹುಡುಕಿರಿ ಇವು ಎಲ್ಲರಿಗೂ ಅನೂಕೂಲಕರವಾಗಿರಲಿ.
   A. ಆಯಾ ಪ್ರದೇಶದಲ್ಲಿನ ಎಲ್ಲರನ್ನು ಒಟ್ಟಿಗೆ ಸೇರಿಸುವ ಮೊದಲು ನೀವು ಮನೆ ಅಥವಾ ಇತರ ಸ್ಥಳಗಳಲ್ಲಿ ಹಲವಾರು ಸೆಲ್ ಸಭೆಗಳನ್ನು ಪ್ರಾರಂಭಿಸುವ ಕಾರ್ಯವನ್ನು ಪರಿಗಣಿಸ ಬಯಸಬಹುದು.
   B. .ಸಭೆ ಎಂದು ಕರೆಯುವಾಗ ಅದು ಕೇವಲ ಕಟ್ಟಡವಷ್ಟೆ ಅಲ್ಲ ಅಂಥ ಜ್ಞಾಪಕಕ್ಕೆ ತಂದುಕೊಳ್ಳಿರಿ. ಸಭೆ ಅಂದರೆ ಕ್ರಿಸ್ತನ ಶರೀರ, ವಿಶ್ವಾಸಿಗಳೇ ಸಭೆ, ಮನುಷ್ಯರ ಕೈಗಳಿಂದ ಮಾಡಿದ ವಸ್ತುಗಳಲ್ಲಿ ಆತನೆಂದಿಗೂ ವಾಸ ಮಾಡುವುದಿಲ್ಲಾ ಅಪೊಸ್ತ ೭:೪೮-೫೦, ಆತನ ಭಕ್ತರ ಹೃದಯದಲ್ಲಿ ವಾಸಮಾಡುವವನು. *(1 ಕೊರಿಂಥ 3:16; 2 ಕೊರಿಂಥ 1:21-22; ಗಲಾತ್ಯ 4:4-7; 2 ತಿಮೊ 1:14)* ಆದ್ದರಿಂದ ನೀನು ಯಾವ ಸ್ಥಳವನ್ನು ಸಭೆಗಾಗಿ ಬಾಡಿಗೆ ಅಥವಾ ಸ್ವಂತ ಮಾಡ ಬಯಸುವುದು ಬೇಡ. ಮೊದಲಿನ ಕಾಲದ ಸಭೆಗಳು ಅನೇಕ ವಿಧವಾದ ಸ್ಥಳಗಳಲ್ಲಿ ಸೇರುತ್ತಿದ್ದರು, ಅವರು ಮಂದಿರಗಳಲ್ಲಿ *(ಅಪೊಸ್ತ 3:1; ಅಪೊಸ್ತಲ 5:20-21, 42)* ಸಿನೆಗೋಗ ಮತ್ತು *(ಅಪೊಸ್ತಲ 14:1, 18:4, 19-21)* ಸಾರ್ವಜನಿಕ ಸ್ಥಳಗಳಲ್ಲಿ *(ಅಪೊಸ್ತಲ 18 :27-28; ಅಪೊಸ್ತಲ 20:20)* ಮತ್ತು ಶಿಕ್ಷಣಕೊಡುವ ಕೊಠಡಿಯಲ್ಲಿ ಭೇಟಿಯಾಗುತ್ತಿದ್ದರು. *(ಅಪೊಸ್ತಲ 19 :9-10)* ಅವರು ಮನೆಗಳಲ್ಲಿ *(ಅಪೊಸ್ತಲ 5:42; ಅಪೊಸ್ತಲ 20:20; ರೋಮಾ 16:3-5; ಕೊಲೆಸ್ಸೆ 4:15; ಪಿಲೆಮೋನ 1:1-3)* ಇದು ಮೊದಲ ಅಸ್ತಿತ್ವದ ಸಭೆಯ ಮೂರು ನೂರು ವರ್ಷಗಳ ಕಾಲದವರೆಗೆ ಸಾಮಾನ್ಯ ಅಭ್ಯಾಸವಾಗಿತ್ತು. ಈ ಸಮಯದಲ್ಲಿ ಸುವಾರ್ತೆಯು ಪ್ರಪಂಚಾದ್ಯಂತ ವ್ಯಾಪಿಸಿತ್ತು ಮೊದಲಿನ ಸಭೆಯ ಕಟ್ಟಡದ ಏಕೈಕ ಕಾರ್ಯಕ್ರಮಗಳು ಏನೆಂದರೆ, **1)** ಹೊಸ ವಿಶ್ವಾಸಿಗಳೊಂದಿಗೆ ದೇವರ ರಾಜ್ಯವನ್ನು ಕಟ್ಟುವುದು **2)** ಹೊಸ ಆತ್ಮಗಳನ್ನು ಪರಿಪಕ್ವತೆಯಲ್ಲಿ ಬೆಳೆಸುವುದು, ಮತ್ತು ಮುಖ್ಯವಾದ ಅಂಶವೇನೆಂದರೆ, ಎಲ್ಲಿ ಜನ ಸೇರುತ್ತಾರೋ ಅದು ಪ್ರಾಮುಖ್ಯವಲ್ಲಾ, ಒಬ್ಬರಿಗೂಬ್ಬರು ಸಹವಾಸಕ್ಕೆ ಬೇಟಿಯಾಗುವುದು ಒಂದೇ ಒಂದು ಪರಿಗಣಿಕೆ. ಎಲ್ಲರಿಗೂ ಗೊತ್ತಾಗುವ ಒಂದು ಸ್ಥಳವನ್ನು ನೋಡಿ ಗೊತ್ತು ಮಾಡಿಕೋ, ಅದು ಮಾರ್ಕೆಟ ಆಗಬಹುದು, ಅಥವಾ ರಸ್ತೆಯಾಗಬಹುದು, ಅಥವಾ ಪಾರ್ಕ ಆಗಬಹುದು, ನಿಮ್ಮ ಹತ್ತಿರ ಸಭೆಗಾಗಿ ಸ್ವಂತ ಸ್ಥಳವಿಲ್ಲಾ ಅಂತ ಯಾರೂ ಕೀಳಾಗಿ ಭಾವಿಸದೆ ಇರಲಿ. ಎಲ್ಲೆ ಇರಲಿ ಅನೇಕ ಹೊಸ ವಿಶ್ವಾಸಿಗಳನ್ನು ದೇವರಿಗಾಗಿ ಶಿಷ್ಯರನ್ನಾಗಿ ಮಾಡಿ ಅವರು ಇತರರನ್ನು ಶಿಷ್ಯರನ್ನಾಗಿ ಮಾಡುವುಂತಾಗಿರುದಾದರೆ, ನೀವು ದೇವರ ದೃಷ್ಟಿಯಲ್ಲಿ ಅತಿ ಸಫಲ ಸೇವೆ ಮಾಡಿದ ಹಾಗೆ. ನಿಮ್ಮ ಸ್ವಂತ ಜಾಗ ಇರಲಿ ಇರದೆ ಹೋಗಲಿ ಪರವಾಗಿಲ್ಲಾ, ನಮ್ಮ ಗುರಿ ಸಭೆಗಾಗಿ ದೊಡ್ಡ ಕಟ್ಟಡವನ್ನು ಕಟ್ಟಲಿಕ್ಕೆ ಉಪಯೋಗಿಸಿದಾದರೆ ನಾವು ನಿಜವಾಗಲೂ ದೇವರಿಗಾಗಿ ಶಿಷ್ಯರನ್ನು ತಯರಿಸುವುದು ಹಾಗೂ ಅವರು ಇತರರನ್ನು ಶಿಷ್ಯರನ್ನಾಗಿ ಮಾಡುವ ಕಾರ್ಯವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತೇವೆ.

6. ಹೊಸ ಸೆಲ್ ಸಭೆಯಾಗಿ ಸೇರಲು ಒಂದು ನಿರ್ಧಿಷ್ಟವಾದ ಸಮಯವನ್ನು ಗೊತ್ತುಮಾಡಿಟ್ಟು ಕೊಳ್ಳಿ. ಹೊಸ ಒಡಂಬಡಿಕೆಯಲ್ಲಿ ರವಿವಾರ ಆನ್ನುವುದು ವಾರದ ಮೊದಲನೆ ದಿನವಾಗಿದೆ, ಆದಿವಸ ಹೆಚ್ಚಿನ ಜನರಿಗೆ ಕೆಲಸದ ದಿನವಾಗಿತ್ತು. ಅದಾಗ್ಯೂ ಜನರು  ದೇವರನ್ನು ಆರಾಧಿಸಲು ಆ ದಿನ ಬರುತ್ತಾ ಇದ್ದರು.  ಕೆಲವರು ತಮ್ಮ ಕೆಲಸವಾದ ನಂತರ ಊಟಕ್ಕೆಂದು ನೆರೆದು ಬಂದು ಅಮೇಲೆ ಆರಾಧನೆಗೆ ಅಲ್ಲಿಯೇ ಸೇರುತ್ತಿದ್ದರು. ಅದೆ ರೀತಿ ಜನರು ತಮ್ಮ ಅನುಕೂಲತೆಗೆ ಅನುಸಾರವಾಗಿ ಹೊಸ ಸೆಲೆ ಸಭೆಗೆ ಸೇರುವ ಸಮಯವನ್ನು ನಿರ್ದಾರಮಾಡಲಿ. ಬಹುಶಃ ಜನರ ಕೆಲಸ ಹಾಗೂ ಇತರ ಜವಾಬ್ದಾರಿಗಳ ಅನುಸಾರವಾಗಿ ಒಳ್ಳೆಯ ಸಮಯವನ್ನು ನೋಡಿ ಸೆಲ್ ಸಭೆಗೆ ಸೇರಲು ನಿರ್ದಾರ ಮಾಡಲಿ.

7. ನೀವು ಹೊಸ ಸೆಲ್ ಸಭೆಯನ್ನು ಆರಂಭಿಸಿದಾಗ ನಿಮ್ಮ ತಂಡವು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಅಗತ್ಯವಿದೆ:
   A. ಯಾರು ಆರಾಧನೆಯನ್ನು ನಡೆಸಿಕೊಡುತ್ತಾರೆ? ಸಂಗೀತ ವಾದ್ಯಗಳು ಅಥವಾ ದ್ವನಿ ಉಪಕರಣಗಳು ಬೇಕಾಗಿದೆಯೇ?
   B. ಬೈಬಲ್ ಅದ್ಯಯನವನ್ನು ಮತ್ತು ಚರ್ಚೆಯನ್ನು ಯಾರು ಭೋದಿಸುವರು?
   C. ಮಕ್ಕಳೊಂದಿಗೆ ನಿಮ್ಮ ಜವಬ್ದಾರಿ ಏನು?
   D. ಕಾಣಿಕೆ ಎತ್ತಲ್ಪಡುವುದಾ? ಅದಕ್ಕೆ ಯಾರು ಜವಾಬ್ದಾರರು?  ಹೇಗೆ ಆ ಕಾಣಿಕೆಯನ್ನು ಉಪಯೋಗಿಸುತ್ತಿರಾ?
   E. ನಿಮಗೆ  ಇನ್ನು ಯಾವ ಸಾಮಗ್ರಿಗಳು ಅವಶ್ಯಕವಾಗಿವೆ? ಉದಾ: ಬೈಬಲಗಳು ಕುರ್ಚಿಗಳು ಹಾಡು ಪುಸ್ತಕಗಳು ಇತ್ಯಾದಿ.

**ನಿಮ್ಮ ಪ್ರದೇಶವನ್ನು ತಲುಪಲು ಜೀವನ ಪರ್ಯಂತರ ಯಾತ್ರೆ - ಯಾತ್ರೆ ಹಂತ 1**
**ಸಾಧನ ಯಾತ್ರೆ *6:* ನೀವು ಸೆಲ್ ಸಭೆಗೆ ಕೂಡುವಾಗ ಏನು ಮಾಡಬೇಕು*?***

1. **ಒಂದು ನಿರ್ಧಿಷ್ಟವಾದ ದಿನ ಸಮಯ ಮತ್ತು ಸ್ಥಳವನ್ನು ಗೊತ್ತುಮಾಡಿ ಸಭೆಯಾಗಿ ಕೂಡಿಬರುವುದಕ್ಕಾಗಿ.**

2. **ಒಮ್ಮೆ ಸಭೆಯಾಗಿ ನೀವು ಭೇಟಿಯಾದಾಗ ಈ ಸಾಮಾನ್ಯ ಸ್ವರೂಪವನ್ನು ಅನುಸರಿಸಿ:**

   **A. ಸ್ವಾಗತ ಬಯಸುವುದು**
   i. ಜನರು ಬರುವಾಗ ಅವರನ್ನು ಆದರದಿಂದ ಸ್ವಾಗತಮಾಡಿರಿ.
   ii. ಅವರು ಏನು ಮಾಡುತ್ತಾ ಇದ್ದಾರೆ ಅಥವಾ ಅವರ ಅವಶ್ಯಕತೆಗಳನ್ನು ಹಂಚಿಕೊಳ್ಳಲು ಇದು ಒಳ್ಳೆ ಸಮಯ.
   iii. ಹೊಸ ಜನರನ್ನು ಪರಿಚಯಿಸಿಕೊಡಿ.

   **B. ಆರಾಧನೆ**
   i. ಯಾವುದಕ್ಕೆ ಕೃತಜ್ಞರಾಗಿರಬೇಕು ಅನ್ನುವುದು ಜನರು ಹೇಳಲಿ.
   ii. ದೇವರು ತಮ್ಮ ಜೀವನದಲ್ಲಿ ಮಾಡಿದ ಉಪಕಾರಗಳಿಗೆ ಸಾಕ್ಷಿ ಕೊಡಲಿ.
   iii. ಸ್ತುತಿ ಹಾಗೂ ಆರಾಧನೆಯ ಹಾಡುಗಳನ್ನು ಹಾಡಲಿ.
      a. ನೀವು ಉಪಕರಣಗಳನ್ನು ಒದಗಿಸಬೇಕೆ?
      b. ಯಾರು ಹಾಡುಗಳನ್ನು ಹಾಡುತ್ತಾರೆ?
      c. ಜನರೆಲ್ಲರು ಹಾಡಿನಲ್ಲಿ ಪಾಲ್ಗೊಳ್ಳಲು ತಿಳಿದಂತ ಹಾಡುಗಳು ಅಥವ ಕಲಿಯಲಿಕ್ಕೆ ಉಪಯೋಗವಾದ ಹಾಡುಗಳಿರಲಿ.

   **C. ವಚನ**
   i. ಸತ್ಯವೇದದ ಅದ್ಯಯನದ ಗುಂಪನ್ನು ವಾಕ್ಯದ ಪ್ಯಾರದೊಂದಿಗೆ ಮುನ್ನಡೆಸಿರಿ.
   ii. ಅಥವಾ ಸತ್ಯವೇದದ ಅದ್ಯಯನ ಕುರಿತು ಒಬ್ಬರು ಉಪದೇಶ ಕೊಡಿರಿ.
   iii. ಗಮನಿಸಿ: ಸತ್ಯವೇದದ ಪ್ರತಿಯೊಂದು ಭಾಗವನ್ನು ಪ್ರಾಯೋಗಿಕವಾಗಿ ವಿಧೇಯವಾಗತಕ್ಕದ್ದು ಎಂದು ನಿಮ್ಮ ಗಮನವಿರಲಿ

   **D. ಕೆಲಸ**
   i. -ಹೇಗೆ ಸೇವೆಮಾಡುವುದು ಮತ್ತು ಹೇಗೆ ನಡೆಸಿಕೊಂಡು ಹೋಗಬೇಕು ಅನ್ನುವುದನ್ನು ನೀವು ತರಬೇತಿ ಕೊಡಬೇಕು. *(ಉದಾ: ಸುವಾರ್ತೆ ಸಾರುವುದು, ಶಿಷ್ಯರನ್ನಾಗಿ ಮಾಡುವುದು ಹಾಗೂ ಅವರ ಅಧ್ಯಾತ್ಮಿಕ ವರಗಳನ್ನು ಉಪಯೋಗಿಸಿಕೊಂಡು)*
   ii. ಮುಂಬರಲಿರುವ ವಾರದಲ್ಲಿ ಸಮುದಾಯಕ್ಕೆ ಅಗತ್ಯವಿರುವ ಅಗತ್ಯತೆಗಳನ್ನು ಮತ್ತು ವಿಧಾನಗಳನ್ನು ಚರ್ಚಿಸಿ.
   iii. ಸಭೆಯ ಔಟ ರೀಚಗಳನ್ನು ಮತ್ತು ಸೇವಾಕಾರ್ಯಗಳ ಯೋಜನೆಗಳನ್ನು ರಚಿಸಿ.
   iv. ಮುಂದಿನ ದಿನಮಾನಗಳಲ್ಲಿ ನೀವು ಮಾಡುವ ಸೇವೆಗಳಿಗೊಸ್ಕರ ಪ್ರಾರ್ಥಿಸಿರಿ.

3. **ಸಭೆಯಲ್ಲಿಯ ಜನರು ಮತ್ತು ಸೆಲ್ ಚರ್ಚಗಳ ನಡುವೆ ಸಂಪರ್ಕ ಹೊಂದಿಸಬಹುದಾದ ರಚನೆ.**

   A. ಶಿಷ್ಯತ್ವಕ್ಕಾಗಿ ವಿಶ್ವಾಸಿಗಳು 3 ಗುಂಪುಗಳಲ್ಲಿ ಸೇರುವುದು.

   B. ಎರಡು ಅಥವಾ ಮೂರು ಗುಂಪು ಹೊಣೆಯಾಗಿರುವುದಕ್ಕೆ ಜೊತೆಯಾಗಿ ಸೇರುವುದು.

   C. ಸಮುದಾಯದ ಸೇವೆ ಹಾಗೂ ಸುವಾರ್ತೆಯ ಕಾರ್ಯಕ್ಕೆ ತಂಡವಾಗಿ ಸೇರುವುದು,

   D. ವಿಶೇಷ ಕೂಟ ಮತ್ತು ಜೊತೆಯಾಗಿ ಸಮಯ ಕಳೆಯುವುದು.

   E. ನಾಯಕರ ತರಬೇತಿ ಕಾರ್ಯಕ್ರಮಗಳು ( ಯಾತ್ರದ ಹಂತಗಳು)

# ನಂಬಿಕೆಯ ಅರಿಕೆ

## ದೇವರು

*ಆದಿಕಾಂಡ 1:1; ಧರ್ಮೋ 6:4; ಮತ್ತಾಯ 28:19; ಯೋಹಾನ 4:24, 10:30; 2 ಕೊರಿಂಥ 13:14*

ನಾವು ಒಬ್ಬನೇ ಸತ್ಯ, ಪರಿಶುದ್ಧ ದೇವರು ಮೂವರು ವ್ಯಕ್ತಿಗಳಲ್ಲಿ- ತಂದೆ, ಮಗ, ಪರಿಶುದ್ಧಾತ್ಮ- ಅಸ್ತಿತ್ವದಲ್ಲಿರುವವನೆಂದು ನಂಬುತ್ತೇನೆ, ಅವರೊಬ್ಬಬ್ಬರೂ ಸಮಾನವಾಗಿ ದೈವತ್ವದ ಸಕಲ ಗುಣಗಳನ್ನು ಮತ್ತು ವ್ಯಕ್ತಿತ್ವದ ಗುಣಸ್ವಭಾವಗಳನ್ನು ಹೊಂದಿರುತ್ತಾರೆ. ಆದಿಯಲ್ಲಿ ದೇವರು ಶೂನ್ಯದಿಂದ ಲೋಕವನ್ನು ಮತ್ತು ಅದರಲ್ಲಿರುವ ಸಮಸ್ತವನ್ನೂ ಉಂಟು ಮಾಡಿದನು, ಹೀಗೆ ತನ್ನ ಶಕ್ತಿ, ಜ್ಞಾನ ಮತ್ತು ಒಳ್ಳೇತನ ಮಹಿಮೆಯನ್ನು ತೋರ್ಪಡಿಸಿದನು. ಆತನು ತನ್ನ ಸಾರ್ವಭೌಮ ಶಕ್ತಿಯಿಂದ ತನ್ನ ಸೃಷ್ಟಿಯ ಪೋಷಣೆಯನ್ನು ಮಾಡುತ್ತಲೇ ಇರುವನು. ಆತನು ತನ್ನ ಒದಗಿಸುವಿಕೆಯಿಂದ ತನ್ನ ವಿಮೋಚನಾ ಯೋಜನೆಯನ್ನು ನೆರವೇರಿಸುವದಕ್ಕೆ ಇತಿಹಾಸದುದ್ದಕ್ಕೂ ಕೆಲಸ ಮಾಡುತ್ತಿರುವನು.

## ಯೇಸು ಕ್ರಿಸ್ತನು

*ಮತ್ತಾಯ 20:28; ಅ.ಕೃತ್ಯ 4:12; ರೋಮಾ 5:10; 2 ಕೊರಿಂಥ 5:18-19; 1 ಯೋಹಾನ 2:2*

ಯೇಸು ಕ್ರಿಸ್ತನು ತ್ರೈಯೇಕತ್ವದ ನಿತ್ಯನಾದ ಎರಡನೆಯ ವ್ಯಕ್ತಿಯಾಗಿದ್ದು ಒಂದು ನಿಜವಾದ ಮಾನವ ಸ್ವಭಾವದೊಂದಿಗೆ ಅದ್ಭುತಕರವಾಗಿ ಗರ್ಭಧರಿಸಲ್ಪಟ್ಟು ಕನ್ಯೆಯಲ್ಲಿ ಜನಿಸುವ ಮೂಲಕ ಐಕ್ಯಗೊಳಿಸಲ್ಪಟ್ಟಿರುತ್ತಾನೆ. ಆತನು ತಂದೆಗೆ ಪರಿಪೂರ್ಣ ವಿಧೇಯವಾದ ಜೀವಿತವನ್ನು ನಡಿಸಿದನು ಮತ್ತು ಶಿಲುಬೆಯ ಮೇಲೆ ಅವರ ಬದಲಿ ಯಜ್ಞವಾಗಿ ಎಲ್ಲರಿಗೋಸ್ಕರ ಸ್ವಯಂಪ್ರೇರಿತನಾಗಿ ಮರಣಿಸಿದನು, ಹೀಗೆ ದೈವಿಕ ನ್ಯಾಯವನ್ನು ಸಂತೃಪ್ತಿಗೊಳಿಸಿದನು ಮತ್ತು ಆತನಲ್ಲಿ ಮಾತ್ರವೇ ನಂಬಿಕೆಯನ್ನು ಇಡುವಂಥ ಎಲ್ಲರಿಗೆ ರಕ್ಷಣೆ ಹಾಗೂ ನಿತ್ಯಜೀವಗಳನ್ನು ಸಂಪಾದಿಸಿಕೊಂಡನು. ಆತನು ಪರಲೋಕಕ್ಕೆ ಏರಿ ಹೋಗಿ ತಂದೆಯ ಬಲಪಾರ್ಶ್ವದಲ್ಲಿ ಕೂತುಕೊಂಡನು, ಅಲ್ಲಿದ್ದುಕೊಂಡು ಆತನು ದೇವರು ಮತ್ತು ಮನುಷ್ಯರಿಗೆ ಏಕೈಕ ಮಧ್ಯಸ್ಥನಾಗಿ ತನ್ನವರಿಗಾಗಿ ವಿಜ್ಞಾಪನೆಯನ್ನು ಮಾಡುತ್ತಲೇ ಇರುವನು. ಆತನು ಪುನಃ ಭೂಮಿಗೆ ಹಿಂದಿರುಗುವನು, ವೈಯಕ್ತಿಕವಾಗಿಯೂ ಕಾಣಿಸುವಂತೆಯೂ ಬರುವನು, ಇತಿಹಾಸವನ್ನು ಮತ್ತು ದೇವರ ನಿತ್ಯವಾದ ಯೋಜನೆಯನ್ನು ಸಮಾಪ್ತಿಗೆ ತರುವನು.

## ಪರಿಶುದ್ಧಾತ್ಮ ಮತ್ತು ಕ್ರೈಸ್ತೀಯ ಜೀವಿತ

*ಯೋಹಾನ 15:26, 16:8-11*

ಯೇಸು ಕ್ರಿಸ್ತನ ಸಂಗಡದ ನಿಜವಾದ ರಕ್ಷಣೆಯುಂಟು ಮಾಡುವ ಸಂಬಂಧದೊಂದಿಗೆ ಸ್ವಾಭಾವಿಕವಾಗಿ ಜೊತೆಗೂಡಿದ್ದಾಗಿ ಪರಿಶುದ್ಧತೆ ಮತ್ತು ವಿಧೇಯತೆಗಳನ್ನು ವಿಶ್ವಾಸಿಗಳು ತ್ರೈಯೇಕತ್ವದ ಮೂರನೆಯ ವ್ಯಕ್ತಿಯಾಗಿರುವ ಪವಿತ್ರಾತ್ಮನಿಗೆ ಅಧೀನಪಡಿಸಿಕೊಳ್ಳುವಾಗ ದೊರಕುತ್ತವೆ. ಆತನು ಮಾನವರಿಗೆ ಕ್ರಿಸ್ತನು ಮಾಡಿದ ರಕ್ಷಣೆಯ ಕೆಲಸವನ್ನು ಅನ್ವಯಗೊಳಿಸುವಂತೆ ತಂದೆ ಮತ್ತು ಮಗನಿಂದ ಈ ಲೋಕಕ್ಕೆ ಕಳುಹಿಸಲ್ಪಟ್ಟನು. ಆತನು ಪಾಪಿಗಳ ಮನಸ್ಸುಗಳಿಗೆ ಜ್ಞಾನೋದಯವುಂಟು ಮಾಡಿ, ತಮಗೆ ಒಬ್ಬ ರಕ್ಷಕನ ಅಗತ್ಯವಿದೆ ಎಂಬ ಜಾಗೃತಿಯನ್ನು ಅವರಲ್ಲಿ ಮೂಡಿಸುತ್ತಾನೆ ಮತ್ತು ಅವರನ್ನು ಹೊಸದಾಗಿ ಹುಟ್ಟುವಂತೆ ಮಾಡುತ್ತಾನೆ (ಹೊಸ ಜೀವನವನ್ನು ನೀಡುತ್ತಾನೆ). ರಕ್ಷಣೆಯನ್ನು ಹೊಂದುವ ಸಂದರ್ಭದಲ್ಲಿ ಆತನು ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಶಾಶ್ವತವಾಗಿ ನೆಲೆಗೊಂಡು ಅವರಿಗೆ ಭರವಸ, ಬಲ ಮತ್ತು ಜ್ಞಾನಗಳಿಗೆ ಮೂಲವಾಗುತ್ತಾನೆ, ಹಾಗೂ ಆತನು ವಿಶಿಷ್ಟವಾಗಿ ಪ್ರತಿಯೊಬ್ಬ ವಿಶ್ವಾಸಿಗೆ ಸಭೆಯ ಭಕ್ತಿವೃದ್ಧಿ ಮಾಡುವಂತೆ ವರಗಳನ್ನು ಅನುಗ್ರಹಿಸುತ್ತಾನೆ. ಪರಿಶುದ್ಧಾತ್ಮನು ಬೈಬಲನ್ನು ಅರ್ಥಮಾಡಿಕೊಳ್ಳುವಂತೆ ಮತ್ತು ಅನ್ವಯಿಸಿಕೊಳ್ಳುವಂತೆ ವಿಶ್ವಾಸಿಗಳಿಗೆ ಮಾರ್ಗದರ್ಶನ ನೀಡುತ್ತಾನೆ. ಆತನ ಶಕ್ತಿ ಮತ್ತು ನಿಯಂತ್ರಣಗಳನ್ನು ನಂಬಿಕೆಯಿಂದ ಅನ್ವಯಿಸಿಕೊಳ್ಳಲಾಗುತ್ತದೆ, ಕ್ರಿಸ್ತನಂತಹ ಗುಣಸ್ವಭಾವದಿಂದ ಜೀವನವನ್ನು ನಡಿಸಿ ತಂದೆಯ ಮಹಿಮೆಗೋಸ್ಕರ ಫಲವನ್ನು ನೀಡುವಂತೆ ವಿಶ್ವಾಸಿಗೆ ಸಾಧ್ಯವಾಗುವಂತೆ ಮಾಡುವನು.

## ಬೈಬಲ್

*2 ತಿಮೊಥೆ 3:16; 2 ಪೇತ್ರ 1:21*

ನಮ್ಮ ನಂಬಿಕೆಗೆ ಏಕೈಕ ತಳಹದಿಯು ಬೈಬಲ್ ಆಗಿದ್ದು, ಇದು ಹಳೆ ಮತ್ತು ಹೊಸ ಒಡಂಬಡಿಕೆಗಳ ಅರವತ್ತಾರು ಪುಸ್ತಕಗಳನ್ನು ಒಳಗೊಂಡಿದೆ. ಬೈಬಲ್ ಸಂಪೂರ್ಣವಾಗಿ ದೇವರಿಂದಲೇ ಬಂದದ್ದು, ಮತ್ತು ಅದು ಸಾಧನಗಳಾಗಿ ಆರಿಸಿಕೊಂಡ ಮನುಷ್ಯರ ಮುಖಾಂತರವಾಗಿ ಕೊಡಲ್ಪಟ್ಟಿತು ಎಂದು ನಂಬುತ್ತೇವೆ. ಬೈಬಲ್ ಹೀಗೆ ಒಂದೇ ಮತ್ತು ಅದೇ ವೇಳೆಯಲ್ಲಿ ದೇವರ ಅಧಿಕಾರದೊಂದಿಗೆ ಮಾತಾಡುತ್ತದೆ ಹಾಗೂ ಮಾನವ ಲೇಖಕರ ಹಿನ್ನಲೆಗಳನ್ನುಮ ಶೈಲಿಗಳನ್ನು ಮತ್ತು ಭಾಷಾ ಶೈಲಿಗಳನ್ನು ಪ್ರತಿಫಲಿಸುತ್ತದೆ. ನಾವು ಬೈಬಲ್ ದೋಷಾತೀತವಾದದ್ದು ಮತ್ತು ಮೂಲ ಹಸ್ತಪ್ರತಿಗಳಲ್ಲಿ ತಪ್ಪುಗಳಿಲ್ಲದ್ದು ಎಂದು ನಂಬುತ್ತೇವೆ. ಅವುಗಳು ವಿಶಿಷ್ಟ, ಪೂರ್ಣ ಮತ್ತು ನಂಬಿಕೆ ಹಾಗೂ ಆಚಾರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಅಂತಿಮ ಅಧಿಕಾರವಾಗಿವೆ, ಮತ್ತು ಬೇರೆ ಯಾವ ಬರಹಗಳೂ ದೇವರ ಪ್ರೇರಿತ ವಾಕ್ಯಕ್ಕೆ ಸಮಾನವಲ್ಲ.

## ರಕ್ಷಣೆ

ರೋಮಾ *3:23; 5:8;* ಎಫೆಸ *2:1, 8-9*

ಬೈಬಲಿನಲ್ಲಿ ದೇವರು ಪ್ರಕಟಣೆಯನ್ನು ನೀಡಿರುವದರ ಕೇಂದ್ರಿಯ ಉದ್ದೇಶವು ಜನರನ್ನು ತನ್ನೊಂದಿಗೆ ಅನ್ಯೋನ್ಯತೆಯಲ್ಲಿರುವಂತೆ ಕರೆ ನೀಡುವದೇ ಆಗಿರುತ್ತದೆ. ಮೂಲತಃ ದೇವರ ಸಂಗಡ ಅನ್ಯೋನ್ಯತೆಯನ್ನಿಟ್ಟುಕೊಳ್ಳಲು ಸೃಷ್ಟಿಸಲ್ಪಟ್ಟಿದ್ದ ಮನುಷ್ಯನು ದೇವರನ್ನ ಧಿಕ್ಕರಿಸಿದನು, ಸ್ವತಂತ್ರ ದಾರಿಯನ್ನು ಆರಿಸಿಕೊಂಡು ದೇವರಿಂದ ದೂರವಾದನು ಮತ್ತು ಆತನ ಸ್ವಭಾವದಲ್ಲಿ ಭ್ರಷ್ಟತೆಯನ್ನು ಅನುಭವಿಸಿ ದೇವರನ್ನು ಮೆಚ್ಚಿಸುವದಕ್ಕೆ ತನ್ನನ್ನು ಅಶಕ್ತನನ್ನಾಗಿ ಮಾಡಿಕೊಂಡನು. ಮನುಷ್ಯನ ಬೀಳುವಿಕೆಯು ಮಾನವ ಚರಿತ್ರೆಯ ಆರಂಭದಲ್ಲಿ ಸಂಭವಿಸಿತು ಮತ್ತು ಎಲ್ಲಾ ಮನುಷ್ಯರು ಅಂದಿನಿಂದ ಆ ಪರಿಣಾಮಗಳನ್ನು ಅನುಭವಿಸುತ್ತಲಿದ್ದಾರೆ ಮತ್ತು ಹೀಗೆ ಅವರು ರಕ್ಷಣೆಯುಂಟು ಮಾಡುವ ದೇವರ ಕೃಪೆಯ ಅಗತ್ಯತೆಯಲ್ಲಿದ್ದಾರೆ. ಹಾಗಾದರೆ ಮಾನವರ ರಕ್ಷಣೆಯು ಸಂಪೂರ್ಣವಾಗಿ ದೇವರ ಉಚಿತಾರ್ಥವಾದ ವರವೇ ಆಗಿದೆ, ಹೊರತು ಪೂರ್ತಿಯಾಗಿ ಅಥವಾ ಭಾಗಶಃವಾಗಲಿ ಮನುಷ್ಯನ ಕ್ರಿಯೆಗಳು ಅಥವಾ ಒಳ್ಳೇತನದ ಫಲಿತವಂತೂ ಅಲ್ಲವೇ ಅಲ್ಲ, ಹಾಗೂ ಅದನ್ನು ಪ್ರತಿಯೊಬ್ಬನು ಸ್ವತಃ ತಾನೇ ನಂಬಿಕೆಯಿಂದ ಸ್ವೀಕರಿಸಿಕೊಳ್ಳಬೇಕಾಗಿರುತ್ತದೆ. ದೇವರು ಯಾವದೇ ವ್ಯಕ್ತಿಯಲ್ಲಿ ತನ್ನ ರಕ್ಷಣೆಯ ಕೆಲಸವನ್ನು ಆರಂಭಿಸುವಾಗ, ಆತನು ಅದನ್ನು ಪೂರ್ಣ ಸಿದ್ಧಿಗೆ ತರುವ ತನಕವೂ ಮುಂದುವರೆಸುತ್ತೇನೆಂದು ವಾಗ್ದಾನವನ್ನು ಕೊಡುತ್ತಾನೆ.

## ಮಾನವನ ಅಂತ್ಯಸ್ಥಿತಿ

*1 ಥೆಸ 4:16-17;* ಇಬ್ರಿಯ *9:27*

ಮರಣವು ಪ್ರತಿಯೊಬ್ಬ ವ್ಯಕ್ತಿಯ ನಿತ್ಯತ್ವದ ಅಂತ್ಯಾವಸ್ಥೆಯನ್ನು ಮುದ್ರೆ ಹಾಕುತ್ತದೆ. ಯಾಕೆಂದರೆ ಎಲ್ಲಾ ಮಾನವರು ದೇಹದ ಪುನರುತ್ಥಾನವನ್ನು ಹೊಂದಿ ಆತ್ಮೀಕ ಲೋಕವನ್ನು ಸೇರುವರು, ಮತ್ತು ಪ್ರತಿಯೊಬ್ಬನ ಅಂತ್ಯವನ್ನು ಒಂದು ನ್ಯಾಯತೀರ್ಪು ನಿರ್ಧರಿಸುವುದು. ರಕ್ಷಣೆ ಹೊಂದದವರಿಗಾಗಿ ಒಂದು ನಿತ್ಯವಾದ ದಂಡನೆಯ ಸ್ಥಿತಿ ಮತ್ತು ರಕ್ಷಣೆ ಹೊಂದಿದವರಿಗೆ ನಿತ್ಯವಾದ ಆಶೀರ್ವಾದದ ಸ್ಥಿತಿಯು ಇರುತ್ತದೆ. ಕ್ರಿಸ್ತನಲ್ಲಿ ವಿಶ್ವಾಸವನ್ನಿಟ್ಟಿರುವವರು ದೇವರೊಂದಿಗೆ ನಿತ್ಯವಾದ ಸಹವಾಸವನ್ನು ಪಡೆದುಕೊಳ್ಳುವರು ಮತ್ತು ಈ ಜೀವಿತದಲ್ಲಿ ಮಾಡಿದ ಕ್ರಿಯೆಗಳಿಗೆ ಪ್ರತಿಫಲವನ್ನು ಪಡೆಯುವರು.

## ಸಭೆ

ಅ.ಕೃತ್ಯ *2:42;* ರೋಮಾ *12:1-6*

ಯೇಸು ಕ್ರಿಸ್ತನೊಂದಿಗೆ ಐಕ್ಯಗೊಳ್ಳುವದರ ಫಲಿತವಾಗಿ ಎಲ್ಲಾ ವಿಶ್ವಾಸಿಗಳು ಆತನ ದೇಹವಾದ ಸಭೆಯ ಅಂಗಗಳಾಗುವರು. ಒಂದೇ ಸತ್ಯವಾದ ಸಾರ್ವತ್ರಿಕ ಸಭೆಯಿದ್ದು ಯೇಸು ಕ್ರಿಸ್ತನನ್ನು ರಕ್ಷಕನೂ ಕರ್ತನೂ ಎಂದು ವಿಶ್ವಾಸಿಸಿರುವ ಸಕಲ ವಿಶ್ವಾಸಿಗಳನ್ನು ಒಳಗೊಂಡಿರುತ್ತದೆ. ಆರಾಧನೆ, ಪ್ರಾರ್ಥನೆ, ವಾಕ್ಯದ ಬೋಧನೆ, ಕ್ರಿಸ್ತನಿಂದ ಸ್ಥಾಪಿಸಲ್ಪಟ್ಟಿರುವ ವಿಧಿಗಳಾದ ದೀಕ್ಷಾಸ್ನಾನ ಮತ್ತು ಕರ್ತನ ಭೋಜನಗಳ ಆಚರಣೆಗಳಿಗಾಗಿ, ಅನ್ಯೋನ್ಯತೆ, ಬೆಳವಣಿಗೆ ಮತ್ತು ವರಗಳು ಹಾಗೂ ತಲಾಂತುಗಳ ಬಳಕೆಯ ಮೂಲಕ ಹಾಗೂ ಲೋಕಕ್ಕೆ ಸುವಾರ್ತೆಯನ್ನು ಸಾರುವ ಮೂಲಕ ದೇಹದ ಅಭಿವೃದ್ಧಿಗಾಗಿ ಸೇವೆ ಮಾಡುವಂತೆ ಒಟ್ಟಾಗಿ ಕೂಡಿ ಬರಬೇಕೆಂದು ಬೈಬಲ್ ವಿಶ್ವಾಸಿಗಳಿಗೆ ಆಜ್ಞಾಪಿಸುತ್ತದೆ. ದೇವರ ಜನರು ನಿಯತ ಕ್ರಮವಾಗಿ ಈ ಆಜ್ಞೆಗೆ ವಿಧೇಯರಾಗುವ ಮೂಲಕ ಎಲ್ಲೆಲ್ಲಿ ಕೂಡಿ ಬರುತ್ತಾರೋ, ಅಲ್ಲಿ ಒಂದು ಸ್ಥಳೀಯ ಸಭೆಯು ಇರುತ್ತದೆ. ಹಿರಿಯರು ಮತ್ತು ಇತರ ಬೆಂಬಲಿಸುವ ನಾಯಕರ ಮೂಲಕವಾಗಿ, ಅದರ ಸದಸ್ಯರು ಪ್ರೀತಿ ಮತ್ತು ಐಕ್ಯತೆಯಲ್ಲಿ ಒಟ್ಟಾಗಿ ಕೆಲಸ ಮಾಡುವರು, ದೇವರ ಮಹಿಮೆಗಾಗಿ ಕ್ರಿಸ್ತನನ್ನು ಘನಪಡಿಸಲು ಹಾಗೂ ಕ್ರಿಸ್ತನ ಮಹಾ ಆದೇಶವನ್ನು ನೆರವೇರಿಸಬೇಕೆಂಬ ಅಂತಿಮ ಉದ್ದೇಶವನ್ನು ಹೊಂದಿರುತ್ತಾರೆ.

## ನಂಬಿಕೆ ಮತ್ತು ಆಚಾರ

*1 ಕೊರಿಂಥ 10:24, 31; 2 ತಿಮೊಥೆ 3:16-17*

ನಂಬಿಕೆ ಮತ್ತು ಆಚಾರದ ವಿಷಯಗಳಲ್ಲಿ ಅಂತಿಮ ಅಧಿಕಾರವು ಬೈಬಲ್ ಹೊಂದಿರುತ್ತದೆ. ಬೈಬಲ್ ಯಾವ ವಿಷಯಗಳಲ್ಲಿ ಮೌನವಾಗಿರುತ್ತದೋ ಆ ವಿಷಯಗಳಲ್ಲಿ ವ್ಯಕ್ತಿಗಳ ಮನಸ್ಸಾಕ್ಷಿಯನ್ನು ಅಧೀನಪಡಿಸಲು ಸಾಧ್ಯವಿಲ್ಲ. ಬದಲಾಗಿ, ಪ್ರತಿಯೊಬ್ಬ ವಿಶ್ವಾಸಿಯು ಆ ವಿಷಯಗಳಲ್ಲಿ ಕರ್ತನು ನಡಿಸುವಂತೆ ಮಾಡತಕ್ಕದ್ದು, ಅಂತಿಮವಾಗಿ ಅವನು ಅಥವಾ ಅವಳು ಆತನಿಗೆ ಮಾತ್ರವೇ ಉತ್ತರ ಕೊಡಬೇಕಷ್ಟೆ.

Journey to Reach Your World - Journey Stage 1
Travel Journal and Tools
English Language
***Strategic Impact***
*P.O. Box 1901, Denton, TX 76202*
*www.StrategicImpactInternational.com*
© Copyright, Strategic Impact. No changes may be made to this manual, but you may freely copy and distribute without making changes to content.